ಸಂಪುಟ: 13 Volume | ಸಂಚಿಕೆ: 301 Issue | ಪುಟಗಳು 08 Pages | ಸೋಮವಾರ 19 ಜನವರಿ 2026 | ₹6 | PRGINO.120927 (RNINO:KARKAN/2011/48371) | BDR/054/2026-2027 | mallammanudi@gmail.com | www.mallammanudi.in | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

MN ಸತ್ಯಮೇವ ಜಯತೆ
ಕನ್ನಡ ಕಿರಣ
ಸಂಪಾದಕರು: ರಮೇಶ ರೆಡ್ಡಿ
Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

**ಬೆಳಗು**

ಮಾತುಗಳು ಪರಸ್ಪರಬೇರ್ಪಡಿಸಲು ಇರುವುದಲ್ಲ, ಪರಸ್ಪರ ಸೇರಿಸಲು ಇರುವುದಾಗಿದೆ.

–ಮಹಾತ್ಮ ಗಾಂಧೀಜಿ

# ಬೀದರ್ ಜಿಲ್ಲಾ ಸಾಂಸ್ಕೃತಿಕ ಸಂಘ

## ಬೆಂಗಳೂರು ಸಾಂಸ್ಕೃತಿಕ, ಸ್ನೇಹ, ಸಹಕಾರಕ್ಕೆ ವೇದಿಕೆ

• ಮಲ್ಲಮ್ಮ ನುಡಿ ವಾರ್ತೆ ಬೀದರ್

ಎಲ್ಲಿಯ ಬೀದರ್..? ಎಲ್ಲಿನ ಬೆಂಗಳೂರು..?! ಅಜಗಜಾಂತರ ದೂರವಿದ್ದರೂ ಬೀದರ್ ನಾಗರೀಕರ ಮನಸ್ಸುಗಳು ಮಾತ್ರ ಬಹಳ ಹತ್ತಿರ. ಬೆಂಗಳೂರಿನಲ್ಲಿ ನೋಂದಣಿಯಾಗಿರುವ ಬೀದರ್ ಜಿಲ್ಲಾ ಸಾಂಸ್ಕೃತಿಕ ಸಂಘವು ಅದರ ಹೆಸರೇ ಹೇಳುವಂತೆ, ಬೀದರ್‌ನಲ್ಲಿ ಹುಟ್ಟಿ ಬೆಂಗಳೂರಿನಲ್ಲಿ ನೆಲೆನಿಂತು ಬದುಕು ಕಟ್ಟಿ–ಕೊಂಡ ಬೀದರ್ ಬಾಂಧವರಿಗಾಗಿಯೇ ಹಗಲಿರುಳೂ ಶ್ರಮಿಸುತ್ತಿದೆ. ಬೀದರ್ ಜನರ ವೈವಿಧ್ಯಮಯ ಹಾಗೂ ಶ್ರೀಮಂತ ಸಂಸ್ಕೃತಿಗೆ ಸಾಕ್ಷಿಯಾಗಿದೆ.

### ಸಂಘ ನಡೆದು ಬಂದ ದಾರಿ

ಎಲ್ಲೋ ಹುಟ್ಟುತ್ತೇವೆ. ಎಲ್ಲೋ ಬೆಳೆದು ಜೀವನ ಸಾಗಿಸುತ್ತೇವೆ. ಒಂದು ಹಂತಕ್ಕೆ ಬಂದ ಬಳಿಕ ಎಲ್ಲವನ್ನೂ ಮರೆಯುತ್ತೇವೆ. ಆದರೆ ಹುಟ್ಟಿಬಂದ ಊರು, ಅಲ್ಲಿನ ಪರಿಸರ ಮತ್ತು ಸ್ನೇಹಪರ ಬಾಂಧವ್ಯವನ್ನು ಎಂದೆಂದಿಗೂ ಜೀವಂತವಾಗಿ ಮುಂದುವರಿಸಿಕೊಂಡು ಬರುತ್ತಿರುವುದು ಬೀದರ್ ಜಿಲ್ಲಾ ಸಾಂಸ್ಕೃತಿಕ ಸಂಘ ಎಂದರೆ ತಪ್ಪಾಗ ಲಾರದು. ಬೀದರ್ ಜಿಲ್ಲೆಯಿಂದ ಬಂದು ಬೆಂಗಳೂರಿನ ವಿವಿಧ ಭಾಗಗಳಲ್ಲಿ ವಾಸವಾಗಿರುವ ಹಾಗೂ ಬೇರೆ ಬೇರೆ ಕಾರ್ಯಗಳಲ್ಲಿ ತೊಡಗಿರುವ ಕೆಲವು ಜನರು 1995– 96ರಲ್ಲಿ ಬೀದರ್ ಬಳಗ ಎಂಬ ಹೆಸರಿನ ಗುಂಪನ್ನು ರಚಿಸಿದ್ದರು. ಈ ಸಮೂಹದಿಂದ ಬೀದರ್ ಜಿಲ್ಲೆಯ ಸಾಂಸ್ಕೃತಿಕ ಹಬ್ಬವಾದ ಹೋಳಿ ಹಬ್ಬವನ್ನು ಬೀದರ್ ಮಾದರಿಯಲ್ಲಿ ಆಚರಿಸುವ ಮೂಲಕ ಬೆಂಗಳೂರಿನಲ್ಲಿ ವಾಸವಾಗಿರುವ ಬೀದರ್ ಜನರನ್ನು ಒಟ್ಟುಗೂಡಿಸುವ ದೂರದೃಷ್ಟಿ ಹೊಂದಿದ್ದರು. ಅವರ ಕಷ್ಟ–ಸುಖಗಳಿಗೆ ಸ್ಪಂದಿಸುವ ಕಾರ್ಯಗಳನ್ನೂ ಹಮ್ಮಿಕೊಳ್ಳುತ್ತಿದ್ದರು. ಆನಂತರ 2000–2001ರಲ್ಲಿ ಅಂದಿನ ಶಾಸಕರಾಗಿದ್ದ ಸುಭಾಷ್ ಕಲ್ಲೂರ್, ಬಸವರಾಜ ಪಾಟೀಲ್ ಅಟ್ಟೂರ್, ಎಂಜಿ ಮೂಳೆ, ಪ್ರಕಾಶ್ ಪ್ರಕಾಶ್ ಕಂಡ್ರೆ, ಗುಂಡಪ್ಪ ವಕೀಲ್, ರಾಜೇಂದ್ರ ವರ್ಮ, ರಮೇಶ್ ಕುಮಾರ್ ಪಾಂಡೆ ಮತ್ತು ಸರ್ಕಾರದಲ್ಲಿ ಉನ್ನತ ಅಧಿಕಾರಿಗಳಾದ ಮೋತಿರಾಮ್ ಚೌದ್ರಿ, ಬಾಬುರಾವ್ ಮುಡುಬಿ, ರಾಘವೇಂದ್ರ ಔರಾದ್ಕರ್, ಶಂಕರ್ ಪಾಟೀಲ್ ಹಾಗೂ ನಮ್ಮ ಜಿಲ್ಲೆಯ ಅಂದಿನ ನ್ಯಾಯವಾದಿಗಳು, ವೈದ್ಯರು, ಇಂಜಿನಿಯರ್ಗಳು ಹಾಗೂ ಸರ್ಕಾರಿ ಅಧಿಕಾರಿಗಳು, ಜಿಲ್ಲೆಯ ನಾಗರಿಕರ ಅಭಿಲಾಷೆಯಂತೆ ಸಂಘವನ್ನು ಸ್ಥಾಪಿಸಲು ತೀರ್ಮಾನಿಸಲಾಯಿತು. ಅದರಂತೆ, ಬೀದರ್ ಜಿಲ್ಲೆಯ ನಾಗರಿಕರೆಲ್ಲರೂ ದಿನಾಂಕ: 10 /12/ 2000 ರಂದು ಹೈದರಾಬಾದ್ ಕರ್ನಾಟಕ ಸಂಸ್ಥೆಯ ಕಾಲೇಜ್ ಆವರಣದಲ್ಲಿ ಸಮಾವೇಶಗೊಂಡು ಆ ಸಮಾವೇಶದಲ್ಲಿ ಅಂದಿನ ಪೊಲೀಸ್ ಐಜಿಪಿ ಯಾಗಿದ್ದ ಶ್ರೀ ಮೋತಿರಾಮ್ ಚೌಧರಿಯವರನ್ನು ಅಧ್ಯಕ್ಷರನ್ನಾಗಿ, ಶ್ರೀ ಸೋಮನಾಥ್ ಸೋಲಾಪುರ, ಉಪಾಧ್ಯಕ್ಷರು, ಶ್ರೀ ಬಸವರಾಜ್ ಕಣಜಿ ಉಪಾಧ್ಯಕ್ಷರು ಶ್ರೀ ಜಗನ್ನಾಥ್ ಪಂಚಾಲಿ ಉಪಾಧ್ಯಕ್ಷರು ಶ್ರೀ ರಾಮ್ ಜಿ ಲಿಂಬಾರೆ, ಉಪಾಧ್ಯಕ್ಷರು, ಶ್ರೀ ಪ್ರಕಾಶ್ ಎಂ ಸ್ವಾಮಿ, ಉಪಾಧ್ಯಕ್ಷರು ಕಾಶಿನಾಥ್ ಮಾಶೆಟ್ಟಿ ಪ್ರಧಾನ ಕಾರ್ಯದರ್ಶಿಗಳು, ಶ್ರೀ ಕಲ್ಯಾಣರಾವ್ ಸಲಗರ, ಶ್ರೀ ಎಸ್‌ಎಂ ಸೋಲಂಕಿ, ಸಂಘಟನಾ ಕಾರ್ಯದರ್ಶಿ, ಶ್ರೀಮತಿ ಶಾರದಾ ಜತ್ತಿ, ಸಂಘಟನಾ ಕಾರ್ಯದರ್ಶಿ, ಮುಂತಾದವರನ್ನು ಒಳಗೊಂಡ ತಂಡವು ಬೀದರ್ ಜಿಲ್ಲಾ ಸಂಸ್ಕೃತ ಸಂಘವನ್ನು ಸ್ಥಾಪಿಸಿ, ದಿನಾಂಕ 15, ಮಾರ್ಚ್, 2001 ರಂದು ನೋಂದಣಿಯನ್ನೂ ಮಾಡಿಸಲಾಯಿತು.

### ಸಂಘದ ಪ್ರಮುಖ ಕಾರ್ಯಕ್ರಮಗಳು

ಈ ಸಂಘವು ಪ್ರಾರಂಭವಾದಾಗಿನಿಂದ ಪ್ರತಿ ತಿಂಗಳು ಶ್ರೀಸುಭಾಷ್‌ಕಲ್ಲೂರ್ ಅವರ ಕೊಠಡಿಯಲ್ಲಿ ಸಭೆ ಸೇರಿ ಸಂಘದ ಏಳಿಗೆ ಹಾಗೂ ಬೀದರ್ ಜನರ ಕಷ್ಟ ಸುಖಗಳಿಗೆ ಸ್ಪಂದಿಸುವ ಕೆಲಸವನ್ನು ಮಾಡಲಾಗುತ್ತಿತ್ತು. ಈ ಅವಧಿಯಲ್ಲಿ ಹಲವಾರು ಜನಪ್ರಿಯ ಕಾರ್ಯಕ್ರಮಗಳ ಜೊತೆಗೆ ಸಾಂದರ್ಭಿಕ ಹಬ್ಬ ಹರಿದಿನಗಳನ್ನು ಆಚರಿಸಲಾಗುತ್ತಿತ್ತು. ಸಂಘದ ವಿಶೇಷ ಕಾರ್ಯಕ್ರಮಗಳನ್ನು ಮೆಚ್ಚಿದ್ದ ಶ್ರೀಮತಿ ಗುರಮ್ಮ ಸಿದ್ದಾರೆಡ್ಡಿ ಅವರು ಬೀದರ್‌ನಲ್ಲಿ ಸಂಘದ ಶಾಖೆಯನ್ನು ಆರಂಭಿಸುವುದಕ್ಕಾಗಿ 30\40 ಅಡಿ ನಿವೇಶನವನ್ನು ಸಂಘಕ್ಕೆ ಕಾಣಿಕೆಯಾಗಿ ನೀಡಿ, ಔದಾರ್ಯ ಮೆರೆದಿದ್ದು ದಾಖಲಾರ್ಹ ವಿಷಯ. ಬಳಿಕ ಶ್ರೀ ಮೋತಿರಾಮ ಚೌದ್ರಿ ಅವರ ಅವಧಿ ಮುಗಿದ ಬಳಿಕ ಶ್ರೀ ರಾಜಶೇಖರ್ ಕಮ್ಮ ಅವರನ್ನು ಸಂಘದ ಅಧ್ಯಕ್ಷರನ್ನಾಗಿ ಹಾಗೂ ಇತರೆ ಪದಾಧಿಕಾರಿಗಳನ್ನು ನೇಮಕ ಮಾಡಲಾಯಿತು. ಸಂಘದ ಕಾರ್ಯ ಚಟುವಟಿಕೆಗಳನ್ನು ಮುಂದುವರಿಸಲು ಸಂಘದ ವಿವಿಧ ಸದಸ್ಯರ ಮನೆಯಲ್ಲಿ ಸಭೆ ಸೇರಲಾಗುತ್ತಿತ್ತು. ಆದ್ದರಿಂದ ಸಂಘದ ಕಚೇರಿಯನ್ನು ಸ್ಥಾಪಿಸಲು ತೀರ್ಮಾನಿಸಲಾಯಿತು. ಅದರಂತೆ ಮೊದಲಿಗೆ ಶೇಷಾದ್ರಿಪುರಂನಲ್ಲಿ ಬಾಡಿ ಕೊಠಡಿಯನ್ನು ಪಡೆದು ಸಂಘದ ಕಾರ್ಯ ಚಟುವಟಿಗಳನ್ನು ನಡೆಸಲಾಗುತ್ತಿತ್ತು. ಸಂಘದ ಕಚೇರಿ ಕೊಠಡಿಯ ಬಾಡಿಗೆಯನ್ನು ಬರಿಸುವುದನ್ನು ತಪ್ಪಿಸೋದಕ್ಕಾಗಿ ಶ್ರೀ ಜಗನ್ನಾಥ್ ತಮ್ಮ ಕಚೇರಿಯಲ್ಲಿ ಒಂದು ಕೋಣೆಯನ್ನು ಸಂಘದ ಕಾರ್ಯ ಚಟುವಟಿಕೆಗಳನ್ನು ನಡೆಸುವುದಕ್ಕಾಗಿ ಅನುವು ಮಾಡಿಕೊಟ್ಟರು. ಬಳಿಕ ಬಸವ ಸಮಿತಿಯ ಸಹಯೋಗದೊಂದಿಗೆ ಮುಖ್ಯವಾಗಿ ಬಸವ ಸಮಿತಿಯ ಅಧ್ಯಕ್ಷರಾದ ಶ್ರೀ ಅರವಿಂದ್ ಜತ್ತಿ ಅವರ ಸಹಕಾರದಿಂದ ಬಸವ ಸಮಿತಿಯ ಅರವಿನ ಮನೆಯಲ್ಲಿ ಸಂಘದ ನಿರಂತರ ಸಭೆಗಳನ್ನು ನಡೆಸಲಾಗುತ್ತಿತ್ತು.

ಸಂಘದ ನೇತೃತ್ವದಲ್ಲಿ ಬೀದರ್ ಜಿಲ್ಲೆಯ ನಾಗರಿಕರ ಹಾಗೂ ವಿದ್ಯಾರ್ಥಿಗಳ ಪರ ಹಲವಾರು ಕೆಲಸ ಕಾರ್ಯಗಳನ್ನು ಯಶಸ್ವಿಯಾಗಿ ನೆರವೇರಿಸಲಾಗಿದೆ. ಬೀದರ್ ಜಿಲ್ಲೆಯ ವಿದ್ಯಾರ್ಥಿಗಳಿಗೆ ಸಿಇಟಿ, ನೇಮಕಾತಿ ತರಬೇತಿಗಳನ್ನು ನೀಡಲಾಗಿದೆ. ಸಂಘದ ಕೆಲವು ಆಸಕ್ತರು ಸೇರಿ ಬೆಂಗಳೂರಿನಲ್ಲಿ ಬೀದರ್ ಜಿಲ್ಲೆಯ ನಿವಾಸಿಗಳ ಬಡಾವಣೆಯನ್ನು ಮಾಡಬೇಕೆಂಬ ಸದುದ್ದೇಶದಿಂದ 2006ರಲ್ಲಿ ಯಲಹಂಕ ಬಳಿ ಇರುವ ಹುಣಸಮಾರಹಳ್ಳಿಯಲ್ಲಿ ಅಭಿವೃದ್ಧಿ ಪಡಿಸಲಾದ 25 ನಿವೇಶನಗಳು ಹಾಗೂ ಒಂದೂವರೆ ಎಕರೆ ಜಮೀನನ್ನು ಖರೀದಿ ಮಾಡಿ, ಆಸಕ್ತರಿಗೆ ಕಡಿಮೆ ದರದಲ್ಲಿ ಹಂಚಿದರು. ಅವರಿಂದಲೂ ಒಂದಿಷ್ಟು ಸಂಘಕ್ಕೆ ಧನ ಸಹಾಯ ಪಡೆದು, ಸಂಘದ ಹೆಸರಿನಲ್ಲಿ ಸುಮಾರು ನಾಲ್ಕು ನಿವೇಶನಗಳನ್ನು ನೋಂದಣಿ ಮಾಡಿಸಿದ್ದನ್ನು ಸಂಘದ ಹಿರಿಯ ಸದಸ್ಯರು ಇಂದಿಗೂ ಕೃತಜ್ಞತಾ ಭಾವದಿಂದ ಕಮ್ಮ ಅವರ ಕಾರ್ಯವನ್ನು ಸ್ಮರಿಸುತ್ತಾರೆ. ಈ ನಿವೇಶನಗಳ ಇಂದಿನ ಮಾರುಕಟ್ಟೆ ಬೆಲೆ ಸುಮಾರು ಕೋಟಿಗಳಲ್ಲಿರುತ್ತದೆ..! ಈ ಕಾರ್ಯವು ಅತ್ಯಂತ ಶ್ಲಾಘನೀಯ ಕಾರ್ಯವಾಗಿದ್ದು, ಸದಸ್ಯರು ಸದಾ ಸ್ಮರಿಸುವಂತಾಗಿದೆ.

### ಬಸವ ಸಮಿತಿಯಲ್ಲೂ ಸಭೆ

ಈಗಾಗಲೇ ಹೇಳಿದಂತೆ ಬೆಂಗಳೂರಿನಲ್ಲಿ ವಾಸವಾಗಿರುವ ಹಾಗೂ ಬೆಂಗಳೂರಿಗೆ ಕೆಲಸ ಕಾರ್ಯದ ನಿಮಿತ್ಯ ಬರುವ ನಾಗರಿಕರ ಕಷ್ಟಕಾರ್ಪಣ್ಯಗಳಿಗೆ ಸಂಘವು ಸ್ಪಂದಿಸುತ್ತಲೇ ಬಂದಿದೆ. ಈ ಹಿನ್ನೆಲೆಯಲ್ಲಿ ಬೀದರ್ ಜಿಲ್ಲೆಯ ಅಸಂಖ್ಯ ನಾಗರಿಕರು ಸಂಘದ ಸಹಾಯವನ್ನು ಪಡೆದು ಸಾರ್ಥಕ ಜೀವನ ನಡೆಸಿದ್ದಾರೆ.




### ಸಂಘದ ಪ್ರಮುಖ ಧ್ಯೇಯೋದ್ದೇಶಗಳು

1) ಬೆಂಗಳೂರಿನಲ್ಲಿ ಬೀದರ್ ಜಿಲ್ಲೆಯ ಸಾಹಿತ್ಯ, ಸಂಸ್ಕೃತಿ, ಕಲೆಯನ್ನು ಉಳಿಸಿ, ಬೆಳೆಸುವುದು. ಎಲ್ಲರೂ ಏಕತೆಯಿಂದ ಬಾಳಲು ಯೋಜನೆಗಳನ್ನು ರೂಪಿಸಿ, ಕಾರ್ಯರೂಪಕ್ಕೆ ತರುವುದು.

2) ಬೆಂಗಳೂರು ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ ವಾಸವಾಗಿರುವ ಬೀದರಿನ ಎಲ್ಲ ಬಂಧುಗಳನ್ನು ಒಂದುಗೂಡಿಸುವುದು.

3) ಬೀದರಿನ ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ವಸತಿ ಸೌಲಭ್ಯಗಳಿಗಾಗಿ ಮಾರ್ಗದರ್ಶನ ನೀಡುವುದು, ವಸತಿ / ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸುವುದು.

4) ಬೀದರದಿಂದ ಬೆಂಗಳೂರಿಗೆ ಬರುವ ಬೀದರ ಬಂಧುಗಳ ಉಪಯೋಗಕ್ಕಾಗಿ ಬೆಂಗಳೂರಿನಲ್ಲಿ "ಬೀದರ್ ಭವನ" ನಿರ್ಮಿಸುವುದು.

5) ಸಂಘದ ಸದಸ್ಯರ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳವುದು.

6) ಬೆಂಗಳೂರಿನಲ್ಲಿ, ಬೀದರ್‌ನಲ್ಲಿ ಕರ್ನಾಟಕದ ಒಳ ಹೊರಗಿನ, ಹೊರರಾಷ್ಟ್ರಗಳಲ್ಲಿರುವ ಬೀದರಿನ ಎಲ್ಲರನ್ನು ಒಂದುಗೂಡಿಸಿ ಎಲ್ಲ ಸದಸ್ಯರ ಸರ್ವಾಂಗೀಣ ಅಭಿವೃದ್ಧಿಗಾಗಿ ಸಂಪರ್ಕ ಸೇತುವೆಯಾಗಿ ಕೆಲಸ ಮಾಡುವುದು.




### ಸಂಘದಿಂದ ಹಮ್ಮಿಕೊಂಡಿದ್ದ ಮಹತ್ವದ ಕಾರ್ಯಕ್ರಮಗಳು

◆ ಸಂಘದ ಉದ್ಘಾಟನಾ ಕಾರ್ಯಕ್ರಮ ನಡೆದದ್ದು 2001ರಲ್ಲಿ. ಇದರ ಅಧ್ಯಕ್ಷತೆ ಸಚಿವರಾಗಿದ್ದ ಶ್ರೀ ಬಸವರಾಜ್ ಪಾಟೀಲ್ ಹುಮ್ನಾಬಾದ್ ವಹಿಸಿದ್ದರು. ಸ್ಥಳ: ಎಚ್ ಕೆ ಇ ಕಾಲೇಜಿನ ಆವರಣ.

◆ 2002ರಲ್ಲಿ ಹೋಳಿ ಹಬ್ಬದ ಆಚರಣೆ. ಸ್ಥಳ: ಶಿವ ಮಂದಿರ ಇಂದಿರಾನಗರ, ಬೆಂಗಳೂರು.

◆ ಬೀದರ್ ಜಿಲ್ಲಾ ನಾಗರಿಕರ ಸಮಾವೇಶ ಅಧ್ಯಕ್ಷತೆ: ಶ್ರೀ ಮಿರಾಜುದ್ದೀನ್ ಪಟೇಲ್, ಸಚಿವರು ಕರ್ನಾಟಕ ಸರ್ಕಾರ ಸ್ಥಳ: ಯವನಿಕ ಸಭಾಂಗಣ ಬೆಂಗಳೂರು.

◆ ಎಳ್ಳ ಅಮವಾಸ್ಯೆ ಹಾಗೂ ಸಂಕ್ರಾಂತಿ ಹಬ್ಬದ ಆಚರಣೆ. ಅಧ್ಯಕ್ಷತೆ: ಶ್ರೀ ಈಶ್ವರ ಖಂಡ್ರೆ ಹಾಗೂ ಇತರ ಶಾಸಕರು. ಸ್ಥಳ: ಸಂಘದ ನಿವೇಶನ ಹುಣಸಮಾರನಹಳ್ಳಿ.

◆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ "ಸುಗ್ಗಿ ಹುಗ್ಗಿ" ಕಾರ್ಯಕ್ರಮ. ಅಧ್ಯಕ್ಷತೆ: ಶ್ರೀ ಧರ್ಮಸಿಂಗ್, ಮಾಜಿ ಮುಖ್ಯಮಂತ್ರಿ. ಸ್ಥಳ: ಸಂಘದ ನಿವೇಶನ ಹುಣಸುಮಾರನಹಳ್ಳಿ.

◆ ಎಳ್ಳ ಅಮವಾಸ್ಯೆ ಹಾಗೂ ಸಂಕ್ರಾಂತಿ ಹಬ್ಬದ ಆಚರಣೆ. ಅಧ್ಯಕ್ಷತೆ: ಶ್ರೀ ಭಗವಂತ್ ಕೂಬಾ ಕೇಂದ್ರ ರಾಜ್ಯ ಮಂತ್ರಿಗಳು ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಾದ ಶ್ರೀ ಎನ್ಕೆ ಪಾಟೀಲ್, ಶ್ರೀ ಅರವಿಂದ್ ಜತ್ತಿ ಹಾಗೂ ಜಿಲ್ಲೆಯ ಇತರೆ ಮುಖಂಡರು. ಸ್ಥಳ: ಸಂಘದ ನಿವೇಶನ ಹುಣಸುಮಾರನಹಳ್ಳಿ. ಪ್ರಸ್ತುತ ಈ ಸಾಲಿನಲ್ಲಿ ಸಂಘದ ನಿವೇಶನಗಳ ಇ ಖಾತೆಯನ್ನು ಮಾಡಿಸಿ, ಸಂಘದ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆ ಮಾಡಿಸಿ ಸಂಘದ ನೋಂದಣಿಯನ್ನು ತಹಲ್ವರೆಗೆ ನವಕರಿಸಲಾಯಿತು. ಇತ್ತೀಚಿನ ದಿನಗಳಲ್ಲಿ ಸಂಘದ ನಿವೇಶನದಲ್ಲಿ ಸಂಘದ ಕಚೇರಿ ಕಟ್ಟಡ ನಿರ್ಮಾಣ ಕಾರ್ಯ ಪ್ರಾರಂಭಿಸಲಾಗಿದೆ.

**ಪ್ರಸ್ತುತ ಮನವಿ:** ಇದೇ ತಿಂಗಳ 18ನೇ ತಾರೀಖಿನಂದು ಬೆಂಗಳೂರಿನ ಹುಣಸಮಾರನಹಳ್ಳಿಯಲ್ಲಿರುವ ಸಂಘದ ನಿವೇಶನದಲ್ಲಿ ಎಳ್ಳಮಾವಾಸ್ಯೆ ಹಾಗೂ ಸಂಕ್ರಾಂತಿ ಹಬ್ಬದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ಕಾರ್ಯ ಕ್ರಮದಲ್ಲಿ ಖ್ಯಾತ ಗಾಯಕರು ಹಾಗೂ ಕಲಾವಿದರು ಭಾಗವಹಿಸುತ್ತಿದ್ದು, ಬೆಂಗಳೂರಿನಲ್ಲಿ ವಾಸವಾಗಿರುವ ಸಮಸ್ತ ಬೀದರ್ ಜಿಲ್ಲೆಯ ನಾಗರಿಕರೂ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ಕೋರಿದೆ.



### ರಾಜಶೇಖರ್; ಸಂಘದ ಯಶಸ್ಸಿನ ಶ್ರಮದ ಶಕ್ತಿ

ಕಾರುಣ್ಯವನ್ನೇ ಒಡಲಲ್ಲಿರಿಸಿಕೊಂಡು ಸಂಘಟನೆಯನ್ನೇ ಉಸಿರಾಗಿಸಿಕೊಂಡಿರುವ ಶ್ರೀ ರಾಜಶೇಖರ್ ಕಮ್ಮ ಅವರು, ಬೀದರ್ ಜಿಲ್ಲೆಯ ಜನರ ಸರ್ವಾಂಗೀಣ ಪ್ರಗತಿಯನ್ನೇ ಉಸಿರಾಗಿಸಿಕೊಂಡವರು. ಜನ ಸಾಮಾನ್ಯರಾಗಿರಲಿ, ವಿದ್ಯಾರ್ಥಿಗಳಾಗಿರಲಿ ಯಾರೇ ಆಗಿರಲಿ ದೂರದ ಬೀದರ್‌ನಿಂದ ಬೆಂಗಳೂರಿಗೆ ಬಂದಾಗ ಇಲ್ಲಿ ಎಲ್ಲಾ ಗೊಂದಲ, ಅಯೋಮಯ ಅನಿಸುವುದು ಸಹಜ. ತಮ್ಮಂಥವರು ಅಂಥ ಕಷ್ಟಪಟ್ಟಿದ್ದು ಸಾಕು. ತಾವು ಈ ಹಂತಕ್ಕೆ ಬಂದಬಳಿಕವೂ ತಮ್ಮ ಬೀದರ್‌ನ ಜನತೆ ಆ ಕಷ್ಟಕೋಟಲೆಗೆ ಸಿಲುಕಬಾರದು ಎಂಬ ಸದುದ್ದೇಶದಿಂದ ಸಂಘ ಕಟ್ಟಿ ಬೆಳೆಸಿದವರಲ್ಲಿ ಪ್ರಮು ಖರಾಗಿದ್ದಾರೆ. ಅವರ ಶ್ರಮ, ಪ್ರಾಮಾಣಿಕ ಕಾರ್ಯಕ್ಷಮತೆ ಹಾಗೂ ದೂರದೃಷ್ಟಿಯ ಪರಿಣಾಮದಿಂದ ಇಂದು ಎಲ್ಲವೂ ಸುಲಲಿತವಾಗಿ ನಡೆಯುವುದಕ್ಕೆ ಪ್ರಮುಖ ಕಾರಣವೇ ರಾಜಶೇಖರ್ ಕಮ್ಮ ಎಂದು ಸಂಘದ ಅನೇಕ ಸದಸ್ಯರೇ ಸ್ಮರಿಸಿಕೊಳ್ಳುತ್ತಿರುವುದು ವಿಶೇಷ.

### ಸಂಘದ ಸದಸ್ಯರಾಗಲು ಮನವಿ

ಬೀದರ್ ಜಿಲ್ಲೆಯ ಬಂಧುಗಳೇ, ಈ ಮೂಲಕ ತಮಗೆ ತಿಳಿಸುವುದೇನೆಂದರೆ; ಬೀದರ್‌ನಿಂದ ಬೆಂಗಳೂರಿಗೆ ಬಂದು ಬದುಕು ಕಟ್ಟಿಕೊಂಡ ಬಂಧುಗಳು ಸಂಘದ ಸದಸ್ಯರಾಗಿರದಿದ್ದರೆ ಈ ಕೂಡಲೇ ಸಂಘದ ಅಧ್ಯಕ್ಷ/ಪದಾಧಿಕಾರಿಗಳನ್ನು ಸಂಪರ್ಕಿಸಿ, ಈ ಕೂಡಲೇ ಸದಸ್ಯತ್ವ ನೋಂದಣಿ ಮಾಡಿಸಿಕೊಳ್ಳಬೇಕಾಗಿ ತಮ್ಮಲ್ಲಿ ಸವಿನಯ ಮನವಿ. ವಿವರಗಳಿಗೆ: ಬೀದರ್ ಜಿಲ್ಲ ಸಾಂಸ್ಕೃತಿಕ ಸಂಘ, ಸೈಟ್ ನಂ.30, ಬೀದರ್ ಬಡಾವಣೆ, ಜೈನ್ ಗ್ರೂಪ್ ಆಫ್‌ಇನ್‌ಸ್ಟಿಟ್ಯೂಟ್ ಎದುರು, ಸುಗ್ಗಟ್ಟ ರಸ್ತೆ, ಹುಣಸೆಮಾರನಹಳ್ಳಿ, ಏರ್‌ಪೋರ್ಟ್ ರಸ್ತೆ. ಫೋನ್: 7411122366/ 9448058519.




### ಬೀದರ್ ಜಿಲ್ಲೆಯ ಬಂಧುಗಳ ಕಲ್ಯಾಣವೇ ಗುರಿ

ಸಂಪದ್ಭರಿತವಾದ ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ, ಸಾಹಿತ್ಯ ಕಲೆಗಳ ಪರಂಪರೆಯನ್ನು ಹೊಂದಿರುವ ಬೀದರ ಜಿಲ್ಲೆಯಿಂದ ಬಂದು ಬೆಂಗಳೂರಿನಲ್ಲಿ ನೆಲೆಸಿರುವ ಎಲ್ಲ ಬಂಧುಗಳನ್ನು ಒಂದೆಡೆ ಸೇರಿಸಿ, ವಿಶಾಲ ಮನೋಭಾವನೆಯಿಂದ ಎಲ್ಲರ ಏಳಿಗೆಗಾಗಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಸದುದ್ದೇಶದಿಂದ ಸಂಘವು 15–03–2001ರಲ್ಲಿ ಅಧಿಕೃತ ನೋಂದಣಿಯ ಜೊತೆಗೆ ಸ್ಥಾಪಿತವಾಗಿದೆ.

ಸಂಘವು 2001 ರಲ್ಲಿ ಸುಮಾರು 400 ಬಡ ಪ್ರತಿಭಾವಂತ ಬೀದರಿನ ವಿದ್ಯಾರ್ಥಿಗಳಿಗೆ ಉಚಿತ ಸಿ.ಇ.ಟಿ. ನೋಟ್ಸ್ ಕೊಟ್ಟು ಸಹಾಯ ಮಾಡಿದೆ. ಅದೇ ರೀತಿ ಪ್ರತಿ ವರ್ಷ ಸಾವಿರಾರು ವಿದ್ಯಾರ್ಥಿಗಳಿಗೆ ಶಿಕ್ಷಣ, ವೃತ್ತಿ ತರಬೇತಿ, ಸ್ಪರ್ಧಾತ್ಮಕ ಪರೀಕ್ಷೆ, ವಸತಿ ನಿಲಯಗಳ ಕುರಿತು ಉಚಿತ ಮಾರ್ಗದರ್ಶನ ಹಾಗೂ ಸಹಾಯ ನೀಡುತ್ತಾ ಬಂದಿದೆ.

ಸಂಘದ ಸಂಸ್ಥಾಪಕ ಅಧ್ಯಕ್ಷರಾಗಿದ್ದ. ಶ್ರೀ ಮೋತಿರಾಂ ಚೌಧರಿ ಅವರಿಗೆ ರಾಷ್ಟ್ರಪತಿ ಪದಕ ನೀಡಿದ ಹಾಗೂ ಐಜಿಪಿಯಾಗಿ ಬಡ್ತಿ ಹೊಂದಿದ ಸಂದರ್ಭದಲ್ಲಿ, ಮಾನ್ಯ ಶ್ರೀ ಎನ್. ಕೆ. ಪಾಟೀಲರು ಹಾಗೂ ಮಾನ್ಯಶ್ರೀ ಎಸ್.ಎಸ್.ಬಿ. ಮಜಗೆಯವರುಗಳು ಉಚ್ಚನ್ಯಾಯಾಲಯದ ನ್ಯಾಯಾಧೀಶರಾಗಿ ನೇಮಕಗೊಂಡ ಶುಭಸಂದರ್ಭದಲ್ಲಿ, ಶ್ರೀ ಬಸವರಾಜ ಪಾಟೀಲ್ ಹುಮನಾಬಾದ್ ಹಾಗು ಶ್ರೀ ಮಿರಾಜುದ್ದೀನ್ ಪಟೇಲ್ ರವರು ಸಚಿವರಾದ ಸಂದರ್ಭದಲ್ಲಿ ಸಂಘವು ಅದ್ದೂರಿಯಿಂದ ಸನ್ಮಾನ ಸಮಾರಂಭಗಳನ್ನು ಏರ್ಪಡಿಸಿರುತ್ತದೆ. ಬೀದರಿನ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಹೋಳಿ ಹಬ್ಬದ ಆಚರಣೆ ಹಾಗೂ ಇನ್ನೂ ಅನೇಕ ಸಾಂಸ್ಕೃತಿಕ ಸಮಾರಂಭಗಳನ್ನು ಸಂಘವು ಏರ್ಪಡಿಸುತ್ತಾ ಬಂದಿದೆ. ಬೀದರ ಜಿಲ್ಲೆಯ ನೌಬಾದ್ ನಲ್ಲಿ ಜಿಲ್ಲಾ ಕಚೇರಿಯ ಚಟುವಟಿಕೆಗಳನ್ನು ನಡೆಸಿಕೊಂಡು ಹೋಗಲು ಅಂದಿನ ಮಹಿಳಾ ಟಾಸ್ಕ್ ಫೋರ್ಸ್ ಅಧ್ಯಕ್ಷರಾಗಿದ್ದ ಶ್ರೀಮತಿ ಗುರಮ್ಮ ಸಿದ್ದಾರೆಡ್ಡಿಯವರು ಕೊಡುಗೆಯಾಗಿ ನೀಡಿರುವ ನಿವೇಶನವನ್ನು ಸಂಘದ ಹೆಸರಿನಲ್ಲಿ ನೋಂದಣಿಯಾಗಿದ್ದು, ಸಂಘದ ಸ್ವಾಧೀನಕ್ಕೆ ಒಳಪಡಿಸಲಾಗಿದೆ. ಬೆಂಗಳೂರಿನಲ್ಲಿ ಸಂಘದಿಂದ "ಬೀದರ ಭವನ " ನಿರ್ಮಿಸುವ ಮಹೋದ್ದೇಶದಿಂದ ಬಿ.ಡಿ.ಎ. ಹಾಗೂ ಕರ್ನಾಟಕ ಗೃಹ ನಿರ್ಮಾಣ ಮಂಡಳಿಯಿಂದ ನಿವೇಶನ ಪಡೆಯಲು ಸತತವಾಗಿ ತನ್ನ ಪ್ರಯತ್ನವನ್ನು ಮುಂದುವರಿಸಿದೆ. ಬಿ.ಡಿ.ಎ.ದಿಂದ ನಾಗರೀಕ ಸೌಲಭ್ಯ ನಿವೇಶನ ಪಡೆಯುವ ಸಂಘದ ಪ್ರಯತ್ನ ಫಲಕಾರಿಯಾಗುವ ಹಂತದಲ್ಲಿದೆ.

**ಸಂಕ್ರಾಂತಿ ಮತ್ತು ವೈಶಿಷ್ಟ್ಯಪೂರ್ಣ ಎಳ್ಳಮಾವಾಸೆ ಹಬ್ಬದ ಸಂಭ್ರಮಾಚರಣೆ ಹಾಗೂ ಖಂಡ್ರೆಯವರಿಗೆ ಶ್ರದ್ಧಾಂಜಲಿ**

ವಿವರ ಪುಟ 3

**PLACE: Bidar Zilla Sanskrithika Sangha**
**@ Site No 30 Bidar Badavane Opp to Jain Group of Institutes, Suggatta Road, Hunasamaranhalli**
**Off Airport Road, Bangalore; Contact Numbers: 7411122366/9448058519**

# ರಾಜ್ಯದ ವೈದ್ಯಕೀಯ ಶಿಕ್ಷಣ ಸಚಿವರ ಪರಿಷ್ಕೃತ ಪ್ರವಾಸ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:**

ರಾಜ್ಯದ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರಾದ ಡಾ. ಶರಣಪ್ರಕಾಶ ಆರ್. ಪಾಟೀಲ್ ಅವರು ಬೀದರದಿಂದ ರಸ್ತೆ ಮೂಲಕ ಜನವರಿ 19 ರಂದು ಸೋಮವಾರ ಬೆಳಿಗ್ಗೆ 11 ಗಂಟೆಗೆ ಕಲಬುರಗಿಗೆ ಆಗಮಿಸುವರು.

ನಂತರ ಅಂದು ಬೆಳಿಗ್ಗೆ 11 ಗಂಟೆಗೆ ಸೇಡಂ ವಿಧಾನಸಭಾ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಹೊಡೆಬೀರನಹಳ್ಳಿ, ಭಂಟನಹಳ್ಳಿ, ಬೆನಕನಹಳ್ಳಿ, ರುದ್ನೂರು ಹಾಗೂ ಶಿರೋಳಿ ಗ್ರಾಮಗಳಿಗೆ ಭೇಟಿ ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸುವರು. ನಂತರ ಕಲಬುರಗಿಗೆ ಆಗಮಿಸಿ ವಾಸ್ತವ್ಯ ಮಾಡುವರು. ಜನವರಿ 20 ರಂದು ಮಂಗಳವಾರ ಕಲಬುರಗಿ ಹಾಗೂ ಸೇಡಂಗಳಲ್ಲಿ ಸ್ಥಳೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ನಂತರ ರಾತ್ರಿ 7.30 ಗಂಟೆಗೆ ಸೇಡಂದಿಂದ ರಾಜಧಾನಿ ಎಕ್ಸ್‌ಪ್ರೆಸ್ ರೈಲಿನ ಮೂಲಕ ಬೆಂಗಳೂರಿಗೆ ಪ್ರಯಾಣಿಸುವರು.

# ಶ್ರೀ ಮಹಾಯೋಗಿ ವೇಮನ ಜಯಂತಿ ಆಚರಣೆ

• **ಮಲ್ಲಮ್ಮ ನುಡಿ ವಾರ್ತೆ,ಕಲಬುರಗಿ:**

ಕಲಬುರಗಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರಪಾಲಿಕೆ ಹಾಗೂ ಜಿಲ್ಲಾ ಪಂಚಾಯತ್ ಇವುಗಳ ಸಂಯುಕ್ತಾಶ್ರಯದಲ್ಲಿ ಶ್ರೀ ಮಹಾಯೋಗಿ ವೇಮನ ಜಯಂತಿ ಆಚರಣೆ ಕಾರ್ಯಕ್ರಮವನ್ನು ಜನವರಿ 19 ರಂದು ಸೋಮವಾರ ಬೆಳಿಗ್ಗೆ 11.30 ಗಂಟೆಗೆ ಕಲಬುರಗಿಯ ಡಾ. ಎಸ್.ಎಂ. ಪಂಡಿತ ರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ.

ರಾಜ್ಯಸಭೆಯ ವಿರೋಧ ಪಕ್ಷದ ನಾಯಕರು ಹಾಗೂ ರಾಜ್ಯಸಭಾ ಸದಸ್ಯ ಡಾ. ಮಲ್ಲಿಕಾರ್ಜುನ ಖರ್ಗೆ ಅವರು ಘನ ಉಪಸ್ಥಿತಿ ವಹಿಸುವರು. ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರಾದ ಪ್ರಿಯಾಂಕ್ ಖರ್ಗೆ ಅವರು ಕಾರ್ಯಕ್ರಮವನ್ನು ಉದ್ಘಾಟಿಸುವರು. ರಾಜ್ಯದ ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಖಾತೆ ಸಚಿವರಾದ ಡಾ. ಶರಣಪ್ರಕಾಶ ಪಾಟೀಲ, ಆಳಂದ ಶಾಸಕ ಹಾಗೂ ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷರಾದ ಬಿ.ಆರ್. ಪಾಟೀಲ, ಕರ್ನಾಟಕ ರೇಷ್ಮೆ ಉದ್ದಿಮೆಗಳ ನಿಗಮದ ನಿಯಮಿತದ ಅಧ್ಯಕ್ಷೆ ಹಾಗೂ ಉತ್ತರ ಶಾಸಕಿ ಕನೀಜ್ ಫಾತೀಮಾ, ಜೇವರ್ಗಿ ಶಾಸಕ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಡಾ. ಅಜಯಸಿಂಗ್ ಅವರು ಗೌರವ ಉಪಸ್ಥಿತಿವಹಿಸುವರು. ಕಲಬುರಗಿ ದಕ್ಷಿಣ ಶಾಸಕ ಅಲ್ಲಮಪ್ರಭು ಪಾಟೀಲ ಅವರು ಕಾರ್ಯಕ್ರಮದ ಅಧ್ಯಕ್ಷತೆವಹಿಸುವರು. ಕಲಬುರಗಿ ಲೋಕಸಭಾ ಸದಸ್ಯ ರಾಧಾಕೃಷ್ಣ ದೊಡ್ಡಮನಿ, ಬೀದರ ಲೋಕಸಭಾ ಸದಸ್ಯ ಸಾಗರ ಖಂಡ್ರೆ, ಶಾಸಕರುಗಳಾದ ಎಂ.ವೈ. ಪಾಟೀಲ, ಬಸವರಾಜ ಮತ್ತಿಮಡು, ಡಾ. ಅವಿನಾಶ ಜಾಧವ, ವಿಧಾನ ಪರಿಷತ್ ಶಾಸಕರುಗಳಾದ ಶಶೀಲ ಜಿ. ನಮೋಶಿ, ಡಾ. ಬಿ.ಜಿ.ಪಾಟೀಲ, ಡಾ. ಚಂದ್ರಶೇಖರ ಪಾಟೀಲ ಹುಮನಾಬಾದ, ತಿಮ್ಮಣ್ಣಪ್ಪ ಕಮಕನೂರ, ಸುನೀಲ್ ವಲ್ಲ್ಯಾಪುರೆ, ಡಾ. ತಳವಾರ ಸಾಬಣ್ಣ, ಜಗದೇವ ಗುತ್ತೇದಾರ್, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಅಧ್ಯಕ್ಷ ದೇವಿಂದ್ರಪ್ಪ ಮರತೂರ, ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಅಧ್ಯಕ್ಷ ಸೈಯದ್ ಮುಹಮ್ಮದ್ ಅಲಿ ಅಲ್ ಹುಸೇನಿ, ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಅಬ್ದುಲ್ ರಶೀದ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷ ಅರುಣಕುಮಾರ್ ಎಂ.ವೈ. ಪಾಟೀಲ, ಜೆಸ್ಕಾಂ ಅಧ್ಯಕ್ಷ ಪ್ರವೀಣ ಪಾಟೀಲ ಹರವಾಳ, ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಸೈಯ್ಯದ್ ಮಹೆಬೂಬ್ ಚಿಸ್ತಿ ಸಾಹೇಬ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ಅಧ್ಯಕ್ಷೆ ಚಂದ್ರಿಕಾ ಪರಮೇಶ್ವರ್, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜಹರ್ ಆಲಂ ಖಾನ್ ಹಾಗೂ ಮಹಾನಗರಪಾಲಿಕೆ ಮಹಾಪೌರ ವರ್ಷಾ ರಾಜೀವ ಜಾನೆ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತೆ ಜಹೀರಾ ನಸೀಮ್, ಜೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಕೃಷ್ಣ ಭಾಜಪೇಯಿ, ಕಲಬುರಗಿ ಈಶಾನ್ಯ ವಲಯದ ಪೊಲೀಸ್ ಉಪ ಮಹಾನಿರೀಕ್ಷಕ ಶಾಂತನು ಸಿನ್ಹಾ, ಕೆ.ಕೆ.ಆರ್.ಟಿ.ಸಿ. ವ್ಯವಸ್ಥಾಪಕ ನಿರ್ದೇಶಕಿ ಡಾ. ಬಿ. ಸುಶೀಲಾ, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಕಾರ್ಯದರ್ಶಿ ನಲಿನ್ ಅತುಲ್, ಕಲಬುರಗಿ ವಿಭಾಗದ ಶಾಲಾ ಶಿಕ್ಷಣ ಇಲಾಖೆಯ ಅಪರ ಆಯುಕ್ತ ಪಾಂಡ್ವೆ ರಾಹುಲ್ ತುಕಾರಾಮ್ ಹಾಗೂ ಕಲಬುರಗಿ ರೆಡ್ಡಿ ಸಮಾಜದ ಅಧ್ಯಕ್ಷರಾದ ಡಾ. ಎಸ್.ಬಿ. ಕಾಮರೆಡ್ಡಿ ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳುವರು. ಕಾರ್ಯಕ್ರಮದಲ್ಲಿ ಕಲಬುರಗಿ ಜೇವರ್ಗಿ ಕಾಲೋನಿ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಡಾ. ಜ್ಯೋತಿ ಎಂ. ರೆಡ್ಡಿ ಅವರು ವಿಶೇಷ ಉಪನ್ಯಾಸ ನೀಡುವರು.

# ಕ್ರೀಡಾಪಟುಗಳಿಗೆ ಪ್ರೋತ್ಸಾಹಧನ: ಅರ್ಜಿ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ,ಕಲಬುರಗಿ:**

2025–26ನೇ ಸಾಲಿನ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಉಪಯೋಜನೆಯಡಿ 2024ನೇ ಕ್ಯಾಲೆಂಡರ್ ವರ್ಷದಲ್ಲಿ (01–01–2024 ರಿಂದ 31–12–2024) ಅಂತರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಅಧಿಕೃತ ಕ್ರೀಡಾಕೂಟಗಳಲ್ಲಿ ಪದಕ ವಿಜೇತರಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕ್ರೀಡಾಪಟುಗಳಿಗೆ ಪ್ರೋತ್ಸಾಹಧನ ನೀಡಲಾಗುತ್ತಿದ್ದು, ಇದಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ ಎಂದು ಕಲಬುರಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪಂಗಡದ ಅರ್ಹ ಕ್ರೀಡಾಪಟುಗಳು https://sevasindhu.karnataka.gov.in ಆನ್‌ಲೈನ್ ಮೂಲಕ 2026ರ ಜನವರಿ 31 ರೊಳಗಾಗಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಕಲಬುರಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಲು ಕೋರಲಾಗಿದೆ.

# ಮೊಳಕೇರಾ:ಸಾವಿರಾರು ಭಕ್ತಾದಿಗಳ ಮಧ್ಯೆ ಜರುಗಿದ ಶ್ರೀ ವೀರಭದ್ರೇಶ್ವರ ರಥೋತ್ಸವ



• ಮಲ್ಲಮ್ಮ ನುಡಿ ವಾರ್ತೆ,ಹುಮನಾಬಾದ:

ತಾಲ್ಲೂಕಿನ ಮೋಳಕೇರಾ ಗ್ರಾಮದಲ್ಲಿ ದೇವಸ್ಥಾನದಿಂದ ಪ್ರಮುಖ ಬೀದಿಗಳಲ್ಲಿ ಜೈಘೋಷದೊಂದಿಗೆ ಶ್ರೀ ವೀರಭದ್ರೇಶ್ವರ ಪಲ್ಲಕ್ಕಿ ಮಹೋತ್ಸವ ಹಾಗೂ ರಥೋತ್ಸವವನ್ನು ಭಕ್ತಾಧಿಗಳ ಮಧ್ಯೆ ರವಿವಾರ ಸಾಯಂಕಾಲ ಸಂಭ್ರಮದಿಂದ ಜರುಗಿತು. ಬೆಳಿಗ್ಗೆಯಿಂದಲ್ಲೇ ದೇವಾಲಯದಲ್ಲಿ ವಿವಿಧ ಧಾರ್ಮಿಕ ವಿಧಿವಿಧಾನಗಳೊಂದಿಗೆ ವಿಶೇಷವಾಗಿ ಪೂಜೆಗಳು, ಅಬಿಷೇಕಗಳು, ಅಲಂಕಾರ ಸೇವೆ ನೆರವೇರಿಸಲಾಯಿತು. ಸಂಜೆ ವೇಳೆಗೆ ಭಕ್ತಾಧಿಗಳಿಂದ ಶ್ರೀ ವೀರಭದ್ರೇಶ್ವರ ಮಹಾರಾಜಕೀ ಜೈ ಎಂಬ ಘೋಷಣೆಗಳೊಂದಿಗೆ ಬೆಂಡು ಬತ್ತಾಸಿ, ಬಾಳೆಹಣ್ಣು, ಕಲ್ಲುಸಕ್ಕರೆ, ನಾಣ್ಯಗಳನ್ನು ರಥೋತ್ಸವದ ಮೇಲೆ ಎಸೆದು ಭಕ್ತಿಸೇವೆ ಸಲ್ಲಿಸಿದರು. ಭಕ್ತಾಧಿಗಳಿಂದ ಭಕ್ತಿಭಾವದಿಂದ ರಥವನ್ನು ಎಳೆಯುವ ಮೂಲಕ ತಮ್ಮ ಭಕ್ತಿಯನ್ನು ಅರ್ಪಿಸಿದರು. ಗ್ರಾಮದ ಪ್ರಮುಖ ಬೀದಿಗಳ ಮೂಲಕ ಶ್ರೀ ವೀರಭದ್ರೇಶ್ವರರ ಪಲ್ಲಕ್ಕಿ ಮಹೋತ್ಸವ ಸಂಚರಿಸುವ ಸಂದರ್ಭದಲ್ಲಿ ಭಕ್ತರು ಹೂವಿನ ಅರ್ಚನೆ, ಟೆಂಗು ಕರ್ಪೂರ ದೇವರಿಗೆ ಸಮರ್ಪಿಸಿದರು. ಮಹಿಳೆಯರು ಕುಂಭದೊಂದಿಗೆ, ನಂದಿಕೋಲು ಸಮೇತ ಮೆರವಣಿಗೆಯಲ್ಲಿ ಮುತ್ತೈದೆಯರು ಪಾಲ್ಗೊಂಡಿದ್ದರು. ಮಕ್ಕಳಿಂದ ನಾಟಕಗಳು ಹಾಗೂ ವಿವಿಧ ಸಾಂಸ್ಕೃತಿಕ ಕರ್ಯಕ್ರಮಗಳು ಹಾಗೂ ಡೊಳ್ಳುಕುಣಿತ ಭಕ್ತಾಧಿಗಳ ಕಣ್ಮನ ಸೆಳೆಯಿತು. ಶ್ರೀ ವೀರಭದ್ರೇಶ್ವರ ಪಲ್ಲಕ್ಕಿ ಮಹೋತ್ಸವ ಹಾಗೂ ರಥೋತ್ಸವದಲ್ಲಿ ಬಣ್ಣಬಣ್ಣದ ಪಟಾಕಿ ಚಿತ್ತಾರ ಭಕ್ತರ ಕಣ್ಮನ ಸೆಳೆಯಿತು. ಶ್ರೀ ವೀರಭದ್ರೇಶ್ವರ ದೇವರ ಪಲ್ಲಕ್ಕಿ ಮಹೋತ್ಸವದಲ್ಲಿ ಶ್ರೀ ವೀರಭದ್ರೇಶ್ವರ ಪಂಚ ಕಮಿಟಿ ಅಧ್ಯಕ್ಷ ಶಿವಕುಮಾರ ಸಿ. ಬಿರಾದಾರ, ಜಾತ್ರಾ ಉತ್ಸವದ ಅಧ್ಯಕ್ಷ ರಮೇಶ್ ನಾವದಗಿ, ಮಲ್ಲಿಕಾರ್ಜುನ ತಿಪ್ಪಣ್ಣೋರ್, ಸಮಾಜ ಸೇವಕ ಅರವಿಂದ್ ಜೋಗಿ–ರೆ, ವೀರಣ್ಣ ಬಿರಾದಾರ್ ಕಂಟೆಪ್ಪಕಾಗಿ, ಸಂತೋಷ್ ಪಾಟೀಲ್, ರವಿ ಜಮಾದಾರ, ಸತೀಸ ಕೆರೆಗೋಡ, ಸಂಗಮೇಶ ಬಸವರಾಜ್ ರಾಂಪುರೆ, ಶಾಂತಕುಮಾರ್ ಮಲ್ಲಪ್ಪನೂರ, ಮಹಾದೇವ, ಸೋಮ, ರಾಜಕುಮಾರ್ ಮಠಪತಿ, ರಾಜಕುಮಾರ್, ಶ್ರೀಶೈಲ್, ಬಂಡೆಪ್ಪ ಗಿರಪ್ಪೂರ್, ರೇವಯ್ಯ ಸ್ವಾಮಿ, ಮಲ್ಲಿಕಾರ್ಜುನ್ ಪಾಟಿಲ್, ಮಲ್ಲಿಕಾರ್ಜುನ ಸೂರೇಕಾಂತ, ವಿರಶಟ್ಟಿ, ಧನರಾಜ, ಲೋಕೇಶ ಸ್ವಾಮಿ, ಬಸವರಾಜ ತಿಪನೋರಾ, ಸಂತೋಷ ಕೊಳಾರಿ, ಸುರೇಕಾಂತ ಕರಿಕಲೆ, ಚಂದ್ರಕಾಂತ, ಮಹೇಶ್, ರೇವಣಸಿದಪ್ಪಪಾಸಯ್ಯ, ಮೂಲವೇ ಅಲಿಮಾ ಸಾಬ್, ಮಜಕುರಿ ಹಾಗೂ ಸಾವಿರಾರು ಭಕ್ತರು ಪಾಲ್ಗೊಂಡಿದ್ದರು. ಷಣ್ಮುಖಯ್ಯ ಸ್ವಾಮಿಯವರ ನಿವಾಸದಲ್ಲಿ ಬಂಡೇನೂರ ಪರಿವಾರದಿಂದ ಸದಲಾಪೂರ ಸಿದ್ಧಲಿಂಗ ಶಿವಾಚಾರ್ಯರವರಿಗೆ ವಿಶೇಷ ಪಾದಪೂಜೆ ನೆರವೇರಿಸಿ ದರ್ಶನ ಪಡೆದರು.

# ಅಧರ್ಮದ ಮುಂದೆ ಧರ್ಮದ ಜಯ ಶತಸಿದ್ಧನರಸಿಂಗ ಮಹಾರಾಜ

• **ಮಲ್ಲಮ್ಮ ನುಡಿ ವಾರ್ತೆ,ಕಮಲನಗರ:**

ಅಧರ್ಮದ ಮುಂದೆ ಧರ್ಮದ ಜಯ ಶತಸಿದ್ಧ, ನಾವು ಮಹಾಭಾರತದ ಯುದ್ಧವನ್ನು ಧರ್ಮ ಯುದ್ಧ ಮತ್ತು ವಿನಾಶಕಾರಿ ಯುದ್ಧ ಎಂದು ಕರೆಯಲಾಗುತ್ತದೆ. ಈ ಯುದ್ಧದಲ್ಲಿ ಭಗವನ ಶ್ರೀಕೃಷ್ಣ ಅವರು ಸ್ವಂತ ಧರ್ಮದ ಪ್ರತಿಪಾದಕ ಅರ್ಜುನ ಹಿಂದೆ ನಿಂತಿ ಪ್ರೇರಣೆ ನೀಡಿ, ಧರ್ಮಕ್ಕೆ ಜಯ ತಂದು ಕೊಟ್ಟರು ಎಂದು ನರಸಿಂಗ ಮಹಾರಾಜ ಕೆರೂರ ಅವರು ಹೇಳಿದರು.

ತಾಲೂಕಿನ ಸುಕ್ಷೇತ್ರ ತೋರಣಾ ಗ್ರಾಮದ ಹನುಮಾನ ದೇವಸ್ಥಾನದಲ್ಲಿ ನಡೆಯುತ್ತಿರುವ ಅಖಂಡ ಹರಿನಾಮ ಸಪ್ತಾಹ ಮತ್ತು ಜ್ಞಾನೇಶ್ವರಿ ಪಾರಾಯಣ ಕಾರ್ಯಕ್ರಮ ರವಿವಾರದ ಪ್ರವಚನ ಕಾರ್ಯಕ್ರಮದಲ್ಲಿ ಪ್ರವಚನ ನೀಡಿದರು.

ಕೌರವರು ಮತ್ತು ಪಾಂಡವರ ನಡುವೆ ನಡೆದ ಮಹಾನ್ ಯುದ್ಧ. ಕೌರವರ ಮಹತ್ವಾಕಾಂಕ್ಷೆಗಳು ಉತ್ತುಂಗಕ್ಕೇರಿದ್ದವು, ಮತ್ತೊಂದೆಡೆ, ವಿದುರನಂತಹ ಜ್ಞಾನವನ್ನು ಹೊಂದಿದ್ದರೂ ಸಹ, ರಾಜ ಧೃತರಾಷ್ಟ್ರನ

**ನರಸಿಂಗ ಮಹಾರಾಜ**



ಮಗ ಮೋಹದಲ್ಲಿ ಮುಳುಗಿದ್ದನು. ಅವನು ಸರಿ ಮತ್ತು ತಪ್ಪುಗಳ ಬಗ್ಗೆ ಒಂದಿಷ್ಟು ಯೋಚನೆಯನ್ನು ಮಾಡದ ವ್ಯಕ್ತಿ. ಮಹಾಭಾರತದ ಯುದ್ಧದಲ್ಲಿ, ಕುರುಕ್ಷೇತ್ರ ಕ್ಷೇತ್ರದಲ್ಲಿ ಕೌರವರು ಅಧರ್ಮ ಮತ್ತು ಪಾಂಡವರು ಧರ್ಮದೊಂದಿಗೆ ಹೋರಾಡಿದರು ಎಂದು ಹೇಳಿದರು. ಪ್ರವಚನ ಕಾರ್ಯಕ್ರಮದಲ್ಲಿ ತೋರಣಾ ಮತ್ತು ಸುತ್ತ ಮುತ್ತಲಿನ ನೂರಾರು ಜನರು ಭಾವಹಿಸಿ ಭಕ್ತಿಯಿಂದ ಪ್ರವಚನ ಮತ್ತು ಕೀರ್ತನೆಯ ಲಾಭ ಪಡೆಯುತ್ತಿದ್ದಾರೆ. ಕಳೆದ ನಾಲ್ಕು ದಿನಗಳಿಂದ ಗ್ರಾಮದಲ್ಲಿ ಹಬ್ಬದ ವಾತಾವರಣ ಮೂಡಿದೆ. ದಿನಾಂಕ 21/01/26 ರಂದು "ಲಕ್ಷ್ಮಣ ಶಕ್ತಿ" ಬಹಳ ದೊಡ್ಡ ಮಟ್ಟದ ಕಾರ್ಯಕ್ರಮ ನಡೆಯಲಿದೆ ಎಂದು ಗ್ರಾಮದ ಹಿರಿಯರಾದ ಭೀಮರಾವ ಶಿಂಧೆ ನಿವೃತ್ತ ಶಿಕ್ಷಕರ ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತ ಅಧ್ಯಕ್ಷ ಸುನಿಲ ಶಿಗರೆ, ರಾಜಕುಮಾರ ಪಾಟೀಲ, ಪ್ರಕಾಶ ಪಾಟೀಲ, ಭೀಮರಾವ ಶಿಂಧೆ, ಹೌಗಿರಾವ ಕೋರೆ, ಬಾಬುರಾವ ಚಾಂಡೇಶ್ವರೆ ನಾಗನಾಥ ಚಾಂಡೇಶ್ವರೆ, ಕುಮಾರ ಒನಮಾರೆ, ಕಿಶನರಾವ ಒನಮಾರೆ, ಲಕ್ಷ್ಮಣ ಗೌವಳಿ, ಪ್ರದೀಪ ಪಂಚವಾರೆ,

ಬಾಲಾಜಿ ಗೌವಳಿ, ಭೀಮಾ ಮೆಹತ್ರೆ ಸೇರಿದಂತೆ ತೋರಣಾ ಮತ್ತು ಸುತ್ತ ಮುತ್ತಲಿನ ಗ್ರಾಮದ ಸದ್ಭಕ್ತರು ಇದ್ದರು.

# ಶಾರ್ಟ್ ಸರ್ಕ್ಯೂಟ್ ನಿಂದ ಹಾನಿಗೊಳಗಾದ ಕಬ್ಬು



• **ಮಲ್ಲಮ್ಮ ನುಡಿ ವಾರ್ತೆ,ಭಾಲ್ಕಿ:**

ತಾಲ್ಲೂಕಿನ ಬಾಳೂರ ಗ್ರಾಮದ ರೈತರಾದ ಮಂಗಲ ಗಣಪತಿ ಎಂಬುವವರು ಬೆಳೆದಿದ್ದ 3 ಎಕರೆ ಕಬ್ಬು ಶಾರ್ಟ್ ಸರ್ಕ್ಯೂಟ್ ದಿಂದ ಹಾನಿಯಾಗಿದೆ.

ಕಟಾವಿನ ಹಂತದಲ್ಲಿದ್ದ ಕಬ್ಬು ಬೆಂಕಿಗಾಹುತಿ ಆಗಿದ್ದು, ಸುಮಾರು 120 ಟನ್, ಅಂದಾಜು 2 ಲಕ್ಷಕ್ಕೂ ಅಧಿಕ ಮೊತ್ತದ ಕಬ್ಬು ನಾಶವಾಗಿದೆ.

ಸ್ಥಳಕ್ಕೆ ಭಾಲ್ಕಿ ಅಗ್ನಿಶಾಮಕ ದಳದ ಸಿಬ್ಬಂದಿ ಧಾವಿಸಿ ಬೆಂಕಿ ನಂದಿಸಿದ್ದಾರೆ.

ಸಾಕಷ್ಟು ಬಂಡವಾಳ ಹೂಡಿಕೆ ಮಾಡಿ ಕಬ್ಬು ಬೆಳೆಯಲಾಗಿತ್ತು, ಇನ್ನೇನು ಕಟಾವು ಮಾಡಬೇಕು ಎನ್ನುವಾಗಲೇ ಬೆಂಕಿಗಾಹುತಿ ಆಗಿದೆ. ಸರ್ಕಾರ ಪರಿಹಾರ ನೀಡಬೇಕೆಂದು ರೈತರು ಆಗ್ರಹಿಸಿದ್ದಾರೆ.

# ಮಹಾಲಕ್ಷ್ಮಿ ದೇವಿಯ ದರ್ಶನ ಪಡೆದ ಡಿ ಕೆ ಸಿದ್ರಾಮ

**ಮಲ್ಲಮ್ಮ ನುಡಿ ವಾರ್ತೆ ,ಭಾಲ್ಕಿ:**

ತಾಲೂಕಿನ ಹಲಸಿ ತೂಗಾವ್ ಗ್ರಾಮದ ನಡೆಯುತ್ತಿರುವ ಮಹಾಲಕ್ಷ್ಮಿ ಮಂದಿರದ ಜಾತ್ರಾ ಮಹೋತ್ಸವದಲ್ಲಿ ಡಿ.ಕೆ.ಸಿದ್ರಾಮ ಭಾಗವಹಿಸಿ ತಾಯಿಯ ಆಶೀರ್ವಾದ ಪಡೆದುಕೊಂಡು ಜಾತ್ರೆಯಲ್ಲಿ ಸೇರಿದ ಜನರನ್ನು ಉದ್ದೇಶಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ ಶರದ ದುರ್ಗಾಳೆ, ನವನಾಥ ಪಾಟೀಲ್ , ಭಾಸ್ಕರ್ ಪಾವರ, ದತ್ತಾ ಪಾಟೀಲ್, ಕಾಳಿದಾಸ ಜಾದವ , ತಾನಾಜಿ ಗಾಜರೆ, ರಮೇಶ್ ಬಾವಗೆ, ಲಕ್ಷಣ ಬಗದೊರೆ, ಕೃಷ್ಣ ಗೊಂಡರೆ, ಗಣೇಶ ಪಾಟೀಲ್, ಪ್ರಶಾಂತ್ ಮೋರೆ ಹಾಗೂ ಗ್ರಾಮದ ಅನೇಕ ಭಕ್ತರು ಉಪಸ್ಥಿತರಿದ್ದರು.



# ಮೊಗದಳ್ ಗ್ರಾಮ ಘಟಕ ಅಧ್ಯಕ್ಷರಾಗಿ ನಾಗಯ್ಯ ಸ್ವಾಮಿ ನೇಮಕ



• **ಮಲ್ಲಮ್ಮ ನುಡಿ ವಾರ್ತೆ,ಚಿಟಗುಪ್ಪ:**

ಕನ್ನಡ ನಾಡು, ನುಡಿ, ನೆಲ, ಜಲ, ಭಾಷೆಗಾಗಿ ಹಗಲಿರಳು ಶ್ರಮಿಸಲು ಕನ್ನಡ ಸೇನೆ ಕರ್ನಾಟಕ ಸಂಘಟನೆಯ ರಾಜ್ಯ ಉಪಾಧ್ಯಕ್ಷ ಡಾ. ರವಿ ಸ್ವಾಮಿ ನಿರ್ಣಾ ಅವರ ಆದೇಶದ ಮೇರೆಗೆ ನಾಗಯ್ಯ ಸ್ವಾಮಿ ಮಠಪತಿ ಇವರನ್ನು ಮೊಗದಳ್ ಗ್ರಾಮ ಘಟಕ ಅಧ್ಯಕ್ಷರಾಗಿ ನೇಮಕ ಮಾಡಲಾಗಿದೆ. ಎಂದು ಕನ್ನಡ ಸೇನೆ ಕರ್ನಾಟಕ ಸಂಘಟನೆಯ ಬೀದರ ದಕ್ಷಿಣ ಕ್ಷೇತ್ರದ ಅಧ್ಯಕ್ಷ ಪರಶುರಾಮ್ ಮೈಸೂರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗುರುಮಠಕಲ್ ತಹಸೀಲ್ ಕಚೇರಿ ಸಿಬ್ಬಂದಿ ಗುಂಡಾ ವರ್ತನೆ

**ಮಲ್ಲಮ್ಮ ನುಡಿ ವಾರ್ತೆ**

• **ಗುರುಮಠಕಲ್**



ಜನವರಿ 18: ಗಣರಾಜ್ಯೋತ್ಸವದ ಪೂರ್ವಭಾವಿ ಸಭೆಗೆ ಆಹ್ವಾನ ನೀಡದೆ ನಿರ್ಲಕ್ಷ್ಯ ತೋರಿದ ತಹಸೀಲ್ ಕಚೇರಿಯ ಸಿಬ್ಬಂದಿ ವಿರುದ್ಧ ತುರ್ತು ಕ್ರಮಕ್ಕೆ ಜಯ ಕರ್ನಾಟಕ ಸಂಘಟನೆಯ ಅಧ್ಯಕ್ಷ ನಾಗೇಶ್ ಗದ್ದಗಿ ಶನಿವಾರ ಗ್ರೇಡ್ 2 ತಹಸೀಲ್ದಾರ್ ನರಸಿಂಹಸ್ವಾಮಿ ಅವರಿಗೆ ಮನವಿ ಪತ್ರ ಸಲ್ಲಿಸಿದ್ದಾರೆ.

ಸಾರ್ವಜನಿಕರ ಸಹಕಾರದೊಂದಿಗೆ ಗಣರಾಜ್ಯೋತ್ಸವ ಭವ್ಯವಾಗಿ ಆಚರಿಸುವ ಗುರಿಯಲ್ಲಿರುವಾಗ, ಅಧಿಕಾರಿಗಳ ನಿರ್ಲಕ್ಷ್ಯ ಎಷ್ಟರ ಮಟ್ಟಿಗೆ ಸರಿ ಎನ್ನುವದು ಬಾರಿ ಚರ್ಚೆಗೆ ಎಡೆ ಮಾಡಿಕೊಟ್ಟಿದೆ.

ಶಿವಕುಮಾರ್ ಅವರು ತಹಸೀಲ್ದಾರ್ ಸಮ್ಮುಖದಲ್ಲಿ ಸಂಘಟನೆ ಸದಸ್ಯರೊಂದಿಗೆ ಅನುಚಿತ ವರ್ತನೆ ತೋರಿದ್ದಾರೆ, ಗಣರಾಜ್ಯೋತ್ಸವ ಸೇರಿದಂತೆ ಯಾವುದೇ ಕಾರ್ಯಕ್ರಮಗಳಿಗೆ ಸರ್ಕಾರಿ ಅಧಿಕಾರಿಗಳನ್ನು ಮಾತ್ರ ಆಹ್ವಾನಿಸಿ, ತಾಲೂಕು ಸಂಘಟನೆ ಅಧ್ಯಕ್ಷರು, ಪತ್ರಕರ್ತರು ಮತ್ತು ಹಿರಿಯ ಮುಖಂಡರನ್ನು ಕೈ ಬಿಟ್ಟು ಶಿಸ್ತು ಉಲ್ಲಂಘನೆ ಮಾಡಿದ್ದಾರೆ ಎಂಬುದಾಗಿ ಮನವಿಯಲ್ಲಿ ಉಲ್ಲೇಖಿಸಲಾಗಿದೆ."ನಾವು ಯಾಕೆ ಹೇಳಬೇಕು?" ಎಂದು ಗುಂಡಾ ವರ್ತನೆ ತೋರಿ, ಎಲ್ಲರಿಗೂ ಅಪಮಾನ ಮಾಡಿದ ಶಿವಕುಮಾರ್ ರನ್ನು ಒಂದು ವಾರದೊಳಗೆ ವರ್ಗಾವಣೆಗೊಳಿಸಬೇಕು ವಿಳಂಬವಾದರೆ ಜಯ ಕರ್ನಾಟಕ ಸಂಘಟನೆಯಿಂದ ಉಗ್ರ ಹೋರಾಟ ಆರಂಭಿಸುವುದಾಗಿ ಮನವಿ ಸಹಿತ ಎಚ್ಚರಿಕೆ ನೀಡಿದ್ದಾರೆ.ಈ ಸಂದರ್ಭದಲ್ಲಿ ಜಯ ಕರ್ನಾಟಕ ಸಂಘಟನೆಯ ಮಲ್ಲಿಕಾರ್ಜುನ ಕಾಕಲವಾರ್, ಗೋಪಾಲ ಕೃಷ್ಣ ಮೇಧಾ, ನರಸಿಮುಲು ಗಂಗನೊಳ, ಕಾಶಪ್ಪ ದೊರೆ, ಬಿಎಸ್ ತಲಾರಿ, ರಾಮು ಕೊಡಗಂಟಿ, ಆಯಜ್ ಅಲಿ ಹಾಜರಿದ್ದರು.

# ವಾಲ್ ಪೋಸ್ಟರ್ ಬಿಡುಗಡೆ



**ಮಲ್ಲಮ್ಮ ನುಡಿ ವಾರ್ತೆ,ಭಾಲ್ಕಿ:**

ತಾಲೂಕಿನ ಭಾತಂಬ್ರಾ ಗ್ರಾಮದ ಜಗದ್ಗುರು ನಿರಂಜನ ಸಂಸ್ಥಾನಮಠದಲ್ಲಿ ಪಟ್ಟಾಭಿಷೇಕ ಮಹೋತ್ಸವ ವಾಲ್‌ಪೋಸ್ಟರ್ ಬಿಡುಗಡೆ ಮಾಡಲಾಯಿತು.

# ಗಡವಂತಿ:ಅದ್ದೂರಿಯಾಗಿ ಜರುಗಿದ ಶ್ರೀ ವೀರಭದ್ರೇಶ್ವರ ರಥೋತ್ಸವ

ಮಲ್ಲಮ್ಮ ನುಡಿ ವಾರ್ತೆ



ಹುಮನಾಬಾದ: ತಾಲ್ಲೂಕಿನ ಗಡವಂತಿ ಗ್ರಾಮದಲ್ಲಿ ಶ್ರೀ ವೀರಭದ್ರೇಶ್ವರ ಪಲ್ಲಕ್ಕಿ ಉತ್ಸವವನ್ನು ದೇವಸ್ಥಾನದಿಂದ ಪ್ರಮುಖ ಬೀದಿಗಳಲ್ಲಿ ಜೈಘೋಷದೊಂದಿಗೆ ಜರುಗಿತು. ಹಾಗೂ ರಥೋತ್ಸವವನ್ನು ಭಕ್ತಾಧಿಗಳ ಮಧ್ಯೆ ಶನಿವಾರ ಸಾಯಂಕಾಲ ಸಂಭ್ರಮದಿಂದ ಜರುಗಿತು. ಬೆಳಿಗ್ಗೆಯಿಂದಲ್ಲೇ ದೇವಾಲಯದಲ್ಲಿ ವಿವಿಧ ಧಾರ್ಮಿಕ ವಿಧಿವಿಧಾನಗಳೊಂದಿಗೆ ವಿಶೇಷವಾಗಿ ಪೂಜೆಗಳು ಅಲಂಕಾರ ಸೇವೆ ಕೂಡ ನೆರವೇರಿಸಲಾಯಿತು. ಸಂಜೆ ವೇಳೆಗೆ ಭಕ್ತಾಧಿಗಳಿಂದ ಶ್ರೀ ವೀರಭದ್ರೇಶ್ವರ ಮಹಾರಾಜಕೀ ಜೈ ಎಂಬ ಘೋಷಣೆಗಳೊಂದಿಗೆ ಬೆಂಡು ಬತ್ತಾಸಿ ರಥೋತ್ಸವದ ಮೇಲೆ ಹಾರಿಸಿ ಭಕ್ತಿಯಿಂದ ರಥವನ್ನು ಎಳೆಯುವ ಮೂಲಕ ತಮ್ಮ ಭಕ್ತಿಯನ್ನು ಅರ್ಪಿಸಿದರು. ಗ್ರಾಮದ ಪ್ರಮುಖ ಬೀದಿಗಳ ಮೂಲಕ ಶ್ರೀ ವೀರಭದ್ರೇಶ್ವರರ ಪಲ್ಲಕ್ಕಿ ಉತ್ಸವ ಸಂಚರಿಸುವ ಸಂದರ್ಭದಲ್ಲಿ ಭಕ್ತರು ಹೂವಿನ ಅರ್ಚನೆ, ಟೆಂಗು ಕರ್ಪೂರ ದೇವರಿಗೆ ಸಮರ್ಪಿಸಿದರು. ಮಹಿಳೆಯರು ಕುಂಭದೊಂದಿಗೆ, ಪೂರ್ಣಕುಂಭ ಸೇವೆ ಸಲ್ಲಿಸಿದರೆ, ಯುವಕರು ಹಾಗೂ ಮಕ್ಕಳು ಸಂಭ್ರಮದಿಂದ ಪಾಲ್ಗೊಂಡು ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಜಾತ್ರೆಯ ಸೌದರ್ಯಕ್ಕೆ ಮತ್ತಷ್ಟು ಮೆರಗು ತಂದರು. ಡೊಳ್ಳು, ಕುಣಿತ, ನಂದಿಕೋಲು ಪ್ರದರ್ಶನ, ಬಣ್ಣಬಣ್ಣದ ಪಟಾಕಿ ಚಿತ್ತಾರ ಭಕ್ತರ ಕಣ್ಮನ ಸೆಳೆಯಿತು. ಈ ಸಂದರ್ಭದಲ್ಲಿ ಗ್ರಾ.ಪಂ.ಸದಸ್ಯರು, ದೇವಸ್ಥಾನ ಸಮಿತಿ ಪದಾಧಿಕಾರಿಗಳು, ಗಣ್ಯರು, ಹಾಗು ಸುತ್ತಮುತ್ತಲಿನ ಗ್ರಾಮಗಳಿಂದ ಆಗಮಿಸಿದ ಸಾವಿರಾರು ಭಕ್ತರು ಪಾಲ್ಗೊಂಡಿದ್ದರು.



ಹುಮನಾಬಾದ: ತಾಲ್ಲೂಕಿನ ಮೊಳಕೇರಾ ಗ್ರಾಮದ ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಬಂಡೇನೂರ ಪರಿವಾರದವರು ಶ್ರೀ ವೀರಭದ್ರೇಶ್ವರ ದೇವರಿಗೆ ಟೆಂಗು ಕಾಯಿ ಕರ್ಪೂರ ಆರ್ಪಿಸಿ ದರ್ಶನ ಪಡೆದು ಪುನಿತರಾದರು. (ಮಲ್ಲಮ್ಮ ನುಡಿ ಚಿತ್ರ)

# ಜ. 21ರಂದು ಶ್ರೀ ನಿಜಶರಣ ಅಂಬಿಗರ ಚೌಡಯ್ಯ ಜಯಂತಿ ಆಚರಣೆ

• **ಮಲ್ಲಮ್ಮ ನುಡಿ ವಾರ್ತೆ,ಕಲಬುರಗಿ**

ಕಲಬುರಗಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರಪಾಲಿಕೆ ಹಾಗೂ ಜಿಲ್ಲಾ ಪಂಚಾಯತ್ ಇವುಗಳ ಸಂಯುಕ್ತಾಶ್ರಯದಲ್ಲಿ ಶ್ರೀ ನಿಜಶರಣ ಅಂಬಿಗರ ಚೌಡಯ್ಯ ಜಯಂತಿ ಆಚರಣೆ ಕಾರ್ಯಕ್ರಮವನ್ನು ಜನವರಿ 21 ರಂದು ಬುಧವಾರ ಮಧ್ಯಾಹ್ನ 2 ಗಂಟೆಗೆ ಕಲಬುರಗಿಯ ಡಾ. ಎಸ್.ಎಂ. ಪಂಡಿತ ರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ. ರಾಜ್ಯಸಭೆಯ ವಿರೋಧ ಪಕ್ಷದ ನಾಯಕರು ಹಾಗೂ ರಾಜ್ಯಸಭಾ ಸದಸ್ಯ ಡಾ. ಮಲ್ಲಿಕಾರ್ಜುನ ಖರ್ಗೆ ಅವರು ಘನ ಉಪಸ್ಥಿತಿ ವಹಿಸುವರು. ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರಾದ ಪ್ರಿಯಾಂಕ್ ಖರ್ಗೆ ಅವರು ಕಾರ್ಯಕ್ರಮವನ್ನು ಉದ್ಘಾಟಿಸುವರು. ರಾಜ್ಯದ ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಖಾತೆ ಸಚಿವರಾದ ಡಾ. ಶರಣಪ್ರಕಾಶ ಪಾಟೀಲ, ಆಳಂದ ಶಾಸಕ ಹಾಗೂ ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷರಾದ ಬಿ.ಆರ್. ಪಾಟೀಲ, ಕರ್ನಾಟಕ ರೇಷ್ಮೆ ಉದ್ದಿಮೆಗಳ ನಿಗಮದ ನಿಯಮಿತದ ಅಧ್ಯಕ್ಷೆ ಹಾಗೂ ಉತ್ತರ ಶಾಸಕಿ ಕನೀಜ್ ಫಾತೀಮಾ, ಜೇವರ್ಗಿ ಶಾಸಕ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಡಾ. ಅಜಯಸಿಂಗ್ ಅವರು ಗೌರವ ಉಪಸ್ಥಿತಿವಹಿಸುವರು. ಕಲಬುರಗಿ ದಕ್ಷಿಣ ಶಾಸಕ ಅಲ್ಲಮಪ್ರಭು ಪಾಟೀಲ ಅವರು ಕಾರ್ಯಕ್ರಮದ ಅಧ್ಯಕ್ಷತೆವಹಿಸುವರು. ಕಲಬುರಗಿ ಲೋಕಸಭಾ ಸದಸ್ಯ ರಾಧಾಕೃಷ್ಣ ದೊಡ್ಡಮನಿ, ಬೀದರ ಲೋಕಸಭಾ ಸದಸ್ಯ ಸಾಗರ ಖಂಡ್ರೆ, ಶಾಸಕರುಗಳಾದ ಎಂ.ವೈ. ಪಾಟೀಲ, ಬಸವರಾಜ ಮತ್ತಿಮಡು, ಡಾ. ಅವಿನಾಶ ಜಾಧವ, ವಿಧಾನ ಪರಿಷತ್ ಶಾಸಕರುಗಳಾದ ಶಶೀಲ ಜಿ. ನಮೋಶಿ, ಡಾ. ಬಿ.ಜಿ.ಪಾಟೀಲ, ಡಾ. ಚಂದ್ರಶೇಖರ ಪಾಟೀಲ ಹುಮನಾಬಾದ, ತಿಮ್ಮಣ್ಣಪ್ಪ ಕಮಕನೂರ, ಸುನೀಲ್ ವಲ್ಲ್ಯಾಪುರೆ, ಡಾ. ತಳವಾರ ಸಾಬಣ್ಣ, ಜಗದೇವ ಗುತೆ–ೇದಾರ್, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಅಧ್ಯಕ್ಷ ದೇವಿಂದ್ರಪ್ಪ ಮರತೂರ, ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಅಧ್ಯಕ್ಷ ಸೈಯದ್ ಮುಹಮ್ಮದ್ ಅಲಿ ಅಲ್ ಹುಸೇನಿ, ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಅಬ್ದುಲ್ ರಶೀದ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷ ಅರುಣಕುಮಾರ್ ಎಂ.ವೈ. ಪಾಟೀಲ, ಜೆಸ್ಕಾಂ ಅಧ್ಯಕ್ಷ ಪ್ರವೀಣ ಪಾಟೀಲ ಹರವಾಳ, ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಸೈಯ್ಯದ್ ಮಹೆಬೂಬ್ ಚಿಸ್ತಿ ಸಾಹೇಬ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ಅಧ್ಯಕ್ಷೆ ಚಂದ್ರಿಕಾ ಪರಮೇಶ್ವರ್, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜಹರ್ ಆಲಂ ಖಾನ್ ಹಾಗೂ ಮಹಾನಗರಪಾಲಿಕೆ ಮಹಾಪೌರ ವರ್ಷಾ ರಾಜೀವ ಜಾನೆ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತೆ ಜಹೀರಾ ನಸೀಮ್, ಜೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಕೃಷ್ಣ ಭಾಜಪೇಯಿ, ಕಲಬುರಗಿ ಈಶಾನ್ಯ ವಲಯದ ಪೊಲೀಸ್ ಉಪ ಮಹಾನಿರೀಕ್ಷಕ ಶಾಂತನು ಸಿನ್ಹಾ, ಕೆ.ಕೆ.ಆರ್.ಟಿ.ಸಿ. ವ್ಯವಸ್ಥಾಪಕ ನಿರ್ದೇಶಕಿ ಡಾ. ಬಿ. ಸುಶೀಲಾ, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಕಾರ್ಯದರ್ಶಿ ನಲಿನ್ ಅತುಲ್, ಕಲಬುರಗಿ ವಿಭಾಗದ ಶಾಲಾ ಶಿಕ್ಷಣ ಇಲಾಖೆಯ ಅಪರ ಆಯುಕ್ತ ಪಾಂಡ್ವೆ ರಾಹುಲ್ ತುಕಾರಾಮ್ ಹಾಗೂ ಕಲಬುರಗಿ ಜಿಲ್ಲಾ ಕೋಲಿ ಕಬ್ಬಲಿಗ ಸಮಾಜದ ಅಧ್ಯಕ್ಷರಾದ ಜಯಪ್ರಕಾಶ ಟಿ. ಕಮಕನೂರ ಅವರು ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳುವರು. ಕಾರ್ಯಕ್ರಮದಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಡೀನರು, ಕಲಾನಿಕಾಯ ಹಾಗೂ ನಿಜಶರಣ ಅಂಬಿಗರ ಚೌಡಯ್ಯ ಅಧ್ಯಯನ ಪೀಠದ ಮತ್ತು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಪ್ರೊ. ಹೆಚ್.ಟಿ. ಪೋತೆ ಅವರು ವಿಶೇಷ ಉಪನ್ಯಾಸ ನೀಡುವರು.

# ವಿಶಿಷ್ಟ ಎಳ್ಳಮಾವಾಸೆ, ಸಂಕ್ರಾಂತಿಯ ಸಂಭ್ರಮ

## ಬೀದರ ಜಿಲ್ಲಾ ಸಾಂಸ್ಕೃತಿಕ ಸಂಘದ ವತಿಯಿಂದ ಬೆಂಗಳೂರಿನಲ್ಲಿ ಅದ್ದೂರಿ ಆಚರಣೆ






• **ಮಲ್ಲಮ್ಮ ನುಡಿವಾರ್ತೆಬೆಂಗಳೂರು:**

ಬೀದರ್ ಜಿಲ್ಲಾ ಸಾಂಸ್ಕೃತಿಕ ಸಂಘ ಬೆಂಗಳೂರು (ನೋಂ)ಸಂಘದ ವತಿಯಿಂದ 18 /01/ 2026 ರ ಭಾನುವಾರ ಸಂಘದ ನಿವೇಶನದಲ್ಲಿ ವಿಶಾಲವಾದ ಆವರಣದಲ್ಲಿ ಎಳ್ಳ ಅಮಾವಾಸ್ಯೆ ಹಾಗೂ ಸಂಕ್ರಾಂತಿ ಹಬ್ಬವನ್ನು ನೆರವೇರಿಸಲಾಯತು.

ಅಪರೂಪದ ವೈಶಿಷ್ಟ್ಯಪೂರ್ಣ ಹಾಗೂ ಗ್ರಾಮೀಣ ಸೊಗಡಿನ ಈ ಸಮಾರಂಭದಲ್ಲಿ ಬೆಂಗಳೂರಿನಲ್ಲಿ ವಾಸವಾಗಿರುವ ಪುರುಷ ಮತ್ತು ಮಹಿಳೆಯರು ಸೇರಿದಂತೆ ಬೀದರ್ ನ ಅಧಿಕಾರಿಗಳು, ಉದ್ಯಮಿಗಳು, ವ್ಯಾಪಾರಸ್ಥರು, ವಿವಿಧ ಉದ್ಯೋಗದಲ್ಲಿ ತೊಡಗಿರುವ ಸಾವಿರಾರು ಜನರು ಭಾಗವಹಿಸು ಮೂಲಕ ಸಮಾರಂಭಕ್ಕೆ ಕಳೆತಂದಿದ್ದರು.

ಈ ಕಾರ್ಯಕ್ರಮದದಲ್ಲಿ ಮುಖ್ಯ ಅತಿಥಿಯಾಗಿ ನಿವೃತ್ತ ಐಜಿಪಿ ರಾಘವೇಂದ್ರ ಔರಾದ್‌ಕರ್ ರವರು ಭಾಗವಹಿಸಿದ್ದರು. ಅತಿಥಿಯಾಗಿ ಬಲವಂತರಾವ್ ಪಾಟೀಲ್ ಜಂಟಿ ನಿರ್ದೇಶಕರು, ಕನ್ನಡ ಮತ್ತು ಸಾಂಸ್ಕೃತಿ ಇಲಾಖೆ, ಇವರು ಭಾಗವಹಿಸಿದ್ದರು, ಸಂಘದ ಅಧ್ಯಕ್ಷರಾದ ಶ್ರೀ ರಾಜಶೇಖರ್ ಕಮ್ಮ ಅವರು ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಮುಖ್ಯ ಅತಿಥಿಗಳಾದ ರಾಘವೇಂದ್ರ ಔರಾದ್ಕರ್ ಅವರು ಸಂಸ್ಥಾಪಕ ಸದಸ್ಯರಾಗಿದ್ದಾರೆ. ಅವರು ಇದೇ ಸಂದರ್ಭದಲ್ಲಿ ಮಾತನಾಡಿ, ನಾನು ಸಂಘದ ಸ್ಥಾಪನೆಯಿಂದ ಸಂಘದ ಜೊತೆಗೆ ಕೆಲಸ ಮಾಡಿಕೊಂಡು ಬಂದಿದ್ದೇನೆ. ಇವತ್ತು ಸಂಘವು 25 ವರ್ಷಗಳನ್ನು ಪೂರೈಸಿ ಬೆಳ್ಳಿ ಹಬ್ಬವನ್ನು ಆಚರಿಸುತ್ತಿರುವುದು ಸಂತಸದ ವಿಷಯವಾಗಿದೆ ಎಂದು ಅಭಿಮಾನದಿಂದ ಹೇಳಿದ್ದಾರೆ. ಈ ಸಂಘವು ಮುಂದೆಯೂ ಹೀಗೆ ಅಭಿವೃದ್ಧಿಯಾಗಿ ಬೀದರ್ ಜನರ ಕಷ್ಟ ಸುಖಗಳಿಗೆ ಸ್ಪಂದಿಸುತ್ತಾ, ಬೀದರ್ ನಿಂದ ಬರುವ ವಿದ್ಯಾರ್ಥಿಗಳಿಗಾಗಿ ವಸತಿ ನಿಲಯವನ್ನು ಸ್ಥಾಪಿಸಬೇಕು ಎಂದು ಸಲಹೆ ನೀಡಿದ್ದಾರೆ.ನಾನು ಮುಂದೆಯೂ ಕೂಡ ಸಂಘದ ಶ್ರೇಯೋಭಿವೃದ್ಧಿಗಾಗಿ ಸಂಘದ ಬೆಂಬಲಾಗಿ ನಿಂತಿರುತ್ತೇನೆ ಎಂದು ಅಭಯ ನೀಡಿದ್ದಾರೆ.ಸಂಘದ ಅಧ್ಯಕ್ಷರಾದ ರಾಜಶೇಖರ್ ಕಮ್ಮಾ ಅವರು ಪ್ರಾಸ್ತಾವಿಕ ಮಾತುಗಳನ್ನಾಡಿ, ಸಂಘ ನಡೆದು ಬಂದ ದಾರಿ ಹಾಗೂ ಉದ್ದೇಶ ಮತ್ತು ಗುರಿಯ ಬಗ್ಗೆ ವಿವರವಾಗಿ ವಿಶ್ಲೇಷಿಸಿದ್ದಾರೆ.

"

ಬೆಂಗಳೂರಿನಲ್ಲಿವಾಸವಾಗಿರುವ ಬೀದರ್ ಎಲ್ಲಾ ಬಾಂಧವರು ಸಂಘದ ಸದಸ್ಯತ್ವವನ್ನು ಪಡೆದುಕೊಂಡು ಸಂಘವು ನಿರ್ಮಿಸುತ್ತಿರುವ ಬೀದರ್ ಸಾಂಸ್ಕೃತಿಕ ಸಂಘದ ಕಚೇರಿ ಕಟ್ಟಡ ನಿರ್ಮಾಣಕ್ಕಾಗಿ ಸಹಕಾರ ಕೋರುವೆ.

**"ರಾಜಶೇಖರ್ ಕಮ್ಮಾ"**
**ಬೀದರ್ ಜಿಲ್ಲಾ ಸಾಂಸ್ಕೃತಿಕ ಸಂಘದ(ನೋಂ) ಅಧ್ಯಕ್ಷರು.**

### ಗಣ್ಯರಿಗೆ ಸಂಘದಿಂದ ಸನ್ಮಾನ

ಈ ಕಾರ್ಯಕ್ರಮದಲ್ಲಿ ಬೀದರ್ ನ ಸೇವೆಯಿಂದ ನಿವೃತ್ತಿ ಹೊಂದಿದ ಅಧಿಕಾರಿಗಳಾದ ಶ್ರೀ ಅಶೋಕ್ ಹಿಂದ ಹಾಗೂ ಶ್ರೀ ಮಲ್ಲಿಕಾರ್ಜುನ್ ಇವರಿಗೆ, ಪದೋನ್ನತಿ ಹೊಂದಿದ ಅಧಿಕಾರಿಗಳಾದ ಜ್ಯೋತಿ ಓಂಕಾರ್ ಇವರಿಗೆ ಹಾಗೂ ನವದೆಹಲಿಯ ಭಾರತ್ ಮಂಟಪಂನಲ್ಲಿ ನಡೆದ ವಿಕಸಿತ ಭಾರತ್ ಯುವ ನಾಯಕರೊಂದಿಗೆ ಪ್ರಧಾನ ಮಂತ್ರಿ ಗಳೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿದ ತೇಜಸ್ ಬಿ ಪಾಟೀಲ್ ಅವರಿಗೆ, ಬೀದರ್‌ನ ಚಲನಚಿತ್ರ ನಿರ್ಮಾಪಕರು ನಿರ್ದೇಶಕರು, ನಟರಾದ ವಿಷ್ಣುಕಾಂತ್ ಬಿಜೆ ಆವರನ್ನು ಸನ್ಮಾನಿಸಲಾಯಿತು.

### ಖಂಡ್ರೆ ಅವರ ಸಂಬಂಧ ಸ್ಮರಿಸಿದ ಅಧ್ಯಕ್ಷರು

ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷರಾದ ರಾಜಶೇಖರ್ ಕಮ್ಮ ಅವರು ಮಾತನಾಡಿ, ಅವರ ಕುಟುಂಬದ ಜೊತೆಗೆ ಖಂಡ್ರೆಯವರ ಸಂಬಂಧವನ್ನು ನೆನಪಿಸುತ್ತ ಅವರು ಮೊಟ್ಟಮೊದಲ ಬಾರಿಗೆ ಮಂತ್ರಿಗಳಾದಾಗ ಅವರ ಊರಿಗೆ ಭೇಟಿ ಕೊಟ್ಟಾಗ ಅವರನ್ನು ಆನೆ ಅಂಬಾರಿಯಲ್ಲಿ ಮೆರವಣಿಗೆ ಮಾಡಿ ಸತ್ಕರಿಸಿದ್ದನ್ನು ನೆನಪಿಸಿಕೊಂಡಿದ್ದಾರೆ. ಅದೇ ರೀತಿ ಪ್ರಸ್ತುತ ಸಚಿವರಾದ ಈಶ್ವರ್ ಖಂಡ್ರೆ ಅವರು ತಮ್ಮ ಸಹಪಾಠಿ ಹಾಗೂ ಆತ್ಮೀಯರಾಗಿರುವ ಬಗ್ಗೆ ಸ್ಮರಿಸಿದ್ದಾರೆ.

### ಅಗಲಿದ ಗಣ್ಯರಿಗೆ ಸಂತಾಪ ಸೂಚನೆ

ಬೀದರ್ ಜಿಲ್ಲಾ ಸಾಂಸ್ಕೃತಿಕ ಸಂಘ ಬೆಂಗಳೂರು (ನೋಂ) ವತಿಯಿಂದ ಬೀದರ್ ಜಿಲ್ಲೆಯ ಹಿರಿಯ ಮುಖಂಡರಾದ ಲೋಕನಾಯಕ ಡಾ.ಭೀಮಣ್ಣ ಖಂಡ್ರೆ ಅವರು ಲಿಂಗೈಕ್ಯರಾದ ಪ್ರಯುಕ್ತ ಹುಣಸಮಾರನಹಳ್ಳಿಯ ಬೀದರ್ ಬಡಾವಣೆಯಲ್ಲಿ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು. ಈ ಕಾರ್ಯಕ್ರಮದಲ್ಲಿ ಬೀದರ್‌ನ ಸಾವಿರಾರು ನಾಗರಿಕರು ಸೇರಿ ಲಿಂಗೈಕ್ಯರಾದ ಶ್ರೀ ಭೀಮಣ್ಣ ಕಂಡ್ರೆ ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು.

ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಶ್ರೀ ರಾಘವೇಂದ್ರ ಔರಾದ್ಕರ್ ಅವರು ಭೀಮಣ್ಣ ಖಂಡ್ರೆ ಅವರ ಬಗ್ಗೆ ಮಾತನಾಡುತ್ತಾ, ಅವರಿಂದ ಒಡನಾಟ ಹಾಗೂ ಬೀದರ್ ಜನರ ಬಗ್ಗೆ ಶ್ರೀ ಖಂಡ್ರೆ ಅವರಿಗೆ ಇರುವ ಅಭಿಮಾನ ವನ್ನು ನೆನಪಿಸಿಕೊಂಡರು. ಅಂದಿನ ಕಾಲದಲ್ಲಿ ಬೀದರನ ಜನರು ಬೆಂಗಳೂರಿಗೆ ಬಂದಾಗ ನೀವು ಎಲ್ಲಿಯವರು ಅಂತ ಕೇಳಿದರೆ ಅವರಿಗೆ ನೆನಪಾಗುವುದು ಖಂಡ್ರೆ ಅವರ ಜಿಲ್ಲೆಯವರ ಎಂದು ಕೇಳುತ್ತಿದ್ದರು. ಆ ಮಟ್ಟಿಗೆ ಅವರು ಖ್ಯಾತಿಯನ್ನ ಹೊಂದಿದವರು ಎಂದು ತಮ್ಮ ಅವರೊಂದಿಗೆ ಒಡನಾಟವನ್ನು ಸ್ಮರಿಸಿದ್ದಾರೆ.

## ಜಯಂತಿ ಆಚರಣೆ




• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ :**

ಶಿವಯೋಗಿ ಸಿದ್ದರಾಮೇಶ್ವರರು (12ನೇ ಶತಮಾನದ) ಮಹಾಶಿವಯೋಗಿ ಮತ್ತು ಕರ್ಮ ಯೋಗಿ ಇವರು ಸೊನ್ನಲಿಗೆಯಲ್ಲಿ ( ಈಗಿನ ಸೊಲ್ಲಾಪುರ ) ಜನಿಸಿ 68 ಲಿಂಗಗಳನ್ನು ಪ್ರತಿಷ್ಠಾಪಿಸಿ ಕೆರೆ ಕಟ್ಟಿ ನಿರ್ಮಾಣ ಸಾಮಾಜಿಕ ಕಾರ್ಯಗಳ ಮೂಲಕ ಜನಪರ ಸೇವೆಗೈದರು. ಪ್ರಭುದೇವರಿಂದ ಕಲ್ಯಾಣಕ್ಕೆ ಕರೆಸಲ್ಪಟ್ಟು ಅನುಭವ ಮಂಟಪದಲ್ಲಿ ಭಾಗವಹಿಸಿದರು. ಸಮಾಜೋದ್ಧಾರ ಕಾರ್ಯಗಳಲ್ಲಿ ತೊಡಗಿಸಿಕೊಂಡು ಸಾರ್ವಜನಿಕರಿಗಾಗಿ ಸಾಮೂಹಿಕ ವಿವಾಹಗಳನ್ನು ನಡೆಸಿದ ಮಹಾಶಿವಯೋಗಿ ಯಾಗಿದ್ದಾರೆ.

## ಎಸಿಪಿ ಸೇರಿ 10 ಜನರಿಗೆ ಬೆಸ್ಟ್ ಪೊಲೀಸ್ ಪ್ರಶಸ್ತಿ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:**

ಜಮಾದಾರ್‌ಕುಟುಂಬಪ್ರತಿಷ್ಠಾನದಿಂದ ಈ ವಷವೂ ಕೂಡ ನಿವೃತ್ತ ಪೊಲೀಸ್ ಅಧಿಕಾರಿ ದಿ.ಮಲ್ಕಪ್ಪ ಜಮಾದಾರ್ ಅವರ ಎರಡನೇ ಸ್ಮರಣೋತ್ಸವದ ಅಂಗವಾಗಿ ನಗರ ವಲಯದ ಎಸಿಪಿ ಶಿವನಗೌಡ ಪಾಟೀಲ್ ಹಾಗೂ ಮಹಿಳಾ ಪೊಲೀಸ್ ಠಾಣೆಯ ಪಿಎಸ್‌ಐ ಶಿವಲಿಂಗಪ್ಪ ಉಮ್ಮನಗೋಳ್ ಸೇರಿದಂತೆ ಒಟ್ಟು 10 ಜನರಿಗೆ ಬೆಸ್ಟ್ ಪೊಲೀಸ್ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ.

ನಗರದ ಕನ್ನಡ ಭವನದಲ್ಲಿ ಜನವರಿ 20ರ ಬೆಳಗ್ಗೆ 11 ಗಂಟೆಗೆ ನಡೆಯುವ ಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಸಂಚಾರಿ ಠಾಣೆಯ ಪಿಎಸ್‌ಐ ಭಾರತಿಬಾಯಿ ಧನ್ನಿ ಹಾಗೂ ಮಹಿಳಾ ಪೇದೆ ಸಂತೋಷಮ್ಮ ತಳವಾರ್, ಸಿಐಡಿ ಘಟಕದ ಎ ಎಸ್ ಐ ಚಂದ್ರಮಪ್ಪ ಕುಂಬಾರ್, ಸಿಐಡಿ ಅರಣ್ಯ ಘಟಕದ ಮುಖ್ಯ ಪೇದೆ ಷಣ್ಮುಖ ಪಂಡಿತ್ ಮಾಂಡುವೆ, ರಾಘವೇಂದ್ರ ನಗರ ಪೊಲೀಸ್ ಠಾಣೆಯ ಮುಖ್ಯಪೇದೆ ಮಲ್ಲನಗೌಡ ಜಿ ಮಾಲಿ ಪಾಟೀಲ್, ಡಿವೈಎಸ್ಪಿ ಆಫೀಸ್ ಕಚೇರಿಯ ಮುಖ್ಯ ಪೇದೆ ಮಶಾಕ್‌ನದಾಫ್, ದೇವಲಗಣಗಾಪುರ ಪೊಲೀಸ್ ಠಾಣೆಯ ಪೊಲೀಸ್ ಪೇದೆ ಸಂತೋಷ್ ಎಸ್ ನಾಯ್ಕೋಡಿ, ಮಾಶಾಳದ ಪೇದೆ ಗಡ್ಡೆಪ್ಪ ಕೋರಿ ಅವರಿಗೆ ಪ್ರಶಸ್ತಿಗಳನ್ನು ನೀಡಿ



ಗೌರವಿಸಲಾಗುತ್ತಿದೆ ಎಂದು ಪ್ರತಿ?ನದ ಕಾರ್ಯದರ್ಶಿ ರಮೇಶ್ ಜಮಾದಾರ್ ಸಂಚಾಲಕರಾದ ಶರಣಗೌಡ ಪಾಟೀಲ್ ಮಾಶಾಲ್ ತಿಳಿಸಿದ್ದಾರೆ.ಗುಲ್ಬರ್ಗ ವಿಶ್ವವಿದ್ಯಾನಿಲಯದ ರಾಜ್ಯೋತ್ಸವ ಪ್ರಶಸ್ತಿ ಪಡೆದ ಪ್ರಭುಲಿಂಗ ನೀಲೂರೆ, ಜಿಲ್ಲಾ ಪತ್ರಕರ್ತರ ಸಂಘದ ಉಪಾಧ್ಯಕ್ಷರಾಗಿರುವ ಹನುಮಂತರಾವ್ ಬೈರಾಮಡಗಿ ಹಾಗೂ ರಾಜ್ಯ ಅಕಾರ್ಡೇಶನ್ ಕಮಿಟಿ ಸದಸ್ಯರಾದ ಗುರುರಾಜ್ ಕುಲಕರ್ಣಿ, ಗುಲ್ಬರ್ಗ ವಿಶ್ವವಿದ್ಯಾಲಯದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಅಶೋಕ್ ದೊಡ್ಡಮನಿ ಹಾಗೂ ರಾಜ್ಯಮಟ್ಟದ ಸಾವಿತ್ರಿಬಾಯಿ ಪುಲೆ ಪ್ರಶಸ್ತಿಗೆ ಭಾಜನರಾಗಿರುವ ಈ ದಿನ ಡಾಟ್ ಕಾಂ. ವರದಿಗಾರ್ತಿ ಗೀತಾ ಹೊಸಮನಿ ಹಾಗೂ ಹೋಟೆಲ್ ಉದ್ಯಮಿ ಮಲ್ಲಿಕಾರ್ಜುನ್ ಬೀರನೂರ್ ಮತ್ತು ಪೊಲೀಸ್ ಕ್ರೀಡಾಕೂಟದಲ್ಲಿ ಅದ್ವಿತೀಯ ಸಾಧನೆ ಮಾಡಿದ ಡಿಎಆರ್ ಪೇದೆ ಭೀಮರಾವ್ ಜಾದವ್ ಅವರಿಗೆ ಗೌರವ ಸನ್ಮಾನ ಮಾಡಲಾಗುತ್ತಿದೆ. ಇದೇ ವೇಳೆಯಲ್ಲಿ ಮೆಟ್ರಿಕ್ ಹಾಗೂ ಪಿಯುಸಿಸ ಯಲ್ಲಿ ಅತಿ ಹೆಚ್ಚು ಅಂಕ ಪಡೆದ ಪೊಲೀಸ್ ಕುಟುಂಬದ ಮಕ್ಕಳಿಗೆ ವಿಶೇಷ ಸನ್ಮಾನ ಮಾಡಲಾಗುವುದು ಎಂದು ಅವರು ತಿಳಿಸಿದ್ದಾರೆ. ಈ ಪ್ರಶಸ್ತಿ ಕಾರ್ಯಕ್ರಮವನ್ನು ಗುಲ್ಬರ್ಗ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಪ್ರೊ. ಎಚ್ ಟಿ ಪೋತೆ ಉದ್ಘಾಟಿಸುವರು. ನಗರ ಪೊಲೀಸ್ ಕಮಿಷನರ್ ಡಾ. ಶರಣಪ್ಪ ಎಸ್. ಢಗೆ ಪ್ರಶಸ್ತಿ ವಿತರಣೆ ಮಾಡುವರು.

ಈ ಸಮಾರಂಭದಲ್ಲಿ ಕಲ್ಬುರ್ಗಿ ನಗರದ ಮಹಾನಗರ ಪಾಲಿಕೆಯ ಕರ ಹಾಗೂ ಹಣಕಾಸು ಸ್ಥಾಯಿ ಸಮಿತಿ ಅಧ್ಯಕ್ಷರಾದ ಅನುಪಮಾ ರಮೇಶ್ ಕುಮಾರ್, ಜಿಲ್ಲಾ ಪತ್ರಕರ್ತರ ಸಂಘದ ಉಪಾಧ್ಯಕ್ಷರಾದ ಡಾ. ಶಿವರಂಜನ್ ಸತ್ಯಂಪೇಟೆ, ಮಹಿಳಾ ಪೊಲೀಸ್ ಠಾಣೆಯ ಸಿಪಿಐ ಅಕ್ಕಮಹಾದೇವಿ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಬಾಬುರಾವ್ ಯಡ್ರಾಮಿ, ಕನ್ನಡ ಸಾಹಿತ್ಯ ಪರಿ?ತ್ತಿನ ಜಿಲ್ಲಾಧ್ಯಕ್ಷರಾದ ವಿಜಯಕುಮಾರ್ ತೇಗಲತಿಪ್ಪಿ, ಯುವ ಕಾಂಗ್ರೆಸ್ ನಿಕಟ ಪೂರ್ವ ಅಧ್ಯಕ್ಷರಾದ ಶಿವಕುಮಾರ್ ಹೊನಗುಂಟಿ, ಪತ್ರಕರ್ತ ಚಂದ್ರಶೇಖರ್ ಕವಲಗ ಅತಿಥಿಗಳಾಗಿ ಪಾಲ್ಗೊಳ್ಳುವರು. ಪ್ರತಿ?ನದ ಅಧ್ಯಕ್ಷ ಹಾಗೂ ಪತ್ರಕರ್ತ ಸೂರ್ಯಕಾಂತ್ ಜಮಾದಾರ್ ಅಧ್ಯಕ್ಷತೆ ವಹಿಸುವರು ಎಂದು ತಿಳಿಸಿದ್ದಾರೆ.

## ರೈತ ಸಂಘದಿಂದ ಪ್ರಥಮ ವರ್ಷಾಚರಣೆ ಕಾರ್ಯಕ್ರಮ



• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ :**

ಕುಕುನೂರು ತಾಲೂಕಿನ ನೂತನ ರೈತ ಘಟಕ ಮತ್ತು ನಗರ ಘಟಕದ ಸಂಘಟನೆಗಳು ಒಂದನೇ ವರ್ಷದ ವರ್ಷ ಕಾರ್ಯಕ್ರಮವನ್ನು ಜನವರಿ 26ರಂದು ಸೋಮವಾರ ಬೆಳಗ್ಗೆ 11 ಗಂಟೆಗೆ ಮುಂಡರಗಿ ಅನ್ನದಾನೇಶ್ವರ ಶಾಖ ಮಠದಲ್ಲಿ ಆಯೋಜಿಸಲಾಗಿತ್ತು ಕಾರ್ಯಕ್ರಮಕ್ಕೆ ಆಗಮಿಸಬೇಕೆಂದು ಎಸಿ ಮಹೇಶ್ ಮಾಲಗಿತ್ತಿ ಯವರಿಗೆ ಶನಿವಾರ ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ಆಮಂತ್ರಣ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ತಾಲೂಕಾ ಪ್ರಧಾನ ಕಾರ್ಯದರ್ಶಿ ಈಶಪ್ಪ ಸಬರದ್ ಮಾತನಾಡಿ ಭಾಗದಲ್ಲಿ ರೈತರ ಸಮಸ್ಯೆಗಳ ನಿವಾರಣೆಗಾಗಿ ಹಾಗೂ ರೈತರ ಶ್ರೇಯೋಭಿವೃದ್ಧಿಗೆ ಶ್ರಮಿಸಲು ಈ ಸಂಘವನ್ನು ಕಳೆದ ವರ್ಷ ಜನವರಿ 26ರಂದು ಉದ್ಘಾಟಿಸಲಾಗಿತ್ತು. ಈಗ ಸಂಘದ ಒಂದು ವರ್ಷದ ವರ್ಷ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು,ತಾಲೂಕಿನ ಸಮಸ್ತ ರೈತ ಬಾಂಧವರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಬೇಕೆಂದು ಕರೆ ನೀಡಿದರು. ಈ ಸಂದರ್ಭದಲ್ಲಿ ತಸಿಲ್ದಾರ್ರಾದ ಬಸವರಾಜ್ ಬೆಣ್ಣಿ ಶಿರೂರ್ ರೈತ ಸಂಘದ ಅಧ್ಯಕ್ಷ ದೇವಪ್ಪ ಸೊಬನದ,ಶರಣಪ್ಪ ಚಂಡೂರ್,ಬಸವರಾಜ್ ಇಬೆರಿ, ಶಿವಪ್ಪ ಸಂದಿಮನಿ,ಹನುಮಪ್ಪ ಮರಡಿ,ಬಸವರಾಜ್ ದಿವಟರ್,ಪಕೀರಪ್ಪ ಯಡ್ಡೋಣಿ,ಶ್ರೀಕಾಂತ್ ವಾಲ್ಮೀಕಿ, ಶಿವಪ್ಪ ಬಂಗಿ,ಕಾಸಿಮಲ್ಲಿ ಸಂಟಿ ಬಸವರಾಜ ಲಾಲ್ ಗುಂಡರ್, ಶರಣಪ್ಪ ಯತ್ನಟ್ಟಿ, ಮಹೇಶ್ ಗಾವರಾಳ, ತಾಪಂ ಮಾಜಿ ಸದಸ್ಯ ಸುಭಾಷ್ ಮಾದನೂರ್, ಈರಪ್ಪ ದ್ಯಾಂಪುರ ಇತರರಿದ್ದರು.

## ಅಂಬಿಗರ ಚೌಡಯ್ಯ ಜಯಂತಿ ಪೂರ್ವಭಾವಿ ಸಭೆ



• **ಮಲ್ಲಮ್ಮ ನುಡಿ ವಾರ್ತೆ ಕುಕನೂರು:**

ಇದೇ ಜನವರಿ 21ರಂದು ನಡೆಯಲಿರುವ ನಿಜಶರಣ ಅಂಬಿಗರ ಚೌಡಯ್ಯನ ಜಯಂತಿಯನ್ನು ಪ್ರತಿಯೊಬ್ಬರು ಆಚರಣೆ ಮಾಡಬೇಕು ಹಾಗೂ ಅವರ ಆದರ್ಶವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಗ್ರೇಡ್ 2 ತಶಿಲ್ದಾರ್ ಮುರಳಿಧರ್ ರಾವ್ ಕುಲಕರ್ಣಿ ಹೇಳಿದರು.

ಪಟ್ಟಣದ ತಹಸೀಲ್ದಾರ ಕಚೇರಿಯಲ್ಲಿ ಆಯೋಜಿಸಲಾದ ನಿಜಶರಣ ಅಂಬಿಗರ ಚೌಡಯ್ಯನ ಜಯಂತಿ ಕುರಿತು ಪೂರ್ವಭಾವಿ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು 12ನೇ ಶತಮಾನದ ಶರಣರಲ್ಲಿ ಒಬ್ಬರಾದ ನಿಜಶರಣ ಅಂಬಿಗರ ಚೌಡಯ್ಯನವರು ತಮ್ಮ ಸಾಹಿತ್ಯದ ಮೂಲಕ ಸಮಾಜದ ಅಂಕುಡೊಂಕುಗಳನ್ನು ತಿದ್ದುವಲ್ಲಿ ಶ್ರಮಿಸಿದಂತವರು ಅಂತವರ ಜಯಂತಿಯನ್ನು ಪ್ರತಿಯೊಂದು ಇಲಾಖೆಯಲ್ಲಿ ತಪ್ಪದೆ ಆಚರಣೆ ಮಾಡಬೇಕು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಸಮಾಜದ ಮುಖಂಡರಾದ ರಾಮಣ್ಣ ಕೌದಿ ಮಾತನಾಡಿ ಪ್ರತಿಯೊಂದು ಶಾಲೆಯಲ್ಲಿ ನೇಚಚರಣ ಅಂಬಿಗರ ಚೌಡಯ್ಯನ ಜಯಂತಿ ಆಚರಣೆ ಮಾಡುವ ಮೂಲಕ ಅವರ ವಿಚಾರಧಾರೆಗಳನ್ನು ಮಕ್ಕಳಿಗೆ ತಿಳಿಸುವಂತೆ ಸಲಹೆ ನೀಡಬೇಕು ಎಂದರು ಸಮಾಜದ ತಾಲೂಕ ಅಧ್ಯಕ್ಷರು ಬಾರ್ಕೆರ್ ಮಾತನಾಡಿ. ಪಟ್ಟಣದ ಹರಿ ಶಂಕರ್ ಬಂಡಿ ರಸ್ತೆಯಲ್ಲಿರುವ ನಿಜಶರಣ ಅಂಬಿಗರ ಚೌಡಯ್ಯನ ವೃತ್ತದ ಸುತ್ತ ಸ್ವಚ್ಛಗೊಳಿಸಬೇಕು ಹಾಗೂ ಚೌಡಯ್ಯನ ವೃತ್ತದ ಬಳಿ ವಿದ್ಯುತ್ ಬಲ್ಬುಗಳ ಅಳವಡಿಸಬೇಕು ಎಂದು ಸಭೆಯಲ್ಲಿ ತಿಳಿಸಿದರು. ಶಿರೆಸದರ್ ಮಮ್ಮಾದ್ ಮುಸ್ತಾಫ್,ಸಮಾಜದ ಮುಖಂಡರಾದ ಬಾಳಪ್ಪ ಬಾರ್ಕೆರ್ ಶಿವಪುತ್ರಪ್ಪ ಮಡ್ಡಿ, ಗುದ್ನೇಪ್ಪ ಈಟಿ,ಬಾಳಪ್ಪ ಈಟಿ,ಲಿಂಗರಾಜ್ ಕೋನಾರಿ,ರಾಮಣ್ಣ ಬಾರ್ಕೆರ್, ಮಂಜುನಾಥ ಬಾರ್ಕೆರ್, ಪರಶುರಾಮ್ ಬಾರ್ಕೆರ್ ಗುರು ಬಾರ್ಕೆರ್ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಭಾಗವಹಿಸಿದ್ದರು.

## ಆಧುನಿಕ ಮನು ದಾದಾ ಲೇಖರಾಜ್



• **ಮಲ್ಲಮ್ಮ ನುಡಿ ವಾರ್ತೆ ಚಾಮರಾಜನಗರ:**

ಜಗತ್ತು ನೈತಿಕವಾಗಿ, ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ, ರಾಜಕೀಯವಾಗಿ, ಆಡಳಿತಾತ್ಮಕವಾಗಿ, ವೈದ್ಯಕೀಯವಾಗಿ, ಅದಃಪತನ ಹೊಂದುತ್ತಿರುವ ಸಂದಿಗ್ದ ಸಮಯದಲ್ಲಿ ಹೊಸ ಜಗತ್ತಿಗೆ ಪವಿತ್ರತೆಯ ಬುನಾದಿಯನ್ನ ಹಾಕಿದ ನೂತನ ಮನು ದಾದಾ ಲೇಖರಾಜ್ ಎಂದು ಮನೋಬಲ ತಜ್ಞೆ ರಾಜಯೋಗಿನಿ ಬ್ರಹ್ಮಾಕುಮಾರಿ ದಾನೇಶ್ವರೀಜೀ ಅಭಿಪ್ರಾಯಪಟ್ಟರು. ಅವರು ಅಂತರಾಷ್ಟ್ರೀಯ ಆಧ್ಯಾತ್ಮಿಕ ಸಂಸ್ಥೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಪ್ರಕಾಶ ಭವನದಲ್ಲಿ ಇಂದು ಏರ್ಪಡಿಸಲಾಗಿದ್ದ ಅವ್ಯಕ್ತ ಪಿತಾಶ್ರೀ ಬ್ರಹ್ಮಾ ಬಾಬಾರವರ 57ನೇ ಸ್ಮೃತಿ ದಿನಾಚರಣೆಯಲ್ಲಿ ಭಾಗವಹಿಸಿ ಮಾತನಾಡುತ್ತಿದ್ದರು.

1,876ರಲ್ಲಿ ಸಿಂದ್ ಹೈದರಾಬಾದ್ ಕರಾಚಿಯಲ್ಲಿ ಕೃಪಾ ಲಾನಿ ವಂಶದ ಮುಖ್ಯೋಪಾಧ್ಯಾಯರ ಮಗನಾಗಿ ಜನಿಸಿದ ದಾದಾ ಲೇಖರಾಜ್, ಚಿಕ್ಕ ವಯಸ್ಸಿನಲ್ಲೇ ತಂದೆ ತಾಯಿಯನ್ನು ಕಳೆದುಕೊಳ್ಳುತ್ತಾರೆ ಚಿಕ್ಕಪ್ಪನ ಆಶ್ರಯದಲ್ಲಿ ಗೋದಿ ವ್ಯಾಪಾರದಲ್ಲಿ ತೊಡಗುತ್ತಾರೆ ನಂತರ ದೊಡ್ಡ ವಜ್ರದ ವ್ಯಾಪಾರಿಯಾಗಿ ರಾಜ ಮಹಾರಾಜರ ಸಂಪರ್ಕದಲ್ಲಿಯೂ ಸಹ ಇರುತ್ತಾರೆ. ಒಮ್ಮೆ ಮೈಸೂರಿಗೆ ಬಂದಿದ್ದರು ಧಾರ್ಮಿಕವಾಗಿ ಆಧ್ಯಾತ್ಮಿಕವಾಗಿ 12 ಜನರ ಗುರುಗಳನ್ನು ಮಾಡಿಕೊಂಡಿದ್ದರು ಅವರ 60ನೇ ವಯಸ್ಸಿನಲ್ಲಿ ಈ ಜಗತ್ತಿನ ಪರಿವರ್ತನೆ ಹಾಗೂ ಹೊಸ ಪ್ರಪಂಚದ ಸ್ಥಾಪನೆಯ ಸಾಕ್ಷಾತ್ಕಾರ ಮಾಡಿಕೊಳ್ಳುತ್ತಾರೆ. ವಿಶ್ವದ ಶಕ್ತಿ ಪರಮಾತ್ಮನ ಆದೇಶದಂತೆ ಅವರ ತನುವನ್ನು ಸಾಕಾರ ಮಾಧ್ಯಮವಾಗಿ ಮಾಡಿಕೊಳ್ಳುತ್ತಾರೆ. ಹೊಸ ಜಗತ್ತಿನ ಸ್ಥಾಪನೆಯಾಗಿ ಸಿಂದ್ ಹೈದರಾಬಾದ್ ಕರಾಚಿಯಲ್ಲಿ 500 ಜನ ಮಾತೆಯರು ಕನ್ಯೆಯರ ನೇತೃತ್ವದಲ್ಲಿ ಓಂ ಮಂಡಳಿ ಎಂಬ ಆಧ್ಯಾತ್ಮಿಕ ಸಂಸ್ಥೆಯನ್ನು ಹುಟ್ಟು ಹಾಕಿ ತಮದೆಲ್ಲವನ್ನ ಸರ್ವಸ್ವವನ್ನು ಅವರಿಗೆ ಅರ್ಪಣೆ ಮಾಡುತ್ತಾರೆ.1950 ರಲ್ಲಿ ಭಾರತ ಪಾಕಿಸ್ತಾನ ವಿಭಜನೆ ಆದಾಗ ತಮ್ಮ ತಪಸ್ಸಿನ ಸ್ಥಾನವನ್ನು ಮಾಡಿಕೊಂಡು ಭಾರತದ ಮೌಂಟ್ ಅಬುವಿಗೆ ಸ್ಥಳಾಂತರಗೊಳ್ಳುತ್ತಾರೆ.ಸಾಧು ಸಂತ ಸನ್ಯಾಸಿಗಳು ಮಾಡುವುದಕ್ಕಾಗದ ಅಸಂಬವ ಕಾರ್ಯ ಕಾರ್ಯವನ್ನು ಗ್ರಹಸ್ಥದಲ್ಲಿದ್ದು ಪವಿತ್ರ ಜೀವನ ನಡೆಸಲು ಸಾಧ್ಯ ಎಂಬುದನ್ನು ತೋರಿಸಿಕೊಟ್ಟರು.

## ಜಿಬಿಎ ಅಕಾಂಕ್ಷಿ



• **ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು:**

ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತ ಸರಳ ಸಜ್ಜನಿಕೆಯ ಸ್ನೇಹ ಸನ್ಮಾರ್ಗದಲ್ಲಿ ನಡೆಯುತ್ತಾ ಸ್ಥಳೀಯವಾಗಿಯೂ ಗುರುತಿಕೊಂಡ ವ್ಯಕ್ತಿ ಬ ನಾ ರವಿ ರವರು ಮುಂಬರುವ ಬೆಂಗಳೂರು ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯ ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಹೆಗ್ಗನಹಳ್ಳಿ ವಾರ್ಡ್ ನಿಂದ ಅಥವಾ ಶ್ರೀಗಂಧನಗರ ವಾರ್ಡ್ ನಿಂದ ಶ್ರೀಮತಿ ಪಾರ್ವತಮ್ಮ ಬ ನಾ ರವಿ ರವರು ಕಾಂಗ್ರೆಸ್ ಪಕ್ಷದಿಂದ ಜಿಬಿಎ ಚುನಾವಣಾ ಆಕಾಂಕ್ಷಿಯಾಗಿ ಸ್ಪರ್ಧೆ ಬಯಸಿದ್ದಾರೆ.ತಲಾತಲಾಂತರಗಳಿಂದ ಬನಾ ರವಿ ಕುಟುಂಬ ಕಾಂಗ್ರೆಸ್ ಪಕ್ಷದಲ್ಲಿ ನಿಷ್ಠಾವಂತ ಕಾರ್ಯಕರ್ತರಾಗಿ ಪಕ್ಷಕ್ಕಾಗಿ ದುಡಿಯುತ್ತಿದ್ದಾರೆ.

ಗ್ರಾಮೀಣ ಕುಟುಂಬದಿಂದ ಬಂದ ಇವರು ಹೆಗ್ಗನಹಳ್ಳಿಯಲ್ಲಿ ವಿದ್ಯಾಭೂಷಣ್ ಇಂಟರ್ನ್ಯಾಷನಲ್ ಶಾಲೆ, ಅಸ್ಪತ್ರೆ ಹೀಗೆ ಬ ನಾ ರವಿ ಗ್ರೂಪ್ಸ್ ಅಫ್ ಕಂಪನಿ ಮೂಲಕ ಹಲವಾರು ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಿಕೊಟ್ಟಿರುವ ಇವರು ತಮ್ಮ ಹುಟ್ಟೂರು ಕುಣಿಗಲ್ ತಾಲ್ಲೋಕಿನ ಹುಲಿಯೂರುದುರ್ಗದ ಬಂಡಿಹಳ್ಳಿಯಲ್ಲಿ ಕಾಂಗ್ರೆಸ್ ಪಕ್ಷದಿಂದ ಸ್ಪರ್ದಿಸಿ ಸದ್ಯ ಗ್ರಾಮಪಂಚಾಯತಿ ಸದಸ್ಯರಾಗಿದ್ದು ಗ್ರಾಮವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯದಿದ್ದು ತಮ್ಮ ಕಾರ್ಯಕ್ಷೇತ್ರವಾಗಿರುವ ದಾಸರಹಳ್ಳಿ ಕ್ಷೇತ್ರದ ರಾಜಕೀಯದಲ್ಲಿ ಮತ್ತೊಮ್ಮೆ ತಮ್ಮ ಅದೃಷ್ಟ ಪರೀಕ್ಷೆಗೆ ಮುಂದಾಗಿದ್ದಾರೆ.

ಮುಂಬರುವ ಜಿಬಿಎ ಚುನಾವಣೆಯಲ್ಲಿ ದಾಸರಹಳ್ಳಿ ಕ್ಷೇತ್ರದಿಂದ ತಾವಾಗಲೀ ಅಥವಾ ಅವರ ಶ್ರೀಮತಿ ಪಾರ್ವತಮ್ಮ ಬನಾ ರವಿರವರು ಹೆಗ್ಗನಹಳ್ಳಿ ಅಥವಾ ಶ್ರೀಗಂಧ ನಗರ ವಾರ್ಡ್ ನಿಂದ ಸ್ಪರ್ದಿಸಿ ಜನಸೇವೆಗೆ ಮುಂದಾಗಿದ್ದು ಪಕ್ಷ ಇವರ ನಿಷ್ಠಾವಂತ ಸೇವೆಯನ್ನು ಗುರುತಿಸಿ ಸ್ಪರ್ದಿಸಲು ಅವಕಾಶ ನೀಡಿದರೆ ಕಾಂಗ್ರೆಸ್ ಪಕ್ಷಕ್ಕೆ ಗೆಲುವು ತಂದುಕೊಡುವುದರಲ್ಲಿ ಸಂಶಯವಿಲ್ಲ.

ಶ್ರೀಮತಿ ಪಾರ್ವತಮ್ಮ ಬ.ನಾ.ರವಿಯವರು ವಿದ್ಯಾಭೂಷಣ್ ಸಂಸ್ಥೆಯ ಪ್ರಾಂಶುಪಾಲರಾಗಿ ಪದವೀಧರೆಯಾಗಿ ಹಿಂದೆ 2016ರಲ್ಲಿ ಕಾಂಗ್ರೆಸ್ ಪಕ್ಷದಿಂದ ತಾಲ್ಲೋಕು ಪಂಚಾಯಿತಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಅದಾದ ನಂತರ 2016 ರಲ್ಲಿ ಬ.ನಾ ರವಿ ರವರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಚುನಾವಣೆಯಲ್ಲೂ ಸಹ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು ಅದಾದ ಮೇಲೆ 2020ರಲ್ಲಿ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಇದರ ಮಧ್ಯೆ 2017ರಲ್ಲಿ ಚಲನಚಿತ್ರ ನಿರ್ಮಾಣಕ್ಕೂ ಸಹ ಮುಂದಾಗಿ ಮದುವೆ ದಿಬ್ಬಣ ಹಾಗೂ ಕರ್ಮ ಭೂಮಿ ನಿರ್ಮಾಪಕರಾಗಿದ್ದರು.

# ಅಕ್ರಮ ಮರಳುಗಾರಿಕೆ ತಡೆಯುವಂತೆ ಐಜಿಪಿಗೆ ಮನವಿ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.

ವಡಗೇರಾ ತಾಲೂಕಿನ ಚನ್ನೂರ್ ಜೆ ಗ್ರಾಮದಲ್ಲಿ ಅಕ್ರಮ ಮರಳುಗಾರಿಕೆ ತಡಿಯುವುದರ ಜೊತೆಗೆ ನನಗೆ ಜೀವ ಬೆದರಿಕೆ ಇದ್ದು ಸೂಕ್ತ ಕ್ರಮ ಕೈಗೊಳ್ಳುವಂತೆ ಸಾಮಾಜಿಕ ಕಾರ್ಯಕರ್ತ ಮಲ್ಲಿಕಾರ್ಜುನ್ ರೆಡ್ಡಿ. ಪೊಲೀಸ್ ಪಾಟೀಲ್ ಕಲಬುರಗಿ ಪೊಲೀಸ್



ಮಹಾ ನಿರೀಕ್ಷಕರು ಈಶಾನ್ಯ ವಲಯ ರವರಿಗೆ ಮನವಿ ಸಲ್ಲಿಸಿ ಅವರು ಮಾತನಾಡಿದರು.ಚೆನ್ನೂರ್ ಜೆ.ಗ್ರಾಮದ ಕೃಷ್ಣಾ ನದಿಯಿಂದ ಹಗಲು ಇರುಳು ಎನ್ನದೆ ಅಕ್ರಮವಾಗಿ ಟ್ರ್ಯಾಕ್ಟರಗಳ ಮೂಲಕ ಬೇರೆ ಕಡೆಗೆ ಮರಳು ಕೂಡಿಹಾಕಿ ಟಿಪ್ಪರಗಳ ಮೂಲಕ ಅಕ್ರಮ ಮರಳುಗಾರಿಕೆ ನಡೆದಿದ್ದು ಅದನ್ನು ತಡೆಯುವಂತೆ ವಡಗೇರಾ ಪೊಲಿಸ್ ಠಾಣೆಯ ಅಧಿಕಾರಿಗಳ ಗಮನಕ್ಕೆ ತಂದರು ಯಾವುದೇ ಪ್ರಯೋಜನವಾಗಿಲ್ಲ ಅಕ್ರಮ ಮರಳುಗಾರಿಕೆ ಕುರಿತು ಪೊಲೀಸರಿಗೆ ನಾನು ಮಾಹಿತಿ ನೀಡಿದರೆ ವಡಗೇರಾ ಪೊಲೀಸ್ ಠಾಣೆಯ ಕೆಲವು ಪೊಲೀಸರು ಅಕ್ರಮ ಮರಳುಗಾರಿಕೆಯ ವ್ಯಕ್ತಿಗಳ ಪರವಾಗಿದ್ದಾರೆ ಅವರಿಗೆ ಮಾಹಿತಿ ನೀಡುತ್ತಾರೆ ಎಂದು ತಿಳಿಸಿದರು.ಜಿಲ್ಲಾ ಭೂ ಗಣಿ ವಿಜ್ಞಾನ ಇಲಾಖೆಗೂ ಮನವಿ ಸಲ್ಲಿಸಿದರು ಕ್ರಮ ಕೈಗೊಂಡಿಲ್ಲ ಅಕ್ರಮ ಮರಳುಗಾರಿಕೆಯಿಂದ ಸಾರ್ವಜನಿಕರಿಗೂ ಗ್ರಾಮಸ್ಥರಿಗೆ ತೊಂದರೆಯಾಗಿದೆ ಗ್ರಾಮದ ರಸ್ತೆಯು ಅತ್ಯಂತ ಚಿಕ್ಕದಾಗಿದ್ದು ಪಕ್ಕದಲ್ಲಿಯೇ ಶಾಲೆ ಇದೆ ಶಾಲಾ ಮಕ್ಕಳಿಗೆ ತೊಂದರೆಯಾಗುವುದರ ಜೊತೆಗೆ ರಸ್ತೆಗಳು ಕೂಡಾ ಸಂಪೂರ್ಣ ಹದಗೆಡುತ್ತಿವೆ ಹಗಲು ರಾತ್ರಿ ಎನ್ನದೆ ಮರಳು ಸಾಗಾಣಿಕೆ ಮಾಡುವುದರಿಂದ ಗ್ರಾಮಸ್ಥರಿಗೂ ಕಿರಿಕಿರಿ ಉಂಟಾಗುತ್ತಿದೆ ಆದ್ದರಿಂದ ಅಕ್ರಮ ಮರಳುಗಾರಿಕೆಯನ್ನು ತಡೆಯಬೇಕು ಒಂದು ವೇಳೆ ವಿಳಂಬ ಮಾಡಿದ್ದಲ್ಲಿ ಗ್ರಾಮಸ್ಥರೊಂದಿಗೆ ಉಗ್ರ ಹೋರಾಟ ಮಾಡುವುದಾಗಿ ಸಾಮಾಜಿಕ ಕಾರ್ಯಕರ್ತ ಮಲ್ಲಿಕಾರ್ಜುನ್ ರೆಡ್ಡಿ ಪೊಲೀಸ್ ಪಾಟೀಲ್ ಎಚ್ಚರಿಸಿದ್ದಾರೆ.

# ಭೀಮಣ್ಣ ಖಂಡ್ರೆ ನಿಧನಕ್ಕೆ ಚಿಂಚನಸೂರು ಸಂತಾಪ.



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಹಿರಿಯ ರಾಜಕಾರಣಿ, ಮುತ್ಸದ್ದಿ ಹಾಗೂ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ ಮಾಜಿ ಅಧ್ಯಕ್ಷ ಭೀಮಣ್ಣ ಖಂಡ್ರೆ ಅವರ ನಿಧನಕ್ಕೆ ಮಾಜಿ ಸಪ್ತಖಾತೆ ಸಚಿವರು ಹಾಗೂ ನಿಜಶರಣ ಅಂಬಿಗರ ಚೌಡಯ್ಯ ನಿಗಮದ ಅಧ್ಯಕ್ಷರಾದ ಬಾಬುರಾವ್ ಚಿಂಚನಸೂರ ಅವರು ಸಂತಾಪ ವ್ಯಕ್ತಪಡಿಸಿದ್ದಾರೆ. ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡು, ಕರ್ನಾಟಕ ಏಕೀಕರಣ ಚಳವಳಿಯಲ್ಲಿಯೂ ಪ್ರಮುಖ ಕೊಡುಗೆ ನೀಡಿರುವ ಭೀಮಣ್ಣ ಖಂಡ್ರೆಯವರ ಜನಪ್ರಿಯತೆಯು ತೆರೆದ ಇತಿಹಾಸವಾಗಿದೆ. ರಾಜ್ಯದ ಅತ್ಯಂತ ಪ್ರಭಾವಿ ನಾಯಕತ್ವ ಹೊಂದಿದವರು ಅವರ ನಿಧಾನವು ತುಂಬಲಾರದ ನಷ್ಟವಾಗಿದೆ. ಭಗವಂತನು ಮೃತರ ಕುಟುಂಬ ಮತ್ತು ಅಭಿಮಾನಿಗಳಿಗೆ ಈ ದುಃಖವನ್ನು ಸಹಿಸುವ ಶಕ್ತಿ ನೀಡಲಿ ಎಂದು ಅವರು ಪ್ರಾರ್ಥಿಸಿದ್ದಾರೆ.

# ಗಣರಾಜ್ಯೋತ್ಸವಕ್ಕೆ ರಾಯಣ್ಣನ ಭಾವಚಿತ್ರ ಕಡ್ಡಾಯಗೊಳಿಸಿ

ಭೀಮು ಪೂಜಾರಿ. •




ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.

ಯಾದಗಿರಿ:ಸರ್ಕಾರದ ಆದೇಶದಂತೆ ಜನೇವರಿ-26 ಗಣರಾಜ್ಯೋತ್ಸವ ದಂದು ಜಿಲ್ಲೆಯ ಸರ್ಕಾರಿ ಕಛೇರಿಯಲ್ಲಿ, ಸರ್ಕಾರಿ, ಖಾಸಗಿ ಶಾಲಾ ಕಾಲೇಜುಗಳಲ್ಲಿ ಖಾಸಗಿ ಬ್ಯಾಂಕುಗಳಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣರವರ ಭಾವಚಿತ್ರಕ್ಕೆ ಪೂಜೆ ಮಾಡುವ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸಮಾಜಿಕ ಕಾರ್ಯಕರ್ತ ಭೀಮು ಪೂಜಾರಿ ಒತ್ತಾಯಿಸಿದ್ದಾರೆ. ಈ ಕುರಿತು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ ಅವರು, ಸರ್ಕಾರದ ಸುತ್ತೋಲೆ ಸಂ. ಸಿಆಸುಇ 60/ ಹೆಚ್.ಪಿ.ಎ./2021 ದಿ: 13-08-2021 ಅನ್ವಯ ಕಳೆದ ನಾಲ್ಕು ವರ್ಷಗಳ ಹಿಂದೆಯೇ ಆದೇಶವಾಗಿದ್ದು, ಇದನ್ನು ಅನುಪಾಲನೆ ಮಾಡಲು ಕ್ರಮ ವಹಿಸುವಂತೆ ಮನವಿ ಮಾಡಿದರು. ಜನೇವರಿ 26 ಗಣರಾಜ್ಯೋತ್ಸವ ದಿನದಂದು ಸ್ವಾತಂತ್ರ ಹೋರಾಟದಲ್ಲಿ ಭಾಗಿಯಾಗಿ, ಈ ದೇಶಕ್ಕೆ ಸ್ವಾತಂತ್ರ ತಂದು ಕೊಟ್ಟ ಮಹಾ ಕ್ರಾಂತಿಕಾರಿಯಾಗಿ, ದೇಶಕ್ಕಾಗಿಯೇ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದು, ವೀರಮರಣವನ್ನಪ್ಪಿದ ದೇಶಭಕ್ತರಾಗಿದ್ದಾರೆ. ಅವರ ತ್ಯಾಗದ ಕುರಿತು ಮುಂದಿನ ಪೀಳಿಗೆಗೆ ತಿಳಿಸಿಕೊಡುವ ನಿಟ್ಟಿನಲ್ಲಿ ಮತ್ತು ಅವರ ತ್ಯಾಗ ಬಲಿದಾನ ನೆನಪಿಸಿಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯವಾಗಿದ್ದು, ಈ ನಿಟ್ಟಿನಲ್ಲಿ ಜನೇವರಿ 26 ಗಣರಾಜ್ಯೋತ್ಸವ ದಿನದಂದು ಕಡ್ಡಾಯವಾಗಿ ಜಿಲ್ಲೆಯ ಸರ್ಕಾರಿ ಕಛೇರಿಯಲ್ಲಿ ಸರ್ಕಾರಿ/ಖಾಸಗಿ ಶಾಲಾ/ಕಾಲೇಜುಗಳಲ್ಲಿ/ಖಾಸಗಿ ಬ್ಯಾಂಕುಗಳಲ್ಲಿ/ ಖಾಸಗಿ ಕಛೇರಿಗಳಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣರವರ ಭಾವಚಿತ್ರ ಗೌರವ ನಮನ ಸಲ್ಲಿಸುವಂತೆ ತಾವು ಎಲ್ಲಾ ಸರ್ಕಾರಿ ಕಛೇರಿಗಳಿಗೆ ಸೂಚಿಸಲು ಮನವಿ ಮಾಡಿದರು. ಈ ಸಂದರ್ಭದಲ್ಲಿ ಮುಖಂಡರಾದ ಭೀಮು ಪೂಜಾರಿ ವಾಡಿ, ಶರಣು ಪೂಜಾರಿ ಮದರಕಲ್, ಬಸವರಾಜ ಯಾಳಗಿ ಇನ್ನಿತರರು ಇದ್ದರು.

# ಯಲ್ಲೆರಿ ಗ್ರಾಮದಲ್ಲಿ ಕೋಳಿ ಫಾರ್ಮನ ಪರವಾನಿಗೆ ರದ್ದು ಮಾಡಿ

## ಶರಣಬಸಪ್ಪ ಯಲ್ವೇರಿ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.

ಗುರುಮಠಕಲ್ ತಾಲೂಕಿನ ಯಲ್ಲೇರಿ,ಗಣಪೂರ&ಕಾಳೆಬೆಳಗುಂದಿ, ಗ್ರಾಮಗಳಲ್ಲಿ ಮೇ.ಸ್ನೇಹಾ

ಫಾರ್ಮ ಲಿಮಿಟೆಡ್ ಕಂಪನಿ ಯವರು ಬೃಹತ್ ಪ್ರಮಾಣದ ಕೋಳಿ ಫಾರ್ಮಗಾಗಿ ಕಟ್ಟಡ

ನಿರ್ಮಿಸುತ್ತಿದ್ದು, ಅದನ್ನು ಕೂಡಲೇ ರದ್ದು ಮಾಡಿ ಬೀಗ ಹಾಕುವಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆ ಗುರುಮಠಕಲ್ ತಾಲುಕ ಘಟಕವತಿಯಿಂದ ತಾಲೂಕ ಅಧ್ಯಕ್ಷರಾದ ಶರಣಬಸಪ್ಪ ಯಲ್ವೇರಿ ರವರು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ ಹೇಳಿದರು. ಗುರುಮಠಕಲ್ ತಾಲೂಕಿನ ಯಲ್ವೇರಿ ಗಣಪೂರ, ಕಾಳೆಬೆಳಗುಂದಿ ಗ್ರಾಮದಲ್ಲಿ ಮೇ.ಸ್ನೇಹಾ ಫಾರ್ಮ ಲಿಮಿಟೆಡ್ ಕಂಪನಿಯವರು ಮಾಲೀಕರಾದ ದಂಡಿ ರಾಮರೆಡ್ಡಿ ಯವರು ಆಕ್ರಮ ಕೋಳಿ ಸಾಕಾಣಿಕೆ & ಕಟ್ಟಡ ನಿರ್ಮಿಸುತ್ತಿದ್ದಾರೆ ನಮ್ಮ ರೈತರಲ್ಲಿ ಭೂಮಿಯನ್ನು ಹತ್ತಿರ ವ್ಯವಸಾಯ ಮಾಡುವದಕ್ಕಾಗಿ ಎಂದು ಪಡೆದು ಅದನ್ನು ಫಾರ್ಮ ಹೆಸರಿಗೆ ಮಾಡಿಕೊಂಡು ಸುಮಾರು 25 ಎಕರೆಗಳಲ್ಲಿ ಕೋಳಿ ಫಾರ್ಮನ್ನು ಪ್ರಾರಂಭ ಮಾಡುತ್ತಿದ್ದಾರೆ ಇದರಿಂದ ಜಮೀನು ಹೊಂದಿದ ರೈತರಿಗೆ ಮೋಸ ಮಾಡಿದ್ದಾರೆ ಎಂದು ಹೇಳಿದ್ದಾರೆ

ಆಂಧ್ರ ಮೂಲದ ವ್ಯಕ್ತಿ ಮೂಲಕ ಕೋಳಿ ಫಾರಂ ನಡೆಸುತ್ತಿದ್ದು, ಇದ-ರಿಂದ ಗ್ರಾಮದಲ್ಲಿ & ರೈತರಿಗೆ ಚಿಕನ್ ಗುನ್ಯಾ, ಹಕ್ಕಿ ಜ್ವರ, ಇತರೆ ಕಾಯಿಲೆಗಳಿಂದ ಜನರು ಬಳಲುಬಹುದು, ಪಕ್ಕದಲ್ಲಿ ಕೃಷಿ ಜಮೀನು ಇದ್ದು,ಕೆಟ್ಟ ವಾಸನೆಯಿಂದ ಕೂಲಿ ಕಾರ್ಮಿಕರು,ರೈತರ ಮೇಲೆ ದುಷ್ಪರಿಣಾಮ ಬೀರಿ,ಕೃಷಿ ಚಟುವಟಿಕೆಗೆ ತೊಂದರೆ ಉಂಟಾಗುತ್ತದೆಂದು ತಿಳಿಸಿದ್ದರು. ಇವರು ಸ್ಥಳೀಯರ ಭೂಮಿಯನ್ನು ಖರೀದಿ ಮಾಡಿ ನಮ್ಮ ಕರ್ನಾಟಕದ ಸ್ಥಳೀಯ ಜನರಿಗೆ ಉದ್ಯೋಗವನ್ನು ನೀಡದೇ ಬಿಹಾರ ಮತ್ತು ಉತ್ತರ ಪ್ರದೇಶದಂತ ಹೊರ



ರಾಜ್ಯದಿಂದ ಕೂಲಿ ಕಾರ್ಮಿಕರನ್ನು ಕರೆದುಕೊಂಡು ಬಂದು ಹಗಲು ರಾತ್ರಿ ಎನ್ನದೆ ಯಾವುದೇ ರೀತಿಯ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳದೇ ಕಾಮಗಾರಿಯನ್ನು ಮಾಡುತ್ತಿದ್ದಾರೆ ಇದರಿಂದ ಸ್ಥಳೀಯ ಯುವಕರಿಗೆ ಉದ್ಯೋಗ ದೊರಕದೇ ನಿರೋದ್ಯೋಗಿಗಳಾಗುತ್ತದ್ದಾರೆಂದು ಬೇಸರ ವ್ಯಕ್ತ ಪಡಿಸಿದ್ದಾರೆ. ಗ್ರಾಮ ಪಂಚಾಯತಿಯು ಈ ಕಂಪನಿಯವರಿಗೆ ಕಾನೂನು ಪ್ರಕಾರ ಯಾವ ರೀತಿಯ ಪರವಾನಿಗೆ ನೀಡಿದೆ ಎಂದು ನಮಗೆ ಗೊತ್ತಿಲ್ಲ. ಸುಮಾರು 25 ಎಕರೆಗಳಷ್ಟು ದೊಡ್ಡಪ್ರಮಾಣದಲ್ಲಿ ಕೋಳಿ ಫಾರ್ಮ ನಿರ್ಮಾಣ ಮಾಡುವುದು ಇದು ದೊಡ್ಡ ಕೈಗಾರಿಕೆ ಆಗಿದೆ. ಅದನ್ನು ಗ್ರಾಮ ಪಂಚಾಯತಿ ಅಧಿಕಾರಿಗಳು ಯಾವುದೇ ರೀತಿಯ ಗ್ರಾಮಸಭೆ ಕರೆಯದೆ ಅವರಿಗೆ ಪರವಾನಿಗೆ ನೀಡಿ ಮತ್ತು ಕೆಲವೊಬ್ಬ ಗ್ರಾಮ ಪಂಚಾಯತಿ ಸದಸ್ಯರ ಸಹಿಯನ್ನು ಕಳ್ಳತನದಿಂದ ಸಹಿ ಮಾಡಿ ಪರವಾನಿಗೆಯನ್ನು ನೀಡಿದ್ದಾರೆ. ಹವಮಾನ ನಿಯಂತ್ರಣ ಇಲಾಖೆಯು ಸುಮಾರು 20 ಎಕರೆಗಳಷ್ಟು ದೊಡ್ಡ ಪ್ರಮಾಣದ ಕೋಳಿ ಫಾರ್ಮಗೆ ಪರವಾನಿಗೆ ನೀಡಿದ್ದು, ಅದರಿಂದ ಬರುವ ತ್ಯಾಜ್ಯ ಮತ್ತು ಮಾಲೀನ್ಯ ನಮ್ಮ ಗ್ರಾಮಕ್ಕೆ ಮತ್ತು ಸುತ್ತಮುತ್ತಲಿನ ವ್ಯವಸಾಯ ಮಾಡುವ ರೈತರಿಗೆ ಮತ್ತು ಮುಖ್ಯರಸ್ತೆ ಇರುವದರಿಂದ ಸಾರ್ವಜನಿಕರಿಗೆ ಅದರ ದುರ್ವಾಸನೆಯಿಂದ ತುಂಬಾ ದೊಡ್ಡ ರೀತಿಯಲ್ಲಿ ತೊಂದರೆ-ಯಾಗುತ್ತದೆ ಮತ್ತು ಕೋಳಿ ಫಾರ್ಮ ಪಕ್ಕದಲ್ಲಿ ಯಲ್ಲೆರಿಯಿಂದ ನಂದೇಪಲ್ಲಿ ವರೆಗೆ ದೊಡ್ಡ ಪ್ರಮಾಣದಲ್ಲಿ ನೀರು ಹರಿಯುವ ಹಳ್ಳವಿದ್ದು, ಆದ್ದರಿಂದ ಮುಂಬರುವ ದಿನಗಳಲ್ಲಿ ಇದ-ರಿಂದ ಬರುವ ತ್ಯಾಜ್ಯ ವಸ್ತು ಮತ್ತು ಕಲುಷಿತ ನೀರನ್ನು ಏನಾದರೂ ಸೇರ್ಪಡೆಯಾದರೆ ಅದನ್ನು ಸೇವಿಸುವ ಜನರು ಮತ್ತು ಜಾನುವಾರಗಳಿಗೆ ದೊಡ್ಡ ಪ್ರಮಾಣದಲ್ಲಿ ಅನಾಹುತ ಸಂಭವಿಸುವ ಲಕ್ಷಣಗಳಿವೆಂದು ತಿಳಿಸಿದ್ದಾರೆ. ಎಲ್ಲಾ ಅಂಶಗಳನ್ನು ಪರಿಶೀಲಿಸಿ ಕೂಡಲೇ ಯಲ್ಲೆರಿ ಗ್ರಾಮದಲ್ಲಿ ಪ್ರಾರಂಭವಾಗುತ್ತಿರುವ ಕೋಳಿ ಫಾರ್ಮನ ಪರವಾನಿಗೆ ರದ್ದು ಮಾಡಿ ಈಗ ನಡೆಯುತ್ತಿರುವ ಕಾಮಗಾರಿಯನ್ನು ನಿಲ್ಲಿಸಿ ಅದಕ್ಕೆ ಬೀಗ ಹಾಕಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಉಲ್ಲೇಖಿತ ಪತ್ರದ ಮೂಲಕ ತಹಸೀಲ್ದಾರರಿಗೆ ದೂರು ನೀಡಿದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡದೇ, ಹಣದ ಆಮೀಷಕ್ಕೆ ಒಳಗಾಗಿ ಪೂರ್ವ ಗ್ರಹ ಪೀಡಿತರಾಗಿ ಎನ್.ಓ.ಸಿ. ನೀಡಿರುತ್ತಾರೆ. ಒಂದು ವೇಳೆ ಒಂದು ವಾರದೊಳಗೆ ಕ್ರಮ ಕೈಗೊಳ್ಳದೇ ಹೋದಲ್ಲಿ ಕರವೇ ಗುರುಮಠಕಲ್ ತಾಲೂಕಾ ಘಟಕ ವತಿಯಿಂದ ಯಾದಗಿರಿ-ಹೈದ್ರಾಬಾದ್ ಮುಖ್ಯ ರಸ್ತೆ ಕಂದಕೂರ ಕ್ರಾಸ್ ಹತ್ತಿರ (ರಾ.ಹೆ) ರಸ್ತೆ ತಡೆದು ಉಗ್ರವಾದ ಹೋರಾಟವನ್ನು ಮಾಡಲಾಗುವುದೆಂದು ಮೌನೇಶ ಮಾಧ್ವಾರ, ದೇವಸಿಂಗ್ ಠಾಕೂರ್, ತಾಯಪ್ಪ ಕಾಳಬೆಳಗುಂದಿ, ಜಗದೀಶ ನಸವಲಾಯಿ, ಶಿವು ಕೊಂಕಲ್, ಶರಣು ಮೇಧಾ, ವೆಂಕಟೇಶ, ಜಾಫರ್, ಓಂಕಾರ ಚಲ್ವೇರಿ, ಮುಂಜು ಸಂಬಾರ, ಮತ್ತು ಇನ್ನಿತರು ಇದ್ದರು.

# ಸಂಕ್ರಾಂತಿ ಹಬ್ಬದ ನಿಮಿತ್ತ ಸಾಂಸ್ಕೃತಿಕ ಕಾರ್ಯಕ್ರಮ

## ಹಣಮೇಗೌಡ ಬೀರನಕಲ್.

• ಮಲ್ಲಮ್ಮ ನುಡಿ ವಾರ್ತೆ,ಯಾದಗಿರಿ

ಜಾನಪದ ಕಲೆ ಹಾಗೂ ಸಂಗೀತ ಕಾರ್ಯಕ್ರಮಗಳು ಗ್ರಾಮೀಣ ಪ್ರದೇಶದಲ್ಲಿ ಕಡಿಮೆಯಾಗುತ್ತಿರುವ ಸಂದರ್ಭದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜನೆ ಉತ್ತಮ ಕಾರ್ಯ ಎಂದು ಸಮಾಜ ಸೇವಕ, ಪ್ರಥಮ ದರ್ಜೆ ಗುತ್ತಿಗೆದಾರ ಹಣಮೇಗೌಡ ಬೀರನಕಲ್ ಅಭಿಪ್ರಾಯಪಟ್ಟರು. ವಡಗೇರಿ ತಾಲ್ಲೂಕಿನ ಗುಂಡಗುರ್ತಿ ಗ್ರಾಮದ ಆಂಜಿನೇಯ ದೇವಸ್ಥಾನದ ಬಳಿ ನಮ್ಮ ಕರ್ನಾಟಕ ಸೇನೆ ವಡಗೇರಿ ತಾಲ್ಲೂಕು ಯುವ ಘಟಕ ಮಕರ ಸಂಕ್ರಮಣ ಹಬ್ಬದ ಅಂಗವಾಗಿ ಆಯೋಜಿಸಿದ್ದ ಸಂಕ್ರಾಂತಿ ಸುಗ್ಗಿ ಸಂಭ್ರಮ (ಜಾನಪದ ಉತ್ಸವ) ಸಮಾರಂಭವನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸಿ ಮಾತನಾಡಿದರು. ಗ್ರಾಮೀಣ ಪ್ರದೇಶದಲ್ಲಿ ಮೊದಲು ಹಬ್ಬ ಹರಿದಿನಗಳ ವೇಳೆ ಸಾಂಸ್ಕೃತಿಕ ಕಾರ್ಯಕ್ರಮಗಳು ಆಟೋಟಗಳು ಆಯೋಜಿಸಲಾಗುತ್ತಿತ್ತು. ಆಧುನಿಕತೆಯ ಭರದಲ್ಲಿ ಸಂಪ್ರದಾಯಿಕ ಕಲೆ ಸಂಸ್ಕೃತಿಕ ಚಟುವಟಿಕೆಗಳು ಕಮ್ಮಿಯಾಗಿರುವ ವೇಳೆ ಸಂಘ ಸಂಸ್ಥೆಗಳು ಇಂತಹ ಕಾರ್ಯಕ್ರಮ ಆಯೋಜಿಸುವ ಮೂಲಕ ಕೊರತೆ ನೀಗಿಸಬೇಕಿದೆ ಎಂದು ನುಡಿದರು. ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಭಾರತೀಯ ಜನತಾ ಪಾರ್ಟಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಶ್ರೀಧರ ಸಾಹುಕಾರ ಮಾತನಾಡಿ, ಇಂದಿನ ದಿನಗಳಲ್ಲಿ ಆಧುನಿಕತೆಯ ಕಾರಣದಿಂದ ಸಂಪ್ರದಾಯಕ ಸಂಗೀತ, ಜಾನಪದ ಗೀತೆಗಳ ಕಲೆಗಳ ಪ್ರದರ್ಶನ ಕಮ್ಮಿಯಾಗಿದೆ ಆದರೆ ಪರಂಪರೆಯಿಂದ ಬಂದ ಈ ಕಲೆ ಸಾಂಸ್ಕೃತಿಕ ಚಟುವಟಿಕೆಗಳು ಮುಂದುವರೆಸಿಕೊಂಡು ಹೋಗುವ ನಿಟ್ಟಿನಲ್ಲಿ ಯುವ ಘಟಕದವರು ಆಯೋಜಿಸಿರುವ ಕಾರ್ಯಕ್ರಮ ಇತರರಿಗೆ ಮಾದರಿಯಾಗಿದೆ ಎಂದು ನುಡಿದರು.

ಗ್ರಾಮೀಣ ಪ್ರದೇಶಗಳಲ್ಲಿ ಹಿಂದೆ ಇಂತಹ ಚಟುವಟಿಕೆಗಳು ವರ್ಷವಿಡಿ ಹಬ್ಬ ಹರಿದಿನಗಳ ಸಂದರ್ಭದಲ್ಲಿ ನಡೆದು ಸರ್ವರೂ ಪಾಲ್ಗೊಂಡು ಉತ್ಸವದ ರೂಪದಲ್ಲಿ ಆಚರಿಸುತ್ತಿದ್ದರು. ಅಂತಹ ವಾತಾವರಣ ಮತ್ತೆ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಕೆಲಸ ಮಾಡಬೇಕಿದೆ ಎಂದು ನುಡಿದರು.

ಅತಿಥಿಯಾಗಿ ಆಗಮಿಸಿದ್ದ ನಕಸೇ ರಾಜ್ಯ ಪ್ರಧಾನ ಸಂಚಾಲಕ ಭೀಮಣ್ಣ ಶಖಾಪುರ ಮಾತನಾಡಿ, ಜಾನಪದ ಗೀತೆಗಳೆಂದರೆ ಬದುಕಿನ ಪ್ರತಿರೂಪವೇ ಆಗಿರುತ್ತಿದ್ದವು ಆದರೆ ಇಂದು ಜಾನಪದ ಎಂದರೆ ಅಶ್ಲೀಲ ಸಂಭಾಷಣೆ ಮುಂತಾಗಿ ಬಿಂಬಿಸಲಾಗುತ್ತಿದೆ



ಇಂತಹ ವಾತಾವರಣದಲ್ಲಿ ಸಂಕ್ರಾಂತಿ ಹಬ್ಬದ ಸುಗ್ಗಿ ಉತ್ಸವ ಆಯೋಜಿಸಿರುವುದು ಮೆಚ್ಚುವ ಕಾರ್ಯವಾಗಿದೆ. ವಡಗೇರಿ ಯುವ ಘಟಕದವರು ಇದರ ಜೊತೆಗೆ ಸಂಘಟನೆಗೂ ಹೆಚ್ಚು ಒತ್ತು ಕೊಟ್ಟಲ್ಲಿ ಇನ್ನು ಹೆಚ್ಚಿನ ಸಾದನೆ ಮಾಡಲು ಸಾಧ್ಯವಾಗುತ್ತದೆ ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಸಾನ್ನಿಧ್ಯವನ್ನು ವೇ॥ಮೂ॥ ಶಿವಕುಮಾರ ಹಿರೇಮಠ ವಹಿಸಿದ್ದರು. ಅಧ್ಯಕ್ಷತೆಯನ್ನು ನಕಸೇ ಜಿಲ್ಲಾಧ್ಯಕ್ಷ ವಿಶ್ವಾರಾಧ್ಯ ದಿಮ್ಮೆ ವಹಿಸಿದ್ದರು.

ವೇದಿಕೆ ಮೇಲೆ ಮಲ್ಲಿಕಾರ್ಜುನ ಗೌಡ ಪೊ॥ಪಾ॥, ಮಲ್ಲಯ್ಯ ಗುತ್ತೇದಾರ ಗುಂಡಗುರ್ತಿ, ದೇವಿಂದ್ರಪ್ಪ ಕೌಲಿ, ಗುತ್ತಿಗೆದಾರರಾದ ಯಮನಪ್ಪ ಪೂಜಾರಿ ಅಗಸ್ಥಳ, ಗ್ರಾಪಂ ಸದಸ್ಯ ಮಲ್ಲಣ್ಣಗೌಡ, ಹಣಮಂತ ಸಾಲಿಮನಿ, ಗ್ರಾಪಂ ಮಾಜಿ ಅಧ್ಯಕ್ಷ ದೇವಿಂದ್ರಪ್ಪ ಮ್ಯಾಗಿನಮನಿ, ಮಾಜಿ ಸದಸ್ಯರಾದ ಯಂಕಪ್ಪ ಪೂಜಾರಿ, ಹೊನ್ನಪ್ಪ ಗೂಗಲ್, ಮೈಲಾರಪ್ಪ, ಮಲ್ಲಪ್ಪ, ರಾಜೂಗೌಡ ಪೊ॥ಪಾ॥, ಮಹಿಪಾಲರಡ್ಡಿ ಮಾಲಿ ಪಾಟೀಲ್, ರಾಜುಗೌಡ ದಳಪತಿ

ನಕಸೇ ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ಕು. ಶ್ರೀದೇವಿ ಕಟ್ಟಿಮನಿ, ವಡಗೇರಿ ತಾಲ್ಲೂಕು ಗೌರವಾಧ್ಯಕ್ಷ ನಾಗರಡ್ಡಿಗೌಡ ರಾಮನಾಳ, ಅಧ್ಯಕ್ಷ ಮಲ್ಲು ಮಾಲಕ್ ಹಾಲಗೇರಿ, ಶಹಾಪೂರ ಉಪಾಧ್ಯಕ್ಷ ಶಶಿಪಾಲರಡ್ಡಿ, ರಾಜು ಶಿಂದೆ ಮದರ್ಕಲ್ ಭೀಮು ಗುತ್ತೇದಾರ್ ಉಪಸ್ಥಿತರಿದ್ದರು.

ನಕಸೇ ವತಿಯಿಂದ ಗುಂಡಗುರ್ತಿಯಲ್ಲಿ ಸಂಕ್ರಾಂತಿ ನಿಮಿತ್ತ ಗ್ರಾಮೀಣ ಯುವಕರಿಗಾಗಿ ನಡೆಸಿದ ಆಟೋಟಗಳ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಚಿತ್ರಕಲೆಯಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ಗಳಿಸಿದ ಬಿಂದು ತಂ. ಭೀಮಪ್ಪ ಗೆ ಸನ್ಮಾನಿಸಲಾಯಿತು. ಇದಕ್ಕೂ ಮೊದಲು ಬುಧವಾರ ಅಗಲಿದ ಕನಕ ಗುರುಪೀಠದ ಶ್ರೀ ಸಿದ್ದರಾಮಾನಂದ ಪುರಿ ಸ್ವಾಮಿಜಿಗೆ 1 ನಿ. ಮೌನಾಚರಣೆ ಮಾಡುವ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಮೊದಲಿಗೆ ಸ್ವಾಗತಿಸಿದ ಶಿವರಡ್ಡಿ ಸಾಲಿಮನಿ ನಿರೂಪಿಸಿದರು. ಸಿದ್ದು ಪಟ್ಟೇದಾರ ವಂದನಾರ್ಪಣೆ ಗೈದರು.

# ಮೌಖಿಕ ನೈರ್ಮಲ್ಯದ ಬಗ್ಗೆ ಜಾಗೃತಿ



ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.

ಸ್ಮೈಲ್ ಫೌಂಡೇಶನ್ ಯಾದಗಿರಿ, ಎಂಎಸ್‌ಡಿ ಫಾರ್ಮಾಸ್ಯುಟಿಕಲ್ಸ್ ಲಿಮಿಟೆಡ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಯಾದಗಿರಿ, ಶಾಲಾ ಶಿಕ್ಷಣ ಇಲಾಖೆ ಮತ್ತು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಖಾನಾಪುರ ಗ್ರಾಮ, ವಡಗೇರಾ ತಾಲ್ಲೂಕು ಇವುಗಳ ಜಂಟಿ ಸಹಭಾಗಿತ್ವದಲ್ಲಿ ಮೌಖಿಕ ನೈರ್ಮಲ್ಯ ಮತ್ತು ಹಲ್ಲಿನ ಪೇಸ್ಟ್ ವಿತರಣಾ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಖಾನಾಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ನಿರ್ಮಲಾ ಅವರು ಮಾತನಾಡಿ, ವಿದ್ಯಾರ್ಥಿಗಳು ಮೌಖಿಕ ನೈರ್ಮಲ್ಯದ ಬಗ್ಗೆ ಜಾಗೃತಿ ಮೂಡಿಸಲು ಇಂತಹ ಕಾರ್ಯಕ್ರಮವು ಅತ್ಯಂತ ಅಗತ್ಯವಾಗಿದೆ ಎಂದು ಹೇಳಿದರು. ಸ್ಮೈಲ್ ಫೌಂಡೇಶನ್‌ನ ವೈದ್ಯಾಧಿಕಾರಿ ಡಾ. ಯಲ್ಲಪ್ಪ ಕೃಷ್ಣಪ್ಪ ಆದಿನ್, ಎಂಎಸ್‌ಡಿ ಯಾದಗಿರಿ, ಮೌಖಿಕ ನೈರ್ಮಲ್ಯ ಮತ್ತು ನಿಮ್ಮ ಬಾಯಿಯನ್ನು ಸ್ವಚ್ಛವಾಗಿ ಮತ್ತು ರೋಗ ಮುಕ್ತವಾಗಿಡುವ ಅಭ್ಯಾಸ ಮಾಡಬೇಕು, ನಿಮ್ಮ ಹಲ್ಲುಜ್ಜುವುದು ಮತ್ತು ಫ್ಲಾಸ್ ಮಾಡುವುದು, ದಂತ ಎಕ್ಸ್-ರೇ, ಪರೀಕ್ಷೆಗಳು ಮತ್ತು ಶುಚಿಗೊಳಿಸುವಿಕೆಗಾಗಿ ದಂತವೈದ್ಯರನ್ನು ನಿಯಮಿತವಾಗಿ ಭೇಟಿ ಮಾಡಬೇಕು, ಮೌಖಿಕ ನೈರ್ಮಲ್ಯವು ತಡೆಗಟ್ಟುವ ಆರೈಕೆಯಾಗಿದೆ. ಸ್ಮೈಲ್ ಫೌಂಡೇಶನ್‌ನ ಯೋಜನಾ ಸಂಯೋಜಕರಾದ ಅಬ್ದುಲ್ ಶಫೀ ಅಹ್ಮದ್ ಅಧ್ಯಕ್ಷತೆ ವಹಿಸಿ ಮಾತನಾಡಿ

ಬಾಯಿಯ ಆರೋಗ್ಯದ ಮೇಲೆ ಕೇಂದ್ರೀಕರಿಸಿದ್ದು, ಇಡೀ ದೇಹದ ಆರೋಗ್ಯಕ್ಕೂ ಸಂಬಂಧಿಸಿದೆ. ನಿಮ್ಮ ಹಲ್ಲು ಮತ್ತು ಒಸಡುಗಳನ್ನು ಆರೋಗ್ಯವಾಗಿಡುವುದು ದೀರ್ಘಕಾಲೀನ ಒಟ್ಟಾರೆ ಆರೋಗ್ಯದ ಪ್ರಮುಖ ಭಾಗವಾಗಿದೆ. ಯಾದಗಿರಿಯ ಆರೋಗ್ಯ ಇಲಾಖೆಯ ಮೌನೇಶ್ ಪಾಟೀಲ್ ಬೆಳಗೇರಾ, ಸ್ಮೈಲ್ ಫೌಂಡೇಶನ್‌ನ ಸಿಬ್ಬಂದಿ ಅಶ್ವಿನಿ, ವಿನೋದ್ ಕುಮಾರ್, ಸುಮಂಗಲ, ಮೆಹರೂಜಾ ಬೀ, ಶಿಲ್ಪಾ, ಕವಿತಾ, ರೇಣುಕಾ, ವಿಜಯಲಕ್ಷ್ಮಿ, ವೆಂಕಪ್ಪ, ಮರಿಯಪ್ಪ ಮುಂತಾದವರಿದ್ದರು. ಕಾರ್ಯಕ್ರಮದಲ್ಲಿ ಟೂತ್‌ಪೇಸ್ಟ್ ಮತ್ತು ಟೂತ್ ಬ್ರಷ್ ವಿತರಿಸಲಾಯಿತು.

# ಸಾಯಿಬಾಬಾ ಜಾತ್ರಾ ಮಹೋತ್ಸವಕ್ಕೆ ಚಾಲನೆ

ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.



ಶಹಾಪುರ ತಾಲೂಕಿನ ಇಬ್ರಾಂಪುರದ ಶ್ರೀ ಶಿರಡಿ ಸಾಯಿಬಾಬಾ ಮಂದಿರ 4ನೇ ಜಾತ್ರಾ ಮಹೋತ್ಸವ ನಾಡಿನ ಹರಗುರು ಚರಮೂರ್ತಿಗಳು, ಸಾಹಿತಿಗಳು, ಗಣ್ಯರು ಕಲಾವಿದರು ಹಾಗೂ ಸಾಯಿಬಾಬಾ ಅವರ ಅಪಾರ ಭಕ್ತರ ಸಮ್ಮುಖದಲ್ಲಿ ಶನಿವಾರ ಆರಂಭಗೊಂಡಿದೆ. ಬೆಳಗ್ಗೆ ಸಾಯಿಬಾಬಾ ಅವರ ಮೂರ್ತಿಗೆ ವಿಶೇಷ ಪೂಜೆ, ಅಭಿಷೇಕ ಮತ್ತು ಮಂಗಳಾರುತಿ ಆಶ್ರಮದ ರೂವಾರಿಗಳಾದ ಮಹಾರಾಜ್ ದಿಗ್ಗಿ ಮತ್ತು ಸಿದ್ದಪಾಜಿ ದಿಗ್ಗಿ ಅವರು ಹಾಗೂ ಕುಟುಂಬಸ್ಥರಿಂದ ಜರುಗಿತು. ನಂತರ ಸುಮಾರು ಹತ್ತು ಜೊಡಿಗಳ ಸಾಮೂಹಿಕ ವಿವಾಹ ಸಕಲ ಧಾರ್ಮಿಕ ವಿಧಿಗಳ ಮೂಲಕ ನಡೆಯಿತು.ನಂತರ ವಿಶಾಲ ಪ್ರದೇಶದಲ್ಲಿ ಹಾಕಲಾದ ದೊಡ್ಡ ಮತ್ತು ಸುಂದರ ವೇದಿಕೆಯಲ್ಲಿ ಧಾರ್ಮಿಕ ಸಮಾರಂಭ ಜರುಗಿತು. ವಿವಿಧ ಮಠಗಳಾದ ಗುರುಮಠಕಲ್, ಕಡಕೋಳ, ಸರೂರು ಅಗತೀರ್ಥ, ಚಿಗರಹಳ್ಳಿ, ಹೋತಪೇಠ, ದೊರನಹಳ್ಳಿ, ಮಹಲ್ ರೋಜ್, ಜುಬೇರಿ ಗೋಗಿ, ಚಟ್ನಳ್ಳಿ, ಮಾಲಹಳ್ಳಿ ಮಠಗಳ ಪೀಠಾಧಿಪತಿಗಳು, ಸಾಹಿತಿ, ಗಣ್ಯರಾದ ವಿಶ್ವಾರಾಧ್ಯ ಸತ್ಯಂಪೇಟ್, ರಾಜ್ಯ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಶರಣಪ್ಪ ಸಲಾದಪುರ, ಸಾಹಿತಿ ಡಾ.ಸಿದ್ದರಾಮ ಹೊನ್ಕಲ್, ಶಾಂತರೆಡ್ಡಿ ದೇಸಾಯಿ, ಜಿಲ್ಲಾ ಕಸಾಪ ಅಧ್ಯಕ್ಷ ಸಿದ್ದಪ್ಪ ಹೊಟ್ಟಿ, ಆರ್. ಮಹಾದೇವಪ್ಪ ಗೌಡ ಅಬ್ಬೆತುಮಕೂರು, ವಿಶ್ವಾರಾಧ್ಯ ಚಟ್ನಳ್ಳಿ, ಡಾ.ರವಿಂದ್ರನಾಥ ಹೊಸಮನಿ, ರಾಯಪ್ಪಗೌಡ ಹುಡೆದ್, ಪತ್ರಕರ್ತ ಪ್ರಕಾಶ ದೊರೆ, ನೀಲಕಂಠ ಬಡಿಗೇರ, ಉಮೇಶ ಮುದ್ನಾಳ, ಭೀಮಾಶಂಕರ ಇಬ್ರಾಹಿಂಪುರ, ಭೀಮಾಶಂಕರ ದೊರನಹಳ್ಳಿ ಸೇರಿದಂತೆಯೇ ಅವರು ಭಾಗವಹಿಸಿದ್ದರು.

ಜ.18 ರಂದು ಸಂಜೆ 6 ಕ್ಕೆ ನಡೆಯುವ ಧಾರ್ಮಿಕ ಸಭೆ, ಸಂಗೀತ ಮತ್ತು ನೃತ್ಯ ಗಾಯನ ನಡೆಯಲಿದ್ದು,ಈ ಕಾರ್ಯಕ್ರಮದಲ್ಲಿ ಚಲನಚಿತ್ರ ನಟ ಡಾಲಿ ಧನಂಜಯ ಸೇರಿದಂತೆಯೇ ಇತರರು ಭಾಗವಹಿಸಲಿದ್ದಾರೆ.

# ಕ್ಯಾನ್ಸರ್ ಪೀಡಿತನ ಮೇಲೆ ಪೊಲೀಸರ ಹಲ್ಲೆ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.



ಆರೋಪ ವಿಚಾರಣೆಯ ನೆಪದಲ್ಲಿ ರಕ್ತ ಕ್ಯಾನ್ಸರ್ ಪೀಡಿತ ಮೆಹಬೂಬ್ ಅಲಿ ಮೇಲೆ ಪೊಲೀಸರು ಅಮಾನವೀಯವಾಗಿ ಹಲ್ಲೆ ನಡೆಸಿದ್ದಾರೆ ಎಂಬ ಆರೋಪ ಬೆಳಕಿಗೆ ಬಂದಿದೆ. ಸುರಪುರ ತಾಲೂಕಿನ ಕೆಂಭಾವಿ ನಿವಾಸಿಯಾದ ಅವರನ್ನು ಮಂಗಳವಾರ ವಿಚಾರಣೆಗೆಂದು ಕರೆಸಿ ಹುಣಸಗಿ ಠಾಣೆಗೆ ಕ-ರೆದೊಯ್ದು ಹಲ್ಲೆ ನಡೆಸಲಾಗಿದೆ ಎಂದು ಕುಟುಂಬಸ್ಥರು ದೂರಿದ್ದಾರೆ.

ಹಲ್ಲೆಯಿಂದ ಗಂಭೀರ ಗಾಯಗೊಂಡ ಮೆಹಬೂಬ್ ಅಲಿ ಅವರನ್ನು ಕಲಬುರಗಿ ಜಿಮ್ಸ್ ಆಸ್ಪತ್ರೆಗೆ ದಾಖಲಿಸಿ ನಾಲ್ಕು ದಿನ ಚಿಕಿತ್ಸೆ ನೀಡಲಾಗಿದೆ. ಕಳೆದ ವರ್ಷದ ಆಗಸ್ಟ್ ತಿಂಗಳಲ್ಲಿ ನಡೆದ ಅಪಘಾತ ಪ್ರಕರಣಕ್ಕೆ ಸಂಬಂಧಿಸಿದಂತೆ ಮೆಹಬೂಬ್ ಅಲಿ ಹಾಗೂ ಉತ್ತರ ಪ್ರದೇಶ ಮೂಲದ ಸಾಹಿಲ್ ಎಂಬ ಯುವಕ ಜಾತ್ರೆಗಳಲ್ಲಿ ಆಟಿಕೆ ಮಾರಾಟ ಮಾಡುತ್ತಿದ್ದರು. ಈ ವೇಳೆ ಟಂಟಂ ವಾಹನದಿಂದ ಬಿದ್ದು ಸಾಹಿಲ್ ಸಾವನ್ನಪ್ಪಿದ್ದ. ಐದು ತಿಂಗಳ ಹಳೆಯ ಈ ಪ್ರಕರಣದ ಬಗ್ಗೆ ಅನುಮಾನ ವ್ಯಕ್ತಪಡಿಸಿದ ಪೊಲೀಸರು ಮೆಹಬೂಬ್ ಅಲಿ ಅವರನ್ನು ವಿಚಾರಣೆಗೆ ಕರೆಸಿಕೊಂಡ ಸಂದರ್ಭದಲ್ಲಿ ಈ ಘಟನೆ ನಡೆದಿದೆ ಎನ್ನಲಾಗಿದೆ.ಈ ಪ್ರಕರಣದ ಕುರಿತು ಸಮಗ್ರ ತನಿಖೆಗೆ ಆದೇಶ ನೀಡಲಾಗಿದೆ. ಸುರಪುರ ಡಿಎಸ್ಪಿ ಜಾವೀದ್ ಇನಾಂದಾರ್ ಅವರ ನೇತೃತ್ವದಲ್ಲಿ ತನಿಖೆ ನಡೆಯಲಿದ್ದು, ವರದಿ ಬಂದ ಬಳಿಕ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಯಾದಗಿರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪೃಥ್ವಿಕ್ ಶಂಕರ್ ತಿಳಿಸಿದ್ದಾರೆ.

# ಶತಾಯುಷಿ ಲಿಂಗೈಕ್ಯ ಲೋಕನಾಯಕ ಡಾ. ಭೀಮಣ್ಣಾ ಖಂಡ್ರೆಯವರ ಶೃದ್ಧಾಂಜಲಿ ಸಭೆ

• ಮಲ್ಲಮ್ಮ ನುಡಿ ವಾರ್ತೆ ಬೀದರ :



ಗೌರವಾನ್ವಿತ ಹೈದ್ರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆಯ ಸದಸ್ಯರು ಹಾಗೂ ಬಿ.ವಿ.ಬಿ. ಶಾಲಾ ಕಾಲೇಜು ಆವರಣದ ಸಂಚಾಲಕರಾದ ಡಾ. ರಜನೀಶ್ ಎಸ್. ವಾಲಿಯವರ ನೇತೃತ್ವದಲ್ಲಿ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ದೀಪಾ ರಾಗ, ಅವರು ಮಾತನಾಡುತ್ತಾ ಲೋಕನಾಯಕ ಡಾ.ಭೀಮಣ್ಣಾ ಖಂಡ್ರೆಯವರ ಅಗಲಿಕೆ ಬೀದರ ಜಿಲ್ಲೆಗೆ ಅಷ್ಟೇ ಅಲ್ಲ ಇಡೀ ಕರ್ನಾಟಕ ರಾಜ್ಯಕ್ಕೆ ತುಂಬಲಾರದ ನಷ್ಟ ಇವರು ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ ಅವಧಿಯಲ್ಲಿ ಹಲವಾರು ಮಹತ್ವಪೂರ್ಣ ಕಾರ್ಯಗಳು ಕೈಗೊಂಡಿದ್ದರು ಅಷ್ಟೇ ಅಲ್ಲದೆ ಇವರು ಕ್ಯಾಬಿನೇಟ್ ರ್‍ಯಾಂಕ್ ಸಚಿವರಾಗಿದ್ದಾಗ ಕರ್ನಾಟಕದ ಸಾರಿಗೆ ವ್ಯವಸ್ಥೆಯನ್ನು ಅತ್ಯುನ್ನತ ಮಟ್ಟದ ಶಿಖರಕ್ಕೆ ಎತ್ತರಿಸಿದ್ದರು ಅವರ ಕ್ಷೇತ್ರದಲ್ಲಿ ಅಷ್ಟೇ ಅಲ್ಲದೆ ಯಾವುದೇ ಕ್ಷೇತ್ರದ ಬಡಜನತೆ ಹಾಗೂ ದೀನ ದಲಿತರ ಕಷ್ಟಗಳಿಗೆ ಸದಾ ಸ್ಪಂದಿಸುತ್ತಾ ಭಾಲ್ಕಿಯ ಮ.ಘ.ಚ. ಡಾ. ಚನ್ನಬಸವ ಪಟ್ಟದ್ದೇವರ ಮಾರ್ಗದರ್ಶನದಲ್ಲಿ ಸಾರಿಗೆ, ಶಿಕ್ಷಣ ವ್ಯವಸ್ಥೆಯಲ್ಲಿ ತುಂಬಾ ಅಚ್ಚುಕಟ್ಟಾದ ಸೇವೆ ಸಲ್ಲಿಸಿದ್ದರು ಇವರ ಅಗಲಿಕೆ ಅವರ ಕುಟುಂಬಕ್ಕೆ ಆ ಭಗವಂತ ಸಹಿಸುವ ಶಕ್ತಿ ನೀಡಲೆಂದು ಪ್ರಾರ್ಥಿಸುತ್ತೇನೆಂದು ನುಡಿದರು. ಈ ಸಂತಾಪ ಸೂಚಕ ಸಭೆಯಲ್ಲಿ, ಬಸವೇಶ್ವರ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಮಲ್ಲಿಕಾರ್ಜುನ ಕನಕಟ್ಟೆ ಹಾಗೂ ನ್ಯಾಷನಲ್ ಆಂಗ್ಲ ಮಾಧ್ಯಮ ಶಾಲೆ ಹಾಗೂ ಸೈನಿಕ ಶಾಲೆ ಪ್ರಾಂಶುಪಾಲರಾದ ಶ್ರೀಮತಿ ಶ್ರೀಲತಾ ಹಾಗೂ ಮಹಾವಿದ್ಯಾಲಯದ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಹಾಗೂ ಬೋಧಕ ಬೋಧಕೇತರ ಸಿಬ್ಬಂದಿ ವರ್ಗದವರು ಹಾಜರಿದ್ದರು.

# ವಾಲ್ಮೀಕಿ ಸಮುದಾಯಕ್ಕೆ ನಿಮ್ಮ ಕೊಡುಗೆ ಏನು?

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಬಳ್ಳಾರಿಯಲ್ಲಿ ಇತ್ತೀಚೆಗೆ ನಡೆದ ಬ್ಯಾನರ್ ಗಲಾಟೆ, ಫೈರಿಂಗ್ ಘಟನೆಗಳು ಹಾಗೂ ನಗರದಲ್ಲಿ ಹೆಚ್ಚುತ್ತಿರುವ ಕೊಲೆ, ದರೋಡೆ, ದರ್ಪ, ದೌರ್ಜನ್ಯ ಪ್ರಕರಣಗಳು ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಸಂಪೂರ್ಣ ಕುಸಿದಿರುವುದಕ್ಕೆ ನೇರ ಸಾಕ್ಷಿಯಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ಎಸ್. ವಿಜಯೇಂದ್ರ ಅವರು ಗಂಭೀರ ಆರೋಪ ಮಾಡಿದರು.

ಬಳ್ಳಾರಿ ನಗರದ ಎಪಿಎಂಸಿ ಯಾರ್ಡ್‌ನಲ್ಲಿ ಬಿಜೆಪಿ ಪಕ್ಷದ ವತಿಯಿಂದ ಆಯೋಜಿಸಲಾಗಿದ್ದ ಭಾರೀ ಪ್ರತಿಭಟನಾ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರದ ಆಡಳಿತ ಸಂಪೂರ್ಣವಾಗಿ ವಿಫಲವಾಗಿದ್ದು, ರಾಜ್ಯವನ್ನು ಅರಾಜಕತೆಯತ್ತ ತಳ್ಳುತ್ತಿದೆ ಎಂದು ಕಟುವಾಗಿ ಟೀಕಿಸಿದರು.

**ಬಿ.ವೈ. ವಿಜಯೇಂದ್ರ ಹೇಳಿಕೆ: ವಾಲ್ಮೀಕಿ ಸಮುದಾಯಕ್ಕೆ ನಿಮ್ಮ ಕೊಡುಗೆ ಏನು?**

ವಾಲ್ಮೀಕಿ ಸಮುದಾಯದ ಪರವಾಗಿ ನಿಮ್ಮ ಕೊಡುಗೆ ಏನು ಎಂಬುದನ್ನು ಸ್ಪಷ್ಟಪಡಿಸಬೇಕೆಂದು ಬಿ.ವೈ. ವಿಜಯೇಂದ್ರ ಪ್ರಶ್ನಿಸಿದರು. ನಮ್ಮ ನಾಯಕ ಶ್ರೀರಾಮುಲು ಹಾಗೂ ಮಾಜಿ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರ ಅವಧಿಯಲ್ಲಿ ವಾಲ್ಮೀಕಿ ಸಮುದಾಯಕ್ಕೆ ಇದ್ದ ಶೇಕಡಾ 3ರಷ್ಟು ಮೀಸಲಾತಿಯನ್ನು ನಮ್ಮ ಸರ್ಕಾರ ಶೇಕಡಾ 7ಕ್ಕೆ ಹೆಚ್ಚಿಸಿದೆ ಎಂದು ಅವರು ಹೇಳಿದರು.

ಶ್ರೀರಾಮುಲು ಹಾಗೂ ಜನಾರ್ಧನ್ ರೆಡ್ಡಿ ಅವರು ಕೈಗೊಂಡಿರುವ ಪಾದಯಾತ್ರೆಗೆ ಯಾವುದೇ ರೀತಿಯ ವಿರೋಧ ಇಲ್ಲ ಎಂದು ಅವರು ಸ್ಪಷ್ಟಪಡಿಸಿದರು. ಈ ಹೋರಾಟ ಯಾರನ್ನೂ ಕೆಡವುವುದಿಲ್ಲ, ಯಾರ ವಿರುದ್ಧವೂ ಅಲ್ಲ; ಇದು ನ್ಯಾಯಕ್ಕಾಗಿ ನಡೆಯುತ್ತಿರುವ ಹೋರಾಟ ಎಂದು ಅವರು ಹೇಳಿದರು.ಬಳ್ಳಾರಿಯಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದ್ದು,ಅಪರಾಧಿಗಳಿಗೆ



ಸರ್ಕಾರವೇ ರಕ್ಷಣೆಯಾಗಿ ನಿಂತಂತಿದೆ. ರಾಜಕೀಯ ದ್ವೇಷದ ಕಾರಣದಿಂದಲೇ ಗಲಾಟೆ, ಹಿಂಸಾಚಾರ ಹಾಗೂ ಫೈರಿಂಗ್ ಪ್ರಕರಣಗಳಿಗೆ ಪ್ರೋತ್ಸಾಹ ನೀಡಲಾಗುತ್ತಿದೆ. ಸಾಮಾನ್ಯ ನಾಗರಿಕರು ಭಯಭೀತ ವಾತಾವರಣದಲ್ಲಿ ಬದುಕುವಂತಾಗಿದ್ದು, ಸರ್ಕಾರ ಮಾತ್ರ ಕೈಕಟ್ಟಿ ಕುಳಿತಿದೆ ಎಂದು ವಿಜಯೇಂದ್ರ ಹೇಳಿದರು.

ಫೈರಿಂಗ್‌ನಂತಹ ಭೀಕರ ಘಟನೆಗಳು ನಡೆದರೂ ಕಾಂಗ್ರೆಸ್ ಸರ್ಕಾರ ಯಾವುದೇ ನೈತಿಕ ಹೊಣೆಗಾರಿಕೆ ವಹಿಸಿಲ್ಲ. ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳದೆ ಪ್ರಕರಣಗಳನ್ನು ಮುಚ್ಚಿಹಾಕುವ ಪ್ರಯತ್ನ ನಡೆಯುತ್ತಿದೆ. ಇದು ರಾಜ್ಯದಲ್ಲಿ ಕಾನೂನು ಪ್ರಭುತ್ವವೇ ಇಲ್ಲ ಎಂಬುದನ್ನು ತೋರಿಸುತ್ತದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದ್ದು, ರೈತ ವಿರೋಧಿ, ಜನ ವಿರೋಧಿ, ಅಭಿವೃದ್ಧಿ ವಿರೋಧಿ ಹಾಗೂ ಮಹಿಳಾ ವಿರೋಧಿ ನೀತಿಗಳನ್ನು ಅನುಸರಿಸುತ್ತಿದೆ ಎಂದು ವಿಜಯೇಂದ್ರ ಆರೋಪಿಸಿದರು. ರೈತರ ಸಮಸ್ಯೆಗಳಿಗೆ ಸ್ಪಂದನೆ ಇಲ್ಲ, ಮಹಿಳೆಯರ ಸುರಕ್ಷತೆ ಪ್ರಶ್ನಾರ್ಥಕವಾಗಿದೆ, ಯುವಕರಿಗೆ ಉದ್ಯೋಗ ಇಲ್ಲ, ಅಭಿವೃದ್ಧಿ ಕಾಮಗಾರಿಗಳು ಸ್ಥಗಿತಗೊಂಡಿವೆ ಎಂದು ಹೇಳಿದರು.

ಬಳ್ಳಾರಿಯಂತಹ ಗಣಿಗಾರಿಕೆ, ಕೈಗಾರಿಕೆ ಹಾಗೂ ಕೃಷಿಗೆ ಮಹತ್ವವಿರುವ ಜಿಲ್ಲೆಯಲ್ಲಿ ಅಭಿವೃದ್ಧಿ ಸಂಪೂರ್ಣವಾಗಿ ಕುಂಠಿತಗೊಂಡಿ-ದೆ. ಕಾಂಗ್ರೆಸ್ ಸರ್ಕಾರದ ದುರಾಡಳಿತದಿಂದ ಜನರಲ್ಲಿ ಅಸಮಾಧಾನ ಹೆಚ್ಚುತ್ತಿದ್ದು, ಜನರು ಭಯ ಮತ್ತು ಅಸುರಕ್ಷಿತತೆಯ ನಡುವೆ ಜೀವನ ನಡೆಸುವಂತಾಗಿದೆ ಎಂದು ಹೇಳಿದರು.

ರಾಜ್ಯದಲ್ಲಿ ಕಾನೂನು ಪಾಲನೆ ಮಾಡಿಸುವಲ್ಲಿ ಕಾಂಗ್ರೆಸ್ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಈ ಸರ್ಕಾರದ ವಿರುದ್ಧ ಜನರ ಆಕ್ರೋಶ ದಿನೇದಿನೇ ಹೆಚ್ಚುತ್ತಿದ್ದು, ಮುಂದಿನ ದಿನಗಳಲ್ಲಿ ಜನರು ಸರಿಯಾದ ಪಾಠ ಕಲಿಸಲಿದ್ದಾರೆ. ಬಳ್ಳಾ-ರಿಯ ಶಾಂತಿ, ಭದ್ರತೆ ಹಾಗೂ ಅಭಿವೃದ್ಧಿಗಾಗಿ ಬಿಜೆಪಿ ಸದಾ ಹೋರಾಟ ನಡೆಸಲಿದೆ ಎಂದು ವಿಜಯೇಂದ್ರ ಭರವಸೆ ನೀಡಿದರು.

ಈ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದ ಜೆಡಿಎಸ್ ಜಿಲ್ಲಾ ಅಧ್ಯಕ್ಷ ಮೀನಹಳ್ಳಿ ತಾಯಣ್ಣ ಅವರು, ಮಾಜಿ ಸಚಿವ ಜನಾರ್ಧನ್ ರೆಡ್ಡಿ ಅವರು ತನಿಖಾ ಸಂಸ್ಥೆಗಳಿಗೆ ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸಿದ್ದರೂ ಸಹ ಅವರಿಗೆ ನಿರಂತರವಾಗಿ ಕಿರುಕುಳ ನೀಡಲಾಗುತ್ತಿದೆ. ಆದರೆ ನಿಜವಾದ ತಪ್ಪಿತಸ್ಥರ ಮೇಲೆ ಯಾವುದೇ ರೀತಿಯ ಶಿಕ್ಷೆ ಆಗಿಲ್ಲ ಎಂದು ಆರೋಪಿಸಿದರು.

ಸತೀಶ್ ರೆಡ್ಡಿ ಅವರ ಗನ್‌ಮನ್ ಮೂಲಕ ನಡೆದ ಫೈರಿಂಗ್ ಘಟನೆ ಅತ್ಯಂತ ಖಂಡನೀಯವಾಗಿದೆ. ಇಂತಹ ಗಂಭೀರ ಪ್ರಕರಣಗಳಿಗೂ ಸರ್ಕಾರ ಸರಿಯಾದ ಕ್ರಮ ಕೈಗೊಳ್ಳದಿರುವುದು ಕಾನೂನು ವ್ಯವಸ್ಥೆ ಕುಸಿದಿರುವುದಕ್ಕೆ ಸ್ಪಷ್ಟ ಉದಾಹರಣೆ ಎಂದು ಮೀನಹಳ್ಳಿ ತಾಯಣ್ಣ ಹೇಳಿದರು.

# ಸಂಗೀತ.ಮನಸ್ಸಿಗೆ ಶಾಂತಿ. ಉಲ್ಲಾಸ. ಸಂತೋಷ ನೆಮ್ಮದಿ.ನೀಡುತ್ತದೆ ಡಾ. ಬಿರಾದಾರ

ಮಲ್ಲಮ್ಮ ನುಡಿ ವಾರ್ತೆ, ಸಿಂದನೂರ

ಗೀತೆಗಳಲ್ಲಿ ಹಲವಾರು ಪ್ರಕಾರಗಳು. ಇರುವಂತೆ ಸಂಗೀತದಲ್ಲಿ ಸಹ

ಹಲವಾರು ಪ್ರಕಾರಗಳಿವೆ. ಇವತ್ತು ಕಂಪ್ಯೂಟರ್ ಮತ್ತು ಮೊಬೈಲ್ ಬಳಿಕಿಯ ಕಾಲದಲ್ಲಿ ಬದುಕಿತ್ತಿರುವಂತ ನಾವುಗಳು ಎಲ್ಲವನ್ನು ಮೊಬೈಲ್ ನಲ್ಲಿ ನೋಡಿ ಸಂತೋಷವನ್ನು ಪಡ್ತಾ ಇದ್ದೇವೆ. ಆದರೆ ಸಂಗೀತ ಕ್ಷೇತ್ರದಲ್ಲಿ ಹಲವಾರು ಮಹನಿಯರು ತಮ್ಮದಾದ ಸಾಧನೆಯನ್ನು ಮಾಡಿ ಇತಿಹಾಸದ ಪುಟದಲ್ಲಿ ಸಂಗೀತ ಕ್ಷೇತ್ರದಲ್ಲಿ ತಮ್ಮ ಹೆಸರನ್ನು ಉಳಿಸಿದ್ದಾರೆ ಮಾಡಿದ್ದಾರೆ. ಹಿಂದೆ ರಾಜ ಮಹಾರಾಜರ ಕಾಲದಲ್ಲಿ ಸಂಗೀತಗಾರರು ಹಾಡು ಹಾಡಿದರೆ ಮಳೆ ಬರುತ್ತಿತ್ತು.ಸಂಗೀತಕ್ಕೆ ದೀಪ ಹಚ್ಚುವ ಶಕ್ತಿ ಇದೆ.ಸಂಗೀತಕ್ಕೆ ಹೂಗಳನ್ನ ಅರಳಿಸುವ ಶಕ್ತಿ ಇದೆ .ಸಂಗೀತ ಮನಸ್ಸಿಗೆ ಶಾಂತಿ. ಉಲ್ಲಾಸ. ನೆಮ್ಮದಿ.ಕೊಡುತ್ತದೆ ಇವತ್ತು.ರಾಜಶೇಖರ್ ನೂಲಿ. ಒಂದು ಸಂಸ್ಕೃತ ಮತ್ತು ಸಂಗೀತ ಕಲಾವಿದರ ಕುಟುಂಬದಿಂದ ಬಂದವರು. ಇವರು ತಮ್ಮ ಗುರುಗಳಾದ ದಿವಂಗತ ನಾರಾಯಣ ಡಗಿ ಅವರ ಸ್ಮರಣೆ ಮಾಡುವಂತಹ ಕೆಲಸವನ್ನು ಮಾಡುತ್ತಿರುವುದು ಗುರುಗಳುಗಳಿಗೆ ಶಿಷ್ಯರು ಕೊಡುವ ಗೌರವವಾಗಿದೆ.ನೂಲಿ ಕುಟುಂಬ ಎಂದರೆ ಸಾಹಿತ್ಯ. ಶೈಕ್ಷಣಿಕ. ಸಂಗೀತದ ಮತ್ತು ಕಲಾವಿದರ ಒಳಗೊಂಡ ಸಂಗಮ ಕುಟುಂಬವಾಗಿದೆ.ಓಂ ಸಾಯಿ ಧ್ಯಾನ ಮಂದಿರದಲ್ಲಿ ಸುಗಮ ಸಂಗೀತದ ಪ್ರ ಪ್ರಥಮ ಬಾರಿಗೆ ಕಾರ್ಯಗಾರವನ್ನು ಹಮ್ಮಿಕೊಂಡಿದ್ದಾರೆ. ಈ ಒಂದು ಕಾರ್ಯಾಗಾರದಲ್ಲಿ ಸಂಗೀತವನ್ನು ಕಲಿಯಲು



ಹಲವಾರು ಮಕ್ಕಳು ಆಸಕ್ತ ಜನರು ಬಂದಿದ್ದೀರಿ. ನಿಮ್ಮ ಆಸಕ್ತಿಗೆ ನಿಜವಾಗಲೂ ನಾನು ಅಭಿನಂದನೆ ಸಲ್ಲಿಸುತ್ತೇನೆ.ಓಂ ಸಾಯಿ ಮಂದಿರದ. ಗುರೂಜಿ ಸಾಯಿಕಿರಣ ಆಥೊನಿಯವರು ಹಲವಾರು ಕಲಾವಿದರನ್ನು ಬೆಳೆಸುವಂತ ಕಾರ್ಯವನ್ನು ಮಾಡುತ್ತಿದ್ದಾರೆ.ಉತ್ತಮ ಸ್ಥಳ ದಲ್ಲಿ ಇವತ್ತು ಈ ಕಾರ್ಯಗಾರ ಪ್ರಾರಂಭವಾಗಿದೆ.ಅದು ಅರ್ಥಪೂರ್ಣವಾಗಿ ಯಶಸ್ವಿ ಆಗಲೆಂದು ದಿನಾಂಕ 18.01.2026ರಂದು ರಾಯಚೂರು ನಗರದ ಸಾರ್ವಜನಿಕ ಗ್ರಂಥಾಲಯ ಹತ್ತಿರ ಇರುವ.ಓಂ ಸಾಯಿ ಧ್ಯಾನ ಮಂದಿರದ ದಲ್ಲಿ. ಸುರಾಗ ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್. ಬೆಂಗಳೂರು.ರಾಯಚೂರಗೆಳೆಯರ ಬಳಗದ ಸಂಯೋಗದಲ್ಲಿ ರಾಯಚೂರಿನಲ್ಲಿ ಪ್ರಪ್ರಥಮ ಬಾರಿಗೆ ಸುಗಮ ಸಂಗೀತ ಕಾರ್ಯಗಾರ ಮತ್ತು ಪ್ರತಿಭಾನ್ವೇಷಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹ ಕಾರ್ಯದರ್ಶಿಯಾದ ಡಾ. ದಂಡಪ್ಪ ಬಿರಾದಾರ ಮಾತನಾಡಿದರು. ಓಂ ಸಾಯಿ ಜ್ಞಾನ ಮಂದಿರದ ವ್ಯವಸ್ಥಾಪಕರಾದ ಕವಿತಾ ಸಾಯಿ ಕಿರಣ ಆಥೊನಿ.ಇವರು ಗುರುಗಳ ಭಾವಚಿತ್ರಕ್ಕೆ ಮಾಲಾರ್ಪಣೆ . ಈ ಸಂದರ್ಭದಲ್ಲಿ ಪ್ರತಾಪರೆಡ್ಡಿ. ಹುಲಿಗೆಪ್ಪ. ಭೀಮ ಹೊಸುರ್ , ರವೀಂದ್ರ ನಾಯಕ್ ಶ್ರೀಮತಿ ಅನ್ನಪೂರ್ಣ

ನೂಲಿ ಸೇರಿದಂತೆ ಇನ್ನಿತರು ಉಪಸ್ಥಿತರಿದ್ದರು ಸಂಗೀತಗಾರದ ನರಸಿಂಹಲು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರೂಪಣೆ ಮಾಡಿ ಕಾರ್ಯಕ್ರಮದ ಕೊನೆಯಲ್ಲಿ ವಂದಿಸಿದರು. ಕಾರ್ಯಕ್ರಮದ ರೂವಾರಿಗಳಾದ ರಾಜಶೇಖರ ಸಿರಿಕಂಠದಿಂದ ಸುಗಮ ಸಂಗೀತ ಕಲಿಯುವ ಕುರಿತು ಉತ್ತಮವಾದ ಹಾಡುಗಳು ಮತ್ತು ಮಾರ್ಗದರ್ಶನವನ್ನ ಸುಗಮ ಸಂಗೀತ ಕಲಿಕಾರ್ಥಿಗಳಿಗೆ ನೀಡಿದರು.

# ಕುಡತಿನಿ: ಮುಂಗಡ ಆಯ-ವ್ಯಯ ವರದಿ ಸಿದ್ಧತಾ ಸಭೆ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

**ಕುಡತಿನಿ ಪಟ್ಟಣ ಪಂಚಾಯಿತಿಯ ೨೦೨೬-೨೭ನೇ ಸಾಲಿನ ಮುಂಗಡ ಆಯ-ವ್ಯಯ ವರದಿ ಸಿದ್ಧತೆ ಅಂಗವಾಗಿ ಶುಕ್ರವಾರ ಆಡಳಿತಾಧಿಕಾರಿ ಅಧ್ಯಕ್ಷತೆಯಲ್ಲಿ ಪಟ್ಟಣ ಪಂಚಾಯಿತಿಯ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ನಡೆಯಿತು.**

**ಸ್ವೀಕಾರಗೊಂಡ ಸಲಹೆ-ಸೂಚನೆ:**

ಕುಡತಿನಿ ಪಟ್ಟಣದ 02 ನೇ ವಾರ್ಡ್ನಲ್ಲಿ ಚರ್ಚ್ ಹತ್ತಿರ ಉಳಿಕೆ ರಸ್ತೆ ಕಾಮಗಾರಿಯನ್ನು ಅಳವಡಿಸಿ ಪೂರ್ಣಗೊಳಿಸುವುದು. 02 ನೇ ವಾರ್ಡಿನಲ್ಲಿ ಈಗಾಗಲೇ ಮುಕ್ತಾಯವಾದ ರಸ್ತೆ ಕಾಮಗಾರಿ ಅಕ್ಕ ಪಕ್ಕ ಗ್ರಾವೆಲ್ ಹಾಕುವುದು. ಕೆರೆ ಹತ್ತಿರ 1 ಲಕ್ಷ ಲೀಟರ್ ಸಾಮರ್ಥ್ಯವುಳ್ಳ ಕುಡಿಯುವ ನೀರಿನ ಟ್ಯಾಂಕ್ ನಿರ್ಮಾಣ ಮಾಡುವುದು. ಕನ್ನಡ ಉಳಿವಿಗಾಗಿ ಕರ್ನಾಟಕ ರಕ್ಷಣಾ ವೇದಿಕೆಗೆ ವಸತಿ ಕಲ್ಪಿಸಲು ಸೂಚಿಸಲಾಯಿತು.

09 ನೇ ವಾರ್ಡಿನಲ್ಲಿ ದುರಸ್ಥಿಯಲ್ಲಿದ್ದ ರಸ್ತೆಯನ್ನು ಅಗೆದು ಪೇರ್ಸ್ ಹಾಕಲು ಕ್ರಮವಹಿಸುವುದು. ರಾಜ ಕಾಲುವೆಯಲ್ಲಿನ ಶೀಲ್ಟ್ ತೆಗೆಯಲು ಕ್ರಮವಹಿಸುವುದು. 18ನೇ ವಾರ್ಡಿನಲ್ಲಿ ಚಲುವಾದಿ ಕೇರಿಯಲ್ಲಿ ಜನಾಂಗದವರು ಕಾಯ್ದಿರಿಸಿದ 100-100 ಸ್ಥಳದಲ್ಲಿ ಗ್ರಂಥಾಲಯ ಅಥವಾ ಭವನ ನಿರ್ಮಾಣ ಮಾಡಲು ಸೂಚಿಸಿದರು.

ಬಳಿಕ ಸಭೆಯಲ್ಲಿ ಪಟ್ಟಣ ಪಂಚಾಯಿತಿಯ ನಿಕಟಪೂರ್ವ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಹಾಗೂ ಕುಡತಿನಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿರುವ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಪಟ್ಟಣದ ಹಿರಿಯ ನಾಗರಿಕರು, ಪಟ್ಟಣದ ಮುಖಂಡರು ಭಾಗವಹಿಸಿ ತಮ್ಮ ಅಮೂಲ್ಯ ಸಲಹೆಗಳನ್ನು ನೀಡಿದರು.

# ಹಳ್ಳಿಗಳಲ್ಲಿ ಅಪರೂಪವಾಗುತ್ತಿರುವ ಆಲೆಮನೆ ಸೊಗಡು

ಮಲ್ಲಮ್ಮ ನುಡಿ ವಾರ್ತೆ ,ಗೋಕರ್ಣ

:ಆಧುನಿಕ ಭರಾಟೆಯಲ್ಲಿ ಗ್ರಾಮೀಣ ಸೊಗಡುಗಳು ಕೂಡ ನಶಿಸುವ ಹಂತ ತಲುಪಿದೆ. ಈ ಹಿಂದೆ ಆಲೆಮನೆ (ಕಬ್ಬಿನ ಗಾಣ) ಎಲ್ಲೆಡೆ ಕಂಡುಬರುತ್ತಿದ್ದವು. ಬೆಲ್ಲದ ಡಬ್ಬಿ ಸ್ಥಳೀಯವಾಗಿಯೇ ಖರೀದಿಸಿ ಅದನ್ನು ನಿತ್ಯ ಬಳಕೆಯಲ್ಲಿಯೂ ಜನರು ಬಳಸುತ್ತಿದ್ದರು. ಆದರೆ ಅಂಗಡಿಗಳಲ್ಲಿ ಸಿಗುವ ಬೆಲ್ಲ ಇನ್ನು ಕಡಿಮೆ ಬೆಲೆಯಲ್ಲಿ ದೊರೆಯುತ್ತದೆ ಎಂದರೆ ಅದು ಕಲಬುರಗಿ ಅಲ್ಲದೇ ಉತ್ತಮ ಗುಣಮಟ್ಟದ ಬೆಲ್ಲವನ್ನು ಕಡಿಮೆ ಬೆಲೆಯಲ್ಲಿ ಸಿಗಲು ಸಾಧ್ಯವಿಲ್ಲ.

ಇಂತಹ ಆಲೆಮನೆಯು ಅಪರೂಪಕ್ಕೆ ಎಂಬಂತೆ ಗ್ರಾಮೀಣ ಭಾಗದಲ್ಲಿ ಅಲ್ಲೊಂದು ಇಲ್ಲೊಂದು ಮಾತ್ರ ಕಂಡುಬರುತ್ತದೆ. ಹಾಗೇ ಹೆಬೈಲ್ ಗ್ರಾಮದ ಶಂಕರ ತಿಮ್ಮಯ್ಯ ನಾಯ್ಕ ಅವರ ಮನೆಯಲ್ಲಿ ಆಲೆಮನೆ ಕಂಡುಬಂದಿದ್ದು, ಬೆಲ್ಲ ತಯಾರಿಸುವ ರೀತಿಯನ್ನು ನೋಡಿದರೆ ನಿಜಕ್ಕೂ ಖುಷಿ ಎನಿಸುತ್ತದೆ. ಯಾವುದೇ ಕಲಬೆರಕೆಯಿಲ್ಲದೇ ಸಿದ್ಧಗೊಳ್ಳುವ ಈ ಬೆಲ್ಲ ಆರೋಗ್ಯಕ್ಕೂ ಕೂಡ ಒಳ್ಳೆಯದು.



ಈಗ ಆಲೆಮನೆ ನೋಡುವುದೇ ಒಂದು ಸೊಗಸು ಎನ್ನುವಂತಾಗಿದೆ. ಈ ಹಿಂದೆ ಕಂಡುಬರುತ್ತಿದ್ದ ಆಲೆಮನೆ ಈಗ ಕಾಲದ ಅಂಚಿಗೆ ಸರಿದಿದೆ. ಆದರೆ ಕೆಲವು ಕೂಡು ಕುಟುಂಬಸ್ಥರು ಮಾತ್ರ ಆಲೆಮನೆ ಮಾಡುವುದು ಅಪರೂಪಕ್ಕೆ ಎಲ್ಲೋ ಕಂಡುಬರುವಂತಾಗಿದೆ. ಶಂಕರ ನಾಯ್ಕ ಕುಟುಂಬದವರು ಸೇರಿ ತಾವೇ ಸ್ವತಃ ಕೆಲಸಗಳನ್ನು ನಿರ್ವಹಿಸುವುದು ವಿಶೇಷವಾಗಿದೆ.

**ಮಂಜುನಾಥ ಎಲ್. ನಾಯ್ಕ**
**ಕಾಂಗ್ರೆಸ್ ಮುಖಂಡರು ಕುಮಟಾಹೊನ್ನಾವರ**

ಶಂಕರ ನಾಯ್ಕ ಹಾಗೂ ಸೀತಾ ದಂಪತಿಗಳ ಆಲೆಮನೆಗೆ (ಕಬ್ಬಿನ ಗಾಣಕ್ಕೆ) ಭೇಟಿ ನೀಡಿದಾಗ ಆಗ ತಾನೆ ಕಬ್ಬನ್ನು ಕಡಿದು, ಕಬ್ಬಿನ ಗಾಣದಿಂದ ಹಾಲನ್ನು ಸಿದ್ಧಪಡಿಸಿ ನಂತರ ಬೆಲ್ಲವನ್ನು ಮಾಡಿ, ಇಲ್ಲಿಗೆ ಭೇಟಿ ನೀಡಿದವರಿಗೆ ಹಾಲು ಮತ್ತು ಬೆಲ್ಲವನ್ನು ಸೇವಿಸಲು ನೀಡುತ್ತಾರೆ. ಕರ್ನಾಟಕ ಆರ್ಯ ಈಡಿಗ ನಾಮಧಾರಿ ಸಂಘದ ಜಿಲ್ಲಾಧ್ಯಕ್ಷ ಹಾಗೂ ಕಾಂಗ್ರೆಸ್ ಮುಖಂಡ ಮಂಜುನಾಥ ಎಲ್. ನಾಯ್ಕ ಭೇಟಿ ನೀಡಿ ಅಲ್ಲಿಯ ಸವಿಯನ್ನು ಸವಿದರು.

ಈ ಬೆಲ್ಲ ತಯಾರಿಸುವಾಗ ಕುಟುಂಬಸ್ಥರಾದ ನಾರಾಯಣ ಶಂಕರ ನಾಯ್ಕ,ಜಾನಕಿ,ಮಹೇಂದ್ರ ಚಿದಾನಂದ, ಚಂದ್ರಶೇಖರ ಶಂಕರ ನಾಯ್ಕ,ಸಾವಿತ್ರಿ,ಹರ್ಷಿತಾ,ಭವ್ಯಾ, ದಿವ್ಯಾ, ರಾಮಚಂದ್ರ ಶಂಕರ ನಾಯ್ಕ, ಭವಾನಿ, ರಕ್ಷಿತಾ, ರಂಜಿತಾ, ಗಂಗಾಧರ ಶಂಕರ ನಾಯ್ಕ, ಜಾನಕಿ, ಕವನಾ, ರಾಶಿ,ಸವಿತಾ ಯಶವಂತ ನಾಯ್ಕ, ಯಶವಂತ ಸೇರಿದಂತೆ ಇತರರು ಸಹಕರಿಸಿದರು. ಮನೆಯವರೇ ಸೇರಿ ಈ ಕಾರ್ಯ ಮಾಡಿದರೆ ಖರ್ಚು ಕಡಿಮೆಯಾಗುತ್ತದೆ. ಇಲ್ಲದಿದ್ದರೆ ಕೂಲಿಯಾಳುಗಳಿಗೆ ದುಬಾರಿ ಹಣ ನೀಡಬೇಕಾಗುತ್ತದೆ.

# ಪರೀಕ್ಷಾ ಕೇಂದ್ರಗಳ ಸುತ್ತ 200 ಮೀ. ವ್ಯಾಪ್ತಿ ನಿರ್ಬಂಧ ವಿಧಿಸಿ ಡಿಸಿ ನಾಗೇಂದ್ರ ಪ್ರಸಾದ್.ಕೆ ಆದೇಶ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:



ನಗರದ 04 ಪರೀಕ್ಷಾ ಕೇಂದ್ರಗಳಲ್ಲಿ ದೆಹಲಿಯ ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ ವತಿಯಿಂದ ಜ.18 ರಂದು ಆಲ್ ಇಂಡಿಯಾ ಸೈನಿಕ ಶಾಲೆಗಳ ಪ್ರವೇಶ ಪರೀಕ್ಷೆ-2026 ನಡೆಯಲಿದ್ದು, ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ಆವರಣವನ್ನು ಭಾರತೀಯ ನಾಗರೀಕ ಸುರಕ್ಷಾ ಸಂಹಿತಾ 2023 ರ ಕಲಂ 163 ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ನಿರ್ಭಂಧಿತ ಪ್ರದೇಶವೆಂದು ಘೋಷಿಸಿ ಜಿಲ್ಲಾ ದಂಡಾಧಿಕಾರಿ ಆದ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್. ಕೆ ಅವರು ಆದೇಶಿಸಿದ್ದಾರೆ.

ಪರೀಕ್ಷಾ ಕೇಂದ್ರಗಳ ಸುತ್ತ ಮುತ್ತಲಿನ ಜೆರಾಕ್ಸ್ ಸೆಂಟರ್ ಮತ್ತು ಇಂಟರ್‌ನೆಟ್ ಸೆಂಟರ್‌ಗಳನ್ನು ಕಾರ್ಯನಿರ್ವಹಿಸದಂತೆ ಆದೇಶಿಸಿದ್ದು, ಆ ಪ್ರದೇಶದಲ್ಲಿ ಅನಧೀಕೃತ ವ್ಯಕ್ತಿ ಮತ್ತು ವ್ಯಕ್ತಿಗಳ ಗುಂಪುಗಳಿಗೆ ಪ್ರವೇಶ ನಿಷೇಧಿಸಲಾಗಿದೆ.ಈ ಆದೇಶವು ಪರೀಕ್ಷೆಯ ಮೇಲ್ವಿಚಾರಣೆ ಕಾರ್ಯನಿರ್ವಹಿಸುವ ಸಿಬ್ಬಂದಿಯವರೆಗೆ ಅನ್ವಯಿಸುವುದಿಲ್ಲ ಎಂದು ಅವರು ಹೊರಡಿಸಿರುವ ಆದೇಶದಲ್ಲಿ ತಿಳಿಸಿದ್ದಾರೆ.

# ಭೀಮಣ್ಣ ಖಂಡ್ರೆ ನಿಧನಕ್ಕೆ ಶಿಂಧೆ ಸಂತಾಪ



• ಮಲ್ಲಮ್ಮ ನುಡಿ ವಾರ್ತೆ,ಕಮಲನಗರ:

ಹಿರಿಯ ಮುತ್ಸದ್ದಿ, ಸ್ವಾತಂತ್ರ್ಯ ಹೋರಾಟಗಾರ,ಕರ್ನಾಟಕ ಸರ್ಕಾರದ ಮಾಜಿ ಸಚಿವರು ಹಾಗೂ ಅಖಿಲ ಭಾರತೀಯ ವೀರಶೈವ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷರಾದ ಸನ್ಮಾನ್ಯಶ್ರೀ ಭೀಮಣ್ಣ ಖಂಡ್ರೆ ಅವರ ನಿಧನದ ಸುದ್ದಿ ತಿಳಿದು ಮನಸ್ಸಿಗೆ ತೀವ್ರ ನೋವಾಗಿದೆ ಎಂದು ಕಾಂಗ್ರೆಸ್ ಮುಖಂಡ ಡಾ. ಭೀಮಸೇನರಾವ್ ಶಿಂಧೆ ಕಂಬನಿ ಮಿಡಿದಿದ್ದಾರೆ.ಸರಳತೆ, ಸತ್ಯ ನಿಷ್ಠೆ ಮತ್ತು ಜನಪರ ಕಾಳಜಿಯೊಂದಿಗೆ ಬದುಕಿದ ಖಂಡ್ರೆ ಅವರು ತಮ್ಮ ಜೀವನವನ್ನೆಲ್ಲ ಸಮಾಜದ

ಹಿತಕ್ಕಾಗಿ ಅರ್ಪಿಸಿದ ಮಹಾನ್ ವ್ಯಕ್ತಿತ್ವವಾಗಿದ್ದರು.ಅವರ ಅಗಲಿಕೆಯಿಂದ ಕುಟುಂಬಕ್ಕೆ ಮಾತ್ರವಲ್ಲ,

ಸಮಸ್ತ ಸಮಾಜಕ್ಕೂ ತುಂಬಲಾರದ ನಷ್ಟ ಉಂಟಾಗಿದೆ ಎಂದು ಅವರು ತಿಳಿಸಿದ್ದಾರೆ.ಖಂಡ್ರೆ ಅವರ ಆತ್ಮಕ್ಕೆ ಶಾಂತಿ ದೊರೆಯಲಿ ಹಾಗೂ ಈ ದುಃಖವನ್ನು ಭರಿಸುವ ಶಕ್ತಿಯನ್ನು ಕುಟುಂಬಸ್ಥರಿಗೆ ದೇವರು ನೀಡಲಿ ಎಂದು ಡಾ.ಶಿಂಧೆ ಪ್ರಾರ್ಥಿಸಿದ್ದಾರೆ.

# ಎನ್‌ಇಪಿ-2020 ವಿರುದ್ಧ ತೀವ್ರ ವಿರೋಧ

## ಸಾರ್ವಜನಿಕ ಶಿಕ್ಷಣ ಉಳಿವಿಗೆ 'ಜನ ಶಿಕ್ಷಣ ನೀತಿ' ಜಾರಿಗೆ ಒತ್ತಾಯ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:

ಬಳ್ಳಾರಿಯ ಪತ್ರಿಕಾ ಭವನದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ, ಪ್ರತಿಯೊಂದು ಮಗುವಿಗೂ ಉಚಿತ ಹಾಗೂ ಸಮಾನ ಶಿಕ್ಷಣ ದೊರಕಬೇಕು ಮತ್ತು ಪ್ರತಿ ಹಳ್ಳಿಯಲ್ಲೂ ಸರ್ಕಾರಿ ಶಾಲೆಗಳಿರಬೇಕು ಎಂಬುದು ನಮ್ಮ ದೇಶದ ಮಹಾನ್ ನವೋದಯ ಚಿಂತಕರು ಹಾಗೂ ಸ್ವಾತಂತ್ರ್ಯ ಹೋರಾಟಗಾರರ ಕನಸಾಗಿತ್ತು. ಆದರೆ ಸ್ವಾತಂತ್ರ್ಯಕ್ಕೆ 78 ವರ್ಷಗಳಾದರೂ ಆ ಕನಸು ಇನ್ನೂ ನನಸಾಗಿಲ್ಲ ಎಂದು ಶಿಕ್ಷಣ ಹೋರಾಟಗಾರರು ಹಾಗೂ ಚಿಂತಕರು ಆತಂಕ ವ್ಯಕ್ತಪಡಿಸಿದರು.ಸರ್ಕಾರಿ ಶಿಕ್ಷಣ ವ್ಯವಸ್ಥೆ ಇಂದು ಅಳಿವಿನ ಅಂಚಿನಲ್ಲಿದ್ದು, ಶಿಕ್ಷಣದ ವ್ಯಾಪಾರೀಕರಣ ಎಲ್ಲೆಡೆ ವ್ಯಾಪಿಸಿದೆ. ದುಬಾರಿ ಶುಲ್ಕಗಳ ಭಾರ ಜನಸಾಮಾನ್ಯರ ಮೇಲೆ ಬಿದ್ದಿದ್ದು, ಲಕ್ಷಾಂತರ ಮಕ್ಕಳು ಶಾಲೆಯಿಂದ ಹೊರಗುಳಿಯುತ್ತಿದ್ದಾರೆ. ಎನ್‌ಇಪಿ ಶಿಫಾರಸುಗಳ ಹೆಸರಿನಲ್ಲಿ ದೇಶಾದ್ಯಂತ




ಸಾವಿರಾರು ಸರ್ಕಾರಿ ಶಾಲೆಗಳನ್ನು ವಿಲೀನಗೊಳಿಸಿ ಮುಚ್ಚಲಾಗುತ್ತಿದ್ದು, ಇದು ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯ ಬೆನ್ನೆಲುಬನ್ನೇ ಮುರಿಯುವ ಕ್ರಮವಾಗಿದೆ ಎಂದು ವಕ್ತಾರರು ಅಭಿಪ್ರಾಯಪಟ್ಟರು. ಶಿಕ್ಷಣವನ್ನು ಮೂಲಭೂತ ಹಕ್ಕಿನ ಬದಲು ಮಾರುಕಟ್ಟೆಯ ಸರಕಾಗಿಸಲಾಗುತ್ತಿದೆ; ಸರ್ಕಾರ ತನ್ನ ಜವಾಬ್ದಾರಿಯಿಂದ ಹಿಂದೆ ಸರಿಯುತ್ತಿದೆ ಎಂಬ ಗಂಭೀರ ಆರೋಪಗಳೂ ಕೇಳಿಬಂದವು.

ಪಠ್ಯಪುಸ್ತಕಗಳ ತಿದ್ದುಪಡಿ ಹೆಸರಿನಲ್ಲಿ ತರ್ಕವಿಲ್ಲದ ಹಾಗೂ ಮೂಢನಂಬಿಕೆಗಳ ವಿಚಾರಗಳನ್ನು ಮಕ್ಕಳ ಮೇಲೆ ಹೇರುವ ಪ್ರಯತ್ನ ನಡೆಯುತ್ತಿದ್ದು,

ಎನ್‌ಇಪಿಗೆ ಪರ್ಯಾಯವಾಗಿ 'ಜನ ಶಿಕ್ಷಣ ನೀತಿ' ಜಾರಿಗೆ ತರಬೇಕೆಂದು ಆಗ್ರಹಿಸಲಾಯಿತು. ಉತ್ತಮ ಶಿಕ್ಷಣ ಒದಗಿಸುವ ಸಂಪೂರ್ಣ ಹೊಣೆಗಾರಿಕೆ ಸರ್ಕಾರದ್ದೇ ಆಗಬೇಕು.

ಕೇಂದ್ರ ಬಜೆಟ್‌ನ 10%, ಜಿಡಿಪಿಯ 6% ಹಾಗೂ ರಾಜ್ಯ ಬಜೆಟ್‌ಗಳ 25% ಶಿಕ್ಷಣಕ್ಕೆ ಮೀಸಲಿಡಬೇಕು. ಜೊತೆಗೆ ಖಾಲಿ ಇರುವ ಎಲ್ಲಾ ಖಾಯಂ ಬೋಧಕ ಹುದ್ದೆಗಳನ್ನು ಭರ್ತಿ ಮಾಡಿ, ಶಾಲೆ-ಕಾಲೇಜುಗಳಿಗೆ ಅಗತ್ಯ ಮೂಲಸೌಕರ್ಯ ಒದಗಿಸಬೇಕು ಎಂದು ಒತ್ತಾಯಿಸಲಾಯಿತು.

ಸಾರ್ವಜನಿಕ ಶಿಕ್ಷಣ ಉಳಿವಿಗಾಗಿ ಜನಜಾಗೃತಿ ಮತ್ತು ಸಂಘಟಿತ ಹೋರಾಟ ಅನಿವಾರ್ಯ ಎಂದು ವಕ್ತಾರರು ಕರೆ ನೀಡಿದರು.

# ಟ್ರಾಫಿಕ್ ನಿಯಮಗಳ ಪಾಲನೆಯೇ ಸುರಕ್ಷಿತ ಭವಿಷ್ಯದ ದಾರಿ ಶಫೀ ಉಲ್ಲಾ




• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:

ಟ್ರಾಫಿಕ್ ನಿಯಮಗಳು ಶಿಕ್ಷೆಗೆ ಮಾತ್ರವಲ್ಲ, ನಮ್ಮ ಅಮೂಲ್ಯ ಜೀವ ರಕ್ಷಣೆಗೆ ಅತ್ಯಂತ ಅಗತ್ಯವಾಗಿವೆ ಎಂದು ಬಳ್ಳಾರಿ ಟ್ರಾಫಿಕ್ ಪೊಲೀಸ್ ಇಲಾಖೆಯ ಸಹಾಯಕ ಉಪನಿರೀಕ್ಷಕ ಶಫೀ ಉಲ್ಲಾ ಅವರು ಹೇಳಿದರು.ಟ್ರಾಫಿಕ್ ಪೊಲೀಸ್ ಇಲಾಖೆ ಹಾಗೂ ಶ್ರೀ ವಾಸವಿ ವಿದ್ಯಾಲಯದ ಸಹಯೋಗದಲ್ಲಿ ವಿದ್ಯಾರ್ಥಿಗಳಲ್ಲಿ ಟ್ರಾಫಿಕ್ ನಿಯಮಗಳ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ವಾಸವಿ ಶಾಲೆಯಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ವಿಶೇಷ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.ಲ್ಮೆಟ್ ಮತ್ತು ಸೀಟ್ ಬೆಲ್ಟ್ ಧರಿಸುವುದು ಕಾನೂನು ಬಾಧ್ಯತೆಯಷ್ಟೇ ಅಲ್ಲ, ಕುಟುಂಬದ ಭವಿಷ್ಯವನ್ನು ರಕ್ಷಿಸುವ ಕರ್ತವ್ಯವೂ ಆಗಿದೆ ಎಂದರು.ಶಾಲಾ ಮುಖ್ಯಗುರುಗಳಾದ ವೀರೇಶ್. ಯು ಮಾತನಾಡಿ, ವಿದ್ಯಾರ್ಥಿ ಜೀವನದಲ್ಲೇ ಟ್ರಾಫಿಕ್ ರೂಲ್ಸ್‌ನ ಶಿಸ್ತು ಕಲಿತರೆ, ಮುಂದಿನ ದಿನಗಳಲ್ಲಿ ಸುರಕ್ಷಿತ ಮತ್ತು ಜವಾಬ್ದಾರಿಯುತ ನಾಗರಿಕರನ್ನು ನಿರ್ಮಿಸಲು ಸಾಧ್ಯ. ಶಾಲೆಯಲ್ಲಿ ಬೆಳೆದ ಶಿಸ್ತು ಸಮಾಜದ ಸುರಕ್ಷತೆಗೆ ಭದ್ರವಾದ ಅಡಿಪಾಯವಾಗುತ್ತದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಟ್ರಾಫಿಕ್ ಪೊಲೀಸ್ ಅಧಿಕಾರಿಗಳು ಭಾಗವಹಿಸಿ, ರಸ್ತೆ ಸುರಕ್ಷತೆ, ಹೆಲ್ಮೆಟ್ ಮತ್ತು ಸೀಟ್ ಬೆಲ್ಟ್ ಧಾರಣೆ, ಅಪ್ರಾಪ್ತ ವಯಸ್ಸಿನಲ್ಲಿ ವಾಹನ ಚಾಲನೆ ಮಾಡದಿರುವ ಮಹತ್ವ, ಮೊಬೈಲ್ ಬಳಸಿ ವಾಹನ ಚಲಾಯಿಸುವ ಅಪಾಯಗಳು ಹಾಗೂ ಟ್ರಾಫಿಕ್ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಅಗತ್ಯದ ಬಗ್ಗೆ ವಿದ್ಯಾರ್ಥಿಗಳಿಗೆ ಸ್ಪಷ್ಟವಾಗಿ ತಿಳಿಸಿದರು.ಇದೇ ವೇಳೆ ನೈಜ ಉದಾಹರಣೆಗಳ ಮೂಲಕ ರಸ್ತೆ ಅಪಘಾತಗಳ ದುಷ್ಪರಿಣಾಮಗಳನ್ನು ವಿವರಿಸಲಾಗಿದ್ದು, ವಿದ್ಯಾರ್ಥಿಗಳು ಟ್ರಾಫಿಕ್ ನಿಯಮಗಳನ್ನು ಸದಾ ಪಾಲಿಸುವುದಾಗಿ ಪ್ರತಿಜ್ಞೆ ಕೈಗೊಂಡರು.ಕಾರ್ಯಕ್ರಮದಲ್ಲಿ ಒಂದು ಕ್ಷಣದ ನಿರ್ಲಕ್ಷ್ಯ – ಜೀವಿತಕಾಲದ ಪಶ್ಚಾತ್ತಾಪಕ್ಕೆ ಕಾರಣವಾಗಬಹುದು. ಟ್ರಾಫಿಕ್ ನಿಯಮಗಳ ಪಾಲನೆಯೇ ಸುರಕ್ಷಿತ ಭವಿಷ್ಯದ ದಾರಿ ಎಂಬ ಸಂದೇಶವನ್ನು ಹೊಂದಿರುವ ವಿಡೀಯೋ ಪ್ರದರ್ಶಿಸಲಾಯಿತು.ಈ ಸಂದರ್ಭದಲ್ಲಿ ಶಾಲಾ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಇತರರು ಉಪಸ್ಥಿತರಿದ್ದರು.

# ಅಕ್ರಮ ಮರಳು ದಂಧೆ: 25 ಎತ್ತಿನಗಾಡಿ, 1 ಟ್ರಾಕ್ಟರ್ ಜಪ್ತಿ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:

ಬಳ್ಳಾರಿ ತಾಲೂಕಿನ ಮೋಕ ಗ್ರಾಮದ ನದಿ ತಟದಲ್ಲಿ ಅಕ್ರಮವಾಗಿ ಮರಳು (ಉಸುಗು) ಗಣಿಗಾರಿಕೆ ಹಾಗೂ ಸಾಗಣೆ ನಡೆಯುತ್ತಿದೆ ಎಂಬ ದೂರುಗಳ ಹಿನ್ನೆಲೆಯಲ್ಲಿ, ಸಹಾಯಕ ಆಯುಕ್ತ (ಎಸಿ) ರಾಜೇಶ್ ಹೆಚ್.ಡಿ. ಅವರ ನಿರ್ದೇಶನದಲ್ಲಿ ಭರ್ಜರಿ ಕಾರ್ಯಾಚರಣೆ ನಡೆಸಲಾಗಿದೆ.

ನಿನ್ನೆ ರಾತ್ರಿ 12 ಗಂಟೆಯಿಂದ ಇಂದು ಬೆಳಗಿನ ಜಾವ 3 ಗಂಟೆವರೆಗೆ ನಡೆದ ಕಾರ್ಯಾಚರಣೆಯಲ್ಲಿ, ಮೋಕ ಗ್ರಾಮದ ನದಿ ಪ್ರದೇಶದಲ್ಲಿ ಅಕ್ರಮವಾಗಿ



ಮರಳು ಸಾಗಣೆ ಮಾಡುತ್ತಿದ್ದ ಸುಮಾರು 20 ಎತ್ತಿನಗಾಡಿಗಳು ಮತ್ತು ಒಂದು ಟ್ರಾಕ್ಟರ್ ಅನ್ನು ವಶಪಡಿಸಿಕೊಳ್ಳಲಾಗಿದೆ. ಜೊತೆಗೆ ಸಂಗನಕಲ್ ಗ್ರಾಮ ವ್ಯಾಪ್ತಿಯಲ್ಲಿ 5 ಎತ್ತಿನಗಾಡಿಗಳನ್ನೂ ಜಪ್ತಿ ಮಾಡಲಾಗಿದೆ.ಕಾರ್ಯಾಚರಣೆ ವೇಳೆ ಸುಮಾರು 15 ಎತ್ತಿನಗಾಡಿಗಳು ಪರಾರಿಯಾಗಿರುವುದು ತಿಳಿದುಬಂದಿದೆ. ಗಮನಾರ್ಹ ಸಂಗತಿಯೆಂದರೆ, ಸುಮಾರು ಒಂದು ತಿಂಗಳ ಹಿಂದೆಯೇ ಎಸಿ ರಾಜೇಶ್ ಹೆಚ್.ಡಿ. ಅವರು ಸ್ವತಃ ಸ್ಥಳಕ್ಕೆ ಭೇಟಿ ನೀಡಿ, ಅಕ್ರಮ ಉಸುಗು ಸಾಗಣೆ ಮುಂದುವರಿದರೆ ಕಠಿಣ ಕಾನೂನು ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದ್ದರು. ಆದರೂ ದಂಧೆ ಮುಂದುವರಿದಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ.

ಈ ಹಿನ್ನೆಲೆಯಲ್ಲಿ ಬಳ್ಳಾರಿ ಗ್ರಾಮೀಣ ಪೊಲೀಸ್ ಠಾಣೆ ಹಾಗೂ ಮೋಕ ಪೊಲೀಸ್ ಠಾಣೆಯ ನಿರ್ಲಕ್ಷ್ಯವೇ ಅಕ್ರಮ ಮರಳು ದಂಧೆಗೆ ಕಾರಣ ಎಂಬ ಆರೋಪಗಳು ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿವೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಂದಿನ ಕಾನೂನು ಕ್ರಮ ಜಾರಿಯಲ್ಲಿದೆ. ಅಕ್ರಮ ಮರಳು ಸಾಗಣೆ ಪ್ರಕರಣದಲ್ಲಿ 24 ಎತ್ತಿನಗಾಡಿಗಳ ಮೇಲೆ ತಲಾ -6,500 ದಂಡ ವಿಧಿಸಲಾಗಿದ್ದು, ಒಟ್ಟು -1,56,000 ದಂಡ ವಿಧಿಸಲಾಗಿದೆ. ಜೊತೆಗೆ ಒಂದು ಟ್ರಾಕ್ಟರ್ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಎಸಿ ರಾಜೇಶ್ ಹೆಚ್.ಡಿ. ಅವರು ತಿಳಿಸಿದ್ದಾರೆ.

# ಈ ನಾಡು ಕಂಡ ಅಪರೂಪದ ಚೇತನ

## ಪಕ್ಷದ ಹೆಸರಿನಲ್ಲಿ ಮಿಂಚಿದವರಲ್ಲ, ತಮ್ಮ ವ್ಯಕ್ತಿತ್ವದಿಂದ ಪಕ್ಷವನ್ನು ಮಿಂಚಿಸಿದವರು.



ಪರಶುರಾಮ ಕರಣಂ.ಭಾಲ್ಕಿ.

ಡಾ. ಭೀಮಣ್ಣ ಖಂಡ್ರೆ ಕರುನಾಡಿನ ಅಪರೂಪದ ರಾಜಕಾರಣಿ. ದಿಗ್ಗಜ ನಾಯಕ. ರಾಜಕೀಯ, ಸಾಮಾಜಿಕ, ಸಹಕಾರ ,ಶೈಕ್ಷಣಿಕ ,ಧಾರ್ಮಿಕ ಹೀಗೆ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿ ಅವಿಸ್ಮರಣೆಯ ಕೊಡುಗೆ ಕೊಟ್ಟ ಖಂಡ್ರೆ ಅವರು ಬಸವ ಭೂಮಿ ಕಲ್ಯಾಣ ನಾಡಿನ ಹೆಮ್ಮೆಯ ಪುತ್ರ.

**ಭೀಮಣ್ಣ ಖಂಡ್ರೆಯವರದು ಉದಾತ್ತವಾದ ಬದುಕು.**

ನಡೆದು ಬಂದ ದಾರಿ ಹೋರಾಟದ ಸಾಹಸಗಾಥೆ. ಭಾಲ್ಕಿ ಹಿರೇಮಠದ ಶ್ರೀ ಚನ್ನಬಸವ ಪಟ್ಟದ್ದೇವರು ತೋರಿದ ಗುರು ಪಥದಲ್ಲಿ ತಮ್ಮ ಸೇವಾ ಜೀವನದ ಹೆಜ್ಜೆ ಗುರುತುಗಳನ್ನು ಮೂಡಿಸಿದವರು. ರಾಷ್ಟ್ರೀಯ, ರಾಜ್ಯದ, ರಾಜಕೀಯ ಚಳುವಳಿಗಳಲ್ಲಿ ತ್ರಿಕರಣ ಶುದ್ದಿಯಿಂದ ಸೇವೆಗೈದವರು. ಹೈದರಾಬಾದ್ ನಿಜಾಮರಿಂದ ಭಾಲ್ಕಿ ಪ್ರದೇಶವನ್ನು ಕರ್ನಾಟಕಕ್ಕೆ ತರುವಲ್ಲಿ ಹಗಲಿರಲು ಸೆಣಸಾಡಿದರು. ವೀರಶೈವ ಸಮಾಜದ ರಾಷ್ಟ್ರೀಯ ಅಧ್ಯಕ್ಷರಾಗಿ ಮಹಾಸಭೆಯನ್ನು ಪ್ರಗತಿ ಮುಖವಾಗಿ ತೆಗೆದುಕೊಂಡು ಹೋದರು. ಶಿಕ್ಷಣ ಪ್ರೇಮಿಗಳು, ಬಸವ ಜಯಂತಿಯಂದು ರಾಜ್ಯ ಸರ್ಕಾರ ರಜೆ ಘೋಷಿಸಲು ಕಾರಣರಾದವರು. ಗುಲ್ಬರ್ಗ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ ಪದವಿಭೂಷಿತರಾದವರು ಭೀಮಣ್ಣ ಖಂಡ್ರೆ.

- ಲಿಂ. ಚನ್ನಬಸವ ಪಟ್ಟದ್ದೇವರ ಪರಮ ಶಿಷ್ಯ ಡಾ. ಭೀಮಣ್ಣ ಖಂಡ್ರೆ. ಸುಮಾರು ಐದು ದಶಕಗಳ ಇವರಿಬ್ಬರು ಸೇರಿ ಮಾಡಿದ ಕೆಲಸಗಳು ಐತಿಹಾಸಿಕ. ಪೂಜ್ಯರ ಮಾತು ಖಂಡ್ರೆ ಯವರಿಗೆ ಆದೇಶವಾಗಿತ್ತು. ಇವರ ಗುರು ಶಿಷ್ಯರ ಸಂಬಂಧ ಮಾದರಿ. ಬಸವಕಲ್ಯಾಣದಲ್ಲಿ ಆಧುನಿಕ ಅನುಭವ ಮಂಟಪ ಕಟ್ಟಲು ಶ್ರೀಗಳು ಮಾಡಿದ ಸಂಕಲ್ಪ ಈಡೇರಿಸಿದವರು ಖಂಡ್ರೆ. ಇದಕ್ಕೆ ಬೇಕಾದ ಹಣ ಸಂಗ್ರಹಿಸಿದ್ದಲ್ಲದೆ ಸ್ವತಹ ತಲೆಯ ಮೇಲೆ ಸಿಮೆಂಟ್ ,ಕಾಂಕ್ರೀಟ್ ಹೊತ್ತು ಕೆಲಸ ಮಾಡಿ ೧೯೮೧ರಲ್ಲಿ ಅನುಭವ ಮಂಟಪ ಉದ್ಘಾಟಿಸಿದರು. ಇವರ ಈ ಕೆಲಸದ ಫಲವೇ ಇಂದು ಬಸವಕಲ್ಯಾಣದಲ್ಲಿ ಸರ್ಕಾರ ೭೨೫ ಕೋಟಿ ರೂಪಾಯಿ ವೆಚ್ಚದಲ್ಲಿ ನೂತನ ಅನುಭವ ಮಂಟಪ ಮಾಡುತ್ತಿದೆ.
- ----------------------
- ಆಹಾರ ಪದ್ಧತಿ– ಶುದ್ಧ ಶಾಖಾಹಾರಿ. ತರಕಾರಿ ಹಣ್ಣು ಸೇವನೆಗೆ ಆದ್ಯತೆ. ಹೊರಗಿನ ಊಟ ನಿಷೇಧ. ಇದೇ ಇವರ ಆರೋಗ್ಯಕರ, ಗಟ್ಟಿ ಮುಟ್ಟಿನ ಶತಾಯುಷಿ ಬದುಕಿನ ರಹಸ್ಯವೂ ಹೌದು. ಸಮಾಜಸೇವೆಗಾಗಿ ಸಾರ್ಥಕ ಬದುಕು ಸವೆಸಿದ ಪ್ರಖರ ರಾಷ್ಟ್ರವಾದಿ ನಿಧನದಿಂದ ಅಭಿಮಾನಿಗಳ ಆಕ್ರಂದನ ಮುಗಿಲು ಮುಟ್ಟಿದೆ.

**ಶರಣರ ನಡೆ ,ನುಡಿ, ತತ್ವ ಆದರ್ಶಗಳನ್ನೇ ತಮ್ಮ ಬದುಕಿನ ಧ್ಯೇಯವನ್ನಾಗಿಸಿಕೊಂಡವರು.**

ತಮ್ಮ ತಂದೆಯ ಕಾಲಾ ನಂತರದಲ್ಲಿ ತಾಯಿಯವರ ಮಾರ್ಗದರ್ಶನ ದಲ್ಲಿಯೇ ತಮ್ಮ ಬದುಕನ್ನು ಅರಳಿಸಿಕೊಂಡು ಅವರ ಮಾತಿನಂತೆ ಸಮಾಜದ ಏಳಿಗೆಗಾಗಿ ತಮ್ಮನ್ನು ತಾವು ಅರ್ಪಿಸಿಕೊಂಡವರು. ಮಹಾತ್ಮ ಗಾಂಧೀಜಿ, ನೇತಾಜಿ, ಬಾಲಗಂಗಾಧರ್ ತಿಲಕರ ಭಾಷಣಗಳು ಇವರ ಮೇಲೆ ಪ್ರಭಾವ ಬೀರಿ ರಾಷ್ಟ್ರೀಯ ಚಳುವಳಿಯಲ್ಲಿ ಧುಮುಕುವಂತೆ ಮಾಡಿದವು. ಹೀಗೆ ಹೋರಾಟದ ನಾಯಕತ್ವದ ಗುಣಗಳನ್ನು ಬೆಳೆಸಿಕೊಂಡು ಮುಂದೆ ಹೈದರಾಬಾದ್ ಕರ್ನಾಟಕ ಭಾಗದ ಸ್ವತಂತ್ರಕ್ಕಾಗಿ ನಿಜಾಮರ ವಿರುದ್ಧ ಬಂಡೆದ್ದು ಹೈದರಾಬಾದ್ ಸಂಸ್ಥಾನದಲ್ಲಿಯೇ ತ್ರಿವರ್ಣ ಧ್ವಜವನ್ನು ಹಾರಿಸಿ ಅದಕ್ಕಾಗಿ ಜೈಲಿಗೂ ಹೋಗಿ ಬಂದದ್ದು ಅವರಲ್ಲಿರುವ ದೇಶಾಭಿಮಾನವನ್ನು ತೋರುತ್ತದೆ.

**ರಾಜಕೀಯದಲ್ಲಿ ಒಬ್ಬ ಆದರ್ಶ ತತ್ವ ನಿಷ್ಠ ರಾಜಕಾರಣಿ**

ಇವರು ತಮ್ಮ ಹಿತಕ್ಕಿಂತ ಸಮಾಜದ ಹಿತವನ್ನೇ ಬಯಸಿದವರು. ವೀರಶೈವರಿಗೆ ಮರಣ ಶಾಸನದಂತಿದ್ದ ಹಾವನೂರು ಆಯೋಗದ ವರದಿಯನ್ನು ಕರ್ನಾಟಕದ ವಿಧಾನಸಭೆಯಲ್ಲಿ ಸುಟ್ಟು ಅನ್ಯಾಯದ ಆ ವರದಿಯನ್ನು ಧಿಕ್ಕರಿಸಿದ ಛಲಗಾರ. ವೀರಶೈವ ಶರಣರ ಚರಿತ್ರೆಯನ್ನು ತಿರುಚಿ ಬರೆದ ಹಲವಾರು ಸಾಹಿತ್ಯ ಕೃತಿಗಳ ವಿರುದ್ಧವು ನಿರಂತರ ಹೋರಾಟ ಮಾಡಿದವರು. ಸ್ವತಂತ್ರ ಹೋರಾಟಗಾರರು, ಶರಣ ತತ್ವ ಚಿಂತಕ, ಕರ್ಮಯೋಗಿ ಸರಳ ಸಜ್ಜನಿಕೆಯ ಸಾಕಾರ ಮೂರ್ತಿಗಳು.

- **ದೀನದಲಿತರ, ಬಡವರ ಉದ್ಧಾರಕ**

ದೀನದಲಿತರ, ಬಡವರ ಉದ್ಧಾರಕ್ಕಾಗಿ ಹಾಗೂ ಸ್ವತಂತ್ರ ಮತ್ತು ಕರ್ನಾಟಕ ಏಕೀಕರಕ್ಕಾಗಿ ಹೋರಾಡಿ ಸೆರೆಮನೆ ವಾಸ ಅನುಭವಿಸಿ ಸದಾ ನ್ಯಾಯಕ್ಕಾಗಿ ದುಡಿಯುತ್ತಾ ಸಮಾಜದ ಏಳಿಗೆಗಾಗಿ ಹೋರಾಡಿದವರು. ತಮ್ಮ ಜಿಲ್ಲೆ ಜನರ ಹಿತದ ಪ್ರಶ್ನೆ ಬಂದಾಗ ಹಲವು ಬಾರಿ ಮಂತ್ರಿ ಪದವಿಯನ್ನು ತ್ಯಾಗ ಮಾಡಿ ಅಧಿಕಾರ ಪದವಿಗಿಂತ ಜನಸೇವೆ ಹಿತ ಪ್ರಮುಖ ಎಂದು ಪ್ರತಿಪಾದಿಸಿದವರು.

- **ದೇವರಾಜ್ ಅರಸು ಮುಖ್ಯಮಂತ್ರಿಯಾಗಿದ್ದಾಗ ಮುಖ್ಯಮಂತ್ರಿಯ ಕುರ್ಚಿಯ ಮೇಲೆ ಕುಳಿತು ಪ್ರತಿಭಟನೆ ಮಾಡಿದ್ದು ಇತಿಹಾಸ ವಾಯಿತು.**

# ಲೋಕನಾಯಕ ಡಾ. ಭೀಮಣ್ಣ ಖಂಡ್ರೆ ಅಸ್ತಂಗತ | ಹೋರಾಟದ ಯುಗಕ್ಕೆ ವಿರಾಮ



### ಜನ ಹಿತಕ್ಕಾಗಿ ಬದುಕಿದ ಜೀವ .

ಮಾಜಿ ಸಚಿವರು, ವೀರಶೈವ ಲಿಂಗಾಯತ ಮಹಾಸಭೆಯ ಮಾಜಿ ಅಧ್ಯಕ್ಷರು ಹಾಗೂ ಲಿಂಗಾಯತ ಸಮಾಜದ ಮೇರು ನಾಯಕ, ಲೋಕನಾಯಕ ಡಾ. ಭೀಮಣ್ಣ ಖಂಡ್ರೆ ಅವರು ಇಂದು ವಯೋಸಹಜವಾಗಿ ವಿಧಿವಶರಾದ ಸುದ್ದಿ ಅತ್ಯಂತ ನೋವು ಮತ್ತು ದುಃಖವನ್ನುಂಟುಮಾಡಿದೆ. ಅವರ ಅಗಲಿಕೆ ಲಿಂಗಾಯತ ಸಮಾಜಕ್ಕೆ ಮಾತ್ರವಲ್ಲ, ಇಡೀ ರಾಜ್ಯದ ಸಾಮಾಜಿಕ–ರಾಜಕೀಯ ವಲಯಕ್ಕೆ ತುಂಬಲಾರದ ನಷ್ಟವಾಗಿದೆ.

ಸ್ವಾತಂತ್ರ್ಯಹೋರಾಟಗಾರರು, ನಿಜಾಮನ ಆಡಳಿತದ ದಮನಕಾರಿ ನೀತಿಗಳ ವಿರುದ್ಧ ಧೈರ್ಯವಾಗಿ ಹೋರಾಡಿದ ಯೋಧ, ಏಕೀಕರಣ ಚಳುವಳಿಯ ಮುಂಚೂಣಿಯ ನಾಯಕ–ಇಂತಹ ಅನೇಕ ಗುರುತುಗಳೊಂದಿಗೆ ಕಲ್ಯಾಣ ಕರ್ನಾಟಕದ ಇತಿಹಾಸದಲ್ಲಿ ಅಚ್ಚಳಿಯದ ಹೆಸರು ಭೀಮಣ್ಣ ಖಂಡ್ರೆ. ಅವರ ತ್ಯಾಗ, ಹೋರಾಟ ಮತ್ತು ದೂರದೃಷ್ಟಿಯ ಫಲವಾಗಿ ಇಂದು ಬೀದರ ಸೇರಿದಂತೆ ಕಲ್ಯಾಣ ಕರ್ನಾಟಕದ ಬಹುತೇಕ ಭಾಗಗಳು ಕರ್ನಾಟಕದ ಅವಿಭಾಜ್ಯ ಅಂಗಗಳಾಗಿ ಉಳಿದಿವೆ.

ನಿಜಾಮನ ಆಡಳಿತದ ಕಾಲದಲ್ಲಿ ಹೈದರಾಬಾದ್ ಸಂಸ್ಥಾನದಡಿ ಇದ್ದ ಈ ಪ್ರದೇಶಗಳ ಜನರು ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕವಾಗಿ ಅನೇಕ ಅನ್ಯಾಯಗಳನ್ನು ಅನುಭವಿಸುತ್ತಿದ್ದರು. ಇಂತಹ ಸಂಕಷ್ಟಕರ ಸಂದರ್ಭದಲ್ಲಿ ಭೀಮಣ್ಣ ಖಂಡ್ರೆ ಅವರು ಭಯವಿಲ್ಲದೆ ಜನರನ್ನು ಸಂಘಟಿಸಿ, ಸ್ವಾತಂತ್ರ್ಯ ಮತ್ತು ಸಮಾನತೆಯ ಸಂಕಲ್ಪದೊಂದಿಗೆ ಹೋರಾಟಕ್ಕೆ ಇಳಿದರು. ನಿಜಾಮನ ಆಡಳಿತದ ವಿರುದ್ಧ ನಡೆದ ಚಳುವಳಿಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡ ಅವರು, ಜನಮನದಲ್ಲಿ ಸ್ವಾಭಿಮಾನ ಹಾಗೂ ಸ್ವರಾಜ್ಯದ ಆಸೆಯನ್ನು ಬೆಳಗಿಸಿದ ನಾಯಕನಾಗಿದ್ದರು.

ಭಾಷೆ, ಸಂಸ್ಕೃತಿ ಮತ್ತು ಭೌಗೋಳಿಕ ಸಮೀಪತೆಯ ಆಧಾರದ ಮೇಲೆ ಕನ್ನಡ ನಾಡಿನೊಂದಿಗೆ ಏಕೀಕರಣವಾಗಬೇಕು ಎಂಬ ಬಲವಾದ ನಂಬಿಕೆ ಅವರ ಹೋರಾಟದ ಕೇಂದ್ರಬಿಂದುವಾಗಿತ್ತು. ಏಕೀಕರಣ ಚಳುವಳಿಯಲ್ಲಿ ಅವರು ವಹಿಸಿದ ಪಾತ್ರ ಅತ್ಯಂತ ಮಹತ್ವದ್ದಾಗಿದ್ದು, ಕಲ್ಯಾಣ ಕರ್ನಾಟಕದ ಭಾಗಗಳು ಬೇರೆ ರಾಜ್ಯಕ್ಕೆ ಸೇರದೆ ಕರ್ನಾಟಕದಲ್ಲೇ ಉಳಿಯಲು ಅವರ ಹೋರಾಟ ನಿರ್ಣಾಯಕ ಕಾರಣವಾಯಿತು. ವಿಶೇಷವಾಗಿ ಬೀದರ ಜಿಲ್ಲೆಯು ಕರ್ನಾಟಕದ ಭಾಗವಾಗಿರುವುದಕ್ಕೆ ಅವರ ಅಚಲ ಹೋರಾಟ, ರಾಜಕೀಯ ಜಾಗೃತಿ ಮತ್ತು ಜನಸಂಘಟನೆ ಪ್ರಮುಖ ಪಾತ್ರವಹಿಸಿದೆ. ಸೇವೆ, ತ್ಯಾಗ, ನಿಷ್ಠೆ ಮತ್ತು ಮಾನವೀಯ ಮೌಲ್ಯಗಳೇ ಅವರ ಜೀವನದ ಉಸಿರಾಗಿದ್ದವು. ಅಧಿಕಾರದಲ್ಲಿದ್ದಾಗಲೂ ಅಧಿಕಾರವಿಲ್ಲದ ಸಮಯದಲ್ಲಿಯೂ ಅವರು ಸದಾ ಜನರ ನಡುವೆಯೇ ಇದ್ದು, ಜನರಿಗಾಗಿ ಬದುಕಿದರು. ಕಾಯಕ, ದಾಸೋಹ ಮತ್ತು ಸಮಾನತೆ ಎಂಬ ಲಿಂಗಾಯತ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡು, ಅವುಗಳನ್ನು ಸಮಾಜದ ನೈಜ ಬದುಕಿನಲ್ಲಿ ಅನುಷ್ಠಾನಗೊಳಿಸಲು ಅಚಲವಾಗಿ ಶ್ರಮಿಸಿದ ಮಹಾನ್ ಚೇತನ ಅವರು.

ಮಾಜಿ ಸಚಿವರಾಗಿ ಅವರು ಜನಸಾಮಾನ್ಯರ ಸಂಕಷ್ಟಗಳಿಗೆ ಸ್ಪಂದಿಸಿದ ರೀತಿ, ವೀರಶೈವ ಲಿಂಗಾಯತ ಮಹಾಸಭೆಯ ಅಧ್ಯಕ್ಷರಾಗಿ ಸಮಾಜಕ್ಕೆ ನೀಡಿದ ದಿಕ್ಕು, ಶಿಕ್ಷಣ ಮತ್ತು ಸಾಮಾಜಿಕ ನ್ಯಾಯದ ಕುರಿತು ಅವರ ದೂರದೃಷ್ಟಿ ಇಂದಿಗೂ ಸ್ಮರಣೀಯ. ಸರಳತೆ, ಸೌಜನ್ಯ ಮತ್ತು ನೈತಿಕ ರಾಜಕಾರಣ ಅವರ ವ್ಯಕ್ತಿತ್ವದ ಅಡಿಗಲ್ಲಾಗಿತ್ತು. ಜನರ ವಿಶ್ವಾಸವೇ ತಮ್ಮ ಅತಿ ದೊಡ್ಡ ಸಂಪತ್ತೆಂದು ನಂಬಿದ ಅಪರೂಪದ ನಾಯಕನಾಗಿದ್ದರು.

### ಸಮಾಜದ ಉದ್ಧಾರಕ್ಕಾಗಿ ಅವತರಿಸಿದ ದಿವ್ಯ ಚೇತನ

ಸ್ವಾತಂತ್ರ್ಯ ನಂತರವೂ ಭೀಮಣ್ಣ ಖಂಡ್ರೆ ಅವರು ತಮ್ಮ ಹೋರಾಟವನ್ನು ನಿಲ್ಲಿಸಲಿಲ್ಲ. ರಾಜಕೀಯ ಮತ್ತು ಸಾಮಾಜಿಕ ಜೀವನದಲ್ಲಿ ಸದಾ ಈ ಪ್ರದೇಶದ ಹಿಂದುಳಿತತನ, ಅಭಿವೃದ್ಧಿಯ ಕೊರತೆ ಮತ್ತು ಜನಸಾಮಾನ್ಯರ ಸಮಸ್ಯೆಗಳ ವಿರುದ್ಧ ಧ್ವನಿ ಎತ್ತಿದರು. ಕಲ್ಯಾಣ ಕರ್ನಾಟಕಕ್ಕೆ ನ್ಯಾಯ, ಸಂಪನ್ಮೂಲಗಳು ಮತ್ತು ಸಮಾನ ಅವಕಾಶಗಳು ದೊರಕಬೇಕು ಎಂಬುದು ಅವರ ಜೀವನಪೂರ್ತಿ ಹೋರಾಟವಾಗಿತ್ತು. ಭೀಮಣ್ಣ ಖಂಡ್ರೆ ಅವರ ಜೀವನವು ಕೇವಲ ಒಂದು ವ್ಯಕ್ತಿಯ ಸಾಧನೆಯ ಕಥೆಯಲ್ಲ; ಅದು ಒಂದು ಪ್ರದೇಶದ ಅಸ್ತಿತ್ವ, ಗೌರವ ಮತ್ತು ಭವಿಷ್ಯವನ್ನು ರೂಪಿಸಿದ ಹೋರಾಟದ ಇತಿಹಾಸ. ಇಂದು ನಾವು ಕರ್ನಾಟಕದ ನಕ್ಷೆಯಲ್ಲಿ ಬೀದರ ಮತ್ತು ಕಲ್ಯಾಣ ಕರ್ನಾಟಕವನ್ನು ಹೆಮ್ಮೆಯಿಂದ ಕಾಣುತ್ತಿರುವುದಾದರೆ, ಅದರ ಹಿಂದೆ ಭೀಮಣ್ಣ ಖಂಡ್ರೆ ಅವರಂತಹ ಹೋರಾಟಗಾರರ ತ್ಯಾಗ ಮತ್ತು ದೃಢಸಂಕಲ್ಪ ಅಡಗಿದೆ. ಅವರ ಹೋರಾಟ, ಅವರ ಕನಸು ಮತ್ತು ಅವರ ತ್ಯಾಗ ಸದಾ ನಮ್ಮೆಲ್ಲರಿಗೂ ಪ್ರೇರಣೆಯಾಗಿರಲಿ. ಕಲ್ಯಾಣ ಕರ್ನಾಟಕದ ಇತಿಹಾಸದಲ್ಲಿ ಭೀಮಣ್ಣ ಖಂಡ್ರೆ ಎಂಬ ಹೆಸರು ಸದಾಕಾಲ ಸ್ವರ್ಣಾಕ್ಷರಗಳಲ್ಲಿ ಉಳಿಯುತ್ತದೆ.

# ಲೋಕಕ್ಕೆ ಬೆಳಕಾದ ಮಹಾನ್ ಯೋಗಿ : ವೇಮನ



- **ಮಲ್ಲಮ್ಮ ನುಡಿ ವಾರ್ತೆ ಬೀದರ:**

ಆಂಧ್ರಪ್ರದೇಶದ ತೆಲುಗಿನ ಶ್ರೇಷ್ಠವಚನಕಾರ, ಕವಿ, ಸಮಾಜ ಚಿಂತಕರು, ಮಾನವ ಕುಲದ ಏಳಿಗೆಗೆ ಶ್ರಮಿಸಿದವರು. ಕನ್ನಡದಲ್ಲಿ ಸರ್ವಜ್ಞ, ತಮಿಳಿನಲ್ಲಿ ತಿರುವಳ್ಳುವರ್ ,ತೆಲುಗಿನಲ್ಲಿ ವೇಮನ.

ಇಂದಿನ ಆಂಧ್ರಪ್ರದೇಶದ ಭಾಗವಾಗಿರುವ ರಾಯಲಸೀಮೆ 14–15ನೇ ಶತಮಾನದಲ್ಲಿ ರೆಡ್ಡಿ ರಾಜವಂಶಜರ ಆಡಳಿತಕ್ಕೊಳಪಟ್ಟಿತ್ತು. ರಾಜವಂಶ ಸಂಜಾತರಾದ ಮಹಾಯೋಗಿ ವೇಮನ ಕವಿಯಾಗಿ, ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಸಮಾಜ ಸುಧಾರಕರಾಗಿ, ಜನರಾಡುವ ಭಾಷೆಯಲ್ಲಿ ಬೋಧನೆ ಮಾಡಿದ ಜನಪರ ನಿಲುವಿನ ರಾಜಯೋಗಿ. ಅಲ್ಲದೆ, ಸಿದ್ಧ ಸಾಧಕರು ಸತ್ಯದ ಸಾಕ್ಷಾತ್ಕಾರ ಹೊಂದಿ ಲೋಕಕ್ಕೆ ಬೆಳಕಾದವರು ಅವರು. ಅದಕ್ಕಾಗಿಯೇ ಲೋಕದ ಪುಣ್ಯಪುರುಷರಲ್ಲಿ ಗಣ್ಯರು. ವೇಮನ ಕಾಲದ ಬಗ್ಗೆ ಪಂಡಿತರಲ್ಲಿ ಒಮ್ಮತವಿಲ್ಲ. ಕಾಪು (ರೆಡ್ಡಿ) ಕುಲದಲ್ಲಿ ಹುಟ್ಟಿದ್ದನ್ನು ಅವರೇ ತಮ್ಮ ಕವನದಲ್ಲಿ ಹೇಳಿಕೊಂಡಿರುವುದರಿಂದ ಅವರ ಜೀವನದ ಬಗ್ಗೆ ಅಸ್ಪಷ್ಟತೆ ಇಲ್ಲವಾಗಿದೆ. ವೇಮನ ಅದ್ಭುತ ಜನಪರ ಕವಿ. ತಮಿಳರಿಗೆ ತಿರುವಳ್ಳುವರ, ಕನ್ನಡಗರಿಗೆ ಸರ್ವಜ್ಞ, ಮರಾಠಿಗರಿಗೆ ನಾಮದೇವ, ಹಿಂದಿ ಭಾಷಿಕರಿಗೆ ಕಬೀರ ಇದ್ದಂತೆ ತೆಲುಗು ಭಾಷಿಕರಿಗೆ ವೇಮನ. ವೇಮನ ತೆಲುಗು ಭಾಷಿಕರ ಆರಾಧ್ಯದೈವರಾಗಿ, ದೈತ್ಯಪ್ರತಿಭೆಯ ಚಿಂತಕರಾಗಿ, ಸಮಾಜ ಸುಧಾರಕರಾಗಿ, ಕ್ರಾಂತಿಕಾರಿಯಾಗಿ ನೀಡಿದ ಕೊಡುಗೆ ಅಸಾಧಾರಣ.

ಕೊಂಡುವೀಡು ರಾಜವಂಶಸ್ಥರಾದ ಕುಮಾರಗಿರಿರಡ್ಡಿ ತನ್ನ ದೌರ್ಬಲ್ಯದಿಂದಾಗಿ ದೊರೆತನ ಕಳೆದುಕೊಂಡ ನಂತರ ಮೂಗಬೆಂತಪಲ್ಲೆ ಗ್ರಾಮದ ಹೊರವಲಯದ ತೋಟದ ಮನೆಯಲ್ಲಿ ನೆಲೆಸಿದ್ದರು. ಕುಮಾರಗಿರಿರಡ್ಡಿ ಹಾಗೂ ಕುಂತರ ಮಲ್ಲಮ್ಮ ದಂಪತಿಯ ಮೂರನೇ ಸಂತಾನವೇ ವೇಮನ. ವೇಮನ ಬಾಲ್ಯಕಾಲವನ್ನು ಕೊಂಡುವೀಡುವಿನಲ್ಲಿಯೇ ಕಳೆದರು. ಇವರು ಸೋಮಶೇಖರ ಗುರುಗಳಲ್ಲಿ ವಿದ್ಯಾರ್ಜನೆ ಮಾಡಿದರು. ಯುವಕ ವೇಮನರ



ಬಾಳಿನ ಆಗುಹೋಗುಗಳನ್ನು ಸಹೃದಯದಿಂದ ಅರಿಯುವ ಶಕ್ತಿ ಅತ್ತೆ ನರಸಾಂಬೆಗೆ ಮಾತ್ರವಿತ್ತು. ನರಸಾಂಬೆ ವೇಮನರನ್ನು ರಾಜಮಹೇಂದ್ರಿಗೆ ಕರೆಯಿಸಿಕೊಂಡು ಶಿಲ್ಪಗಾರದ ನೇತೃತ್ವ ನೀಡಿದಳು. ಶ್ರೀಶೈಲದಲ್ಲಿ ನೆಲೆಸಿದ ತಾಯಿ ಕುಂತರ ಮಲ್ಲಮ್ಮನ ಆಶೀರ್ವಾದ ದೊರೆಯಿತು. ರಾಜ್ಯದ ಶಿಲ್ಪ ಕಾರ್ಯಾಗಾರದ ವರಿಷ್ಠನಾದ ಬಳಿಕ ಅಲ್ಲಿಯೇ ಕಾವಿಣಟಿಜಜಜಿಟಿಜರ್ಜಕರಾಗಿ, ಅಧ್ಯಾತ್ಮಿಯಾಗಿದ್ದ ಅಭಿರಾಮಜ್ಜನ ಸ್ನೇಹ ಇಬ್ಬರಲ್ಲಿ ಗಾಢವಾದ ವಿಶ್ವಾಸ ಬೆಳೆಸಿತು. ಶ್ರೀಗುರು ಲಿಂಬಿಕಾ ಶಿವಯೋಗಿ ಅವರ ವಿಶೇಷ ಅನುಗ್ರಹಕ್ಕೆ ವೇಮನರು ಪಾತ್ರರಾದರು. ಲಿಂಬಿಕಾ ಶಿವಯೋಗಿ ಗುರುಗಳು ವಾಸವಾಗಿದ್ದ ಗವಿಯೊಳಗೆ ವೇಮನರು ಕೆಲ ವರ್ಷ ನೆಲೆಸಿದರು.

ಯೋಗಿ ವೇಮನ ಕೊಂಡುವೀಡು ಗಡಿಯಾಚೆ ನಡೆದರು. ಹೋದ ಕಡೆಗಳಲ್ಲಿ ಪವಾಡಗಳನ್ನು ಮೆರೆದರು. ಅವರಿಂದ ಸುಂದರಕಾವ್ಯ ಸೃಷ್ಟಿಯಾಯಿತು. ಸ್ನೇಹಿತ ಅಭಿರಾಮಯ್ಯ ಜೊತೆಗಾರನಾಗಿ ವೇಮನ ಕಾವ್ಯ ಆನಂದಿಸಿದ ರಾಮರಡ್ಡಿ ಹಾಗೂ ನೀಲಕಂಠರು ಸಾಹಿತ್ಯ ಸಂಗ್ರಹ ಮಾಡಿದರು.

ಬೇಕು ಎನಲು ಬರದು, ಬೇಡವೆನಲು ಬಿಡದು ಪೂರ್ವ ಕರ್ಮಕಂಟಿ ಫಲವು ಮಿಂಚು ಹೃದಯದಲ್ಲಿ ದುಃಖ ಪಡದಿರುವುದೇ ಧರ್ಮ ಎಂದು ಸಾರಿದ ವೇಮನ ದೇಹದೊಳಗಿರುವ ದೇವರನ್ನು ಕಂಡುಕೊಂಡವರೇ ಬುದ್ಧಿವಂತರೆಂದರು. ಸಂಚಾರದಲ್ಲಿ ವೇಮನ ತಮ್ಮನ್ನು ತಾವು ಪರಿಚಯಿಸಿಕೊಂಡಿದ್ದು ಹೀಗೆ– 'ಊರು ಕೊಂಡುವೀಡು. ವಾಸ ಪಶ್ಚಿಮಬೀದಿ ಮಾರ್ಗ, ಚಿಂತಪಲ್ಲೆ ಮೊದಲ ಮನೆ' ಎಂದರು. ತಮ್ಮ ದಿಗಂಬರತ್ವವನ್ನು ಸಮರ್ಥಿಸಿಕೊಳ್ಳುತ್ತ ತಾಯಿಯುದರದಿಂದ ತಾನು ಜನಿಸಿದಾಗ ಅಡಿಗಿಲ್ಲ ಬಟ್ಟೆ ಅಂತ್ಯಕ್ಕಿಲ್ಲ. ನಡುವೆ ಬಟ್ಟೆಯುಡಲು ನಗೆಪಾಟಲವೇ? ಎಂದು ಪ್ರಶ್ನಿಸಿ ಉತ್ತರಿಸಿದ್ದಾರೆ.

ವೇಮನರು ಕೊಂಡು ವೀಡುವಿನಿಂದ ಬಹುದೂರ ಹೋಗಬಯಸಿದರು. ಅವರು ತಂಜಾವೂರವರೆಗೆ ಸಂಚರಿಸಿದರು. ಈ ಸಂಚಾರ ಕಾಲದಲ್ಲಿ ಹಲವಾರು ಗ್ರಾಮಗಳಲ್ಲಿ ನೆಲೆಸಿದರು. ಸಾಮಾನ್ಯವಾಗಿ ಧರ್ಮಶಾಲೆಗಳಲ್ಲಿ ಇರುತ್ತಿದ್ದರು. ಅಲ್ಲಿಗೆ ಬರುವ ಭಕ್ತರ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದರು. ಯೋಗಿ ವೇಮನರು ಗಹನವಾದ ತತ್ತ ನವನ್ನು ಸರಳವಾದ ರೀತಿಯಲ್ಲಿ ಜನತೆಗೆ ತಿಳಿಸಿದರು. ವೇಮನ ರಚಿಸಿದ್ದು ಬರೀ ಕಾವ್ಯವಲ್ಲ. ತೆಲುಗು ಭಾಷೆಯಲ್ಲಿ ಕಾವ್ಯಕ್ಕೆ ಬಳಸಿದ್ದು ಆಟವೆಂದಿ ಕಂದ, ತೇಟ, ಸೀಸ, ಛಂದಸ್ಸುಗಳನ್ನು. ಆಟವೆಂದಿ ಅಂದರೆ ನೃತ್ಯಗಾರ್ತಿ. ನೃತ್ಯಗಾರ್ತಿಯ ಸೌಂದರ್ಯ, ನೃತ್ಯದಲ್ಲಿನ ಲಯ, ತಾಳ, ನಿನಾದಿಸುತ್ತದೆ. ಅದೇ ರೀತಿ ವೇಮನರ ಸಾಹಿತ್ಯ. ಇವರ ಸಾಹಿತ್ಯದಲ್ಲಿ ಸಂಗೀತವಿದೆ. ಎಲ್ಲವೂ ಲಯಬದ್ಧ, ತಾಳಬದ್ಧವಾಗಿದೆ.

ಕೆಲವು ಆಲೋಚಕರು ವೇಮನರನ್ನು ನಾಸ್ತಿಕರೆಂದರೆ, ಕೆಲವರು ಆಸ್ತಿಕರೆಂದು ಬಣ್ಣಿಸುತ್ತಾರೆ. ಆದರೆ ವೇಮನ ಅಂತರ್ಯದೊಳಗಿರುವ ಪರಮಾತ್ಮನನ್ನು ನೋಡಲು ತಮ್ಮ ಕಾವ್ಯದ ಮೂಲಕ ಸದಾ ಪ್ರೇರಣೆ ನೀಡುತ್ತ ಜನಜಾಗೃತಿ ಕೆಲಸದಲ್ಲಿ ತೊಡಗಿಕೊಂಡಿದ್ದರು. ವೇಮನರ ಕಾವ್ಯವು ನಿರಂತರ ಚಿಮ್ಮುವ ಕಾರಂಜಿಯೇ ಹೌದು. ಅಲ್ಲಿ ದೊರೆಯುವುದು ಆನಂದ ಹಾಗೂ ಜ್ಞಾನ.

ಪಂಚಭೂತಗಳು, ಪರಮ ಇಂದ್ರಿಯಗಳು ಸಂಚರಿಸುತಿರಲು ಜಗತ್ ಉಂಟು, ಸಂಚರಿಸದಿರಲು ಜಗವಂತಾಗುವುದು ವಿಶ್ವದಾಭಿರಾಮ ಕೇಳು ವೇಮ 'ಪಂಚಮಹಾಭೂತಗಳಿಂದ ನಮ್ಮ ಶರೀರವಾಗಿದೆ. ಪೃಥ್ವಿ, ಜಲ, ಅಗ್ನಿ, ವಾಯು ಹಾಗೂ ಆಕಾಶ ಇವೇ ಪಂಚಮಹಾಭೂತಗಳು. ಪಂಚಜ್ಞಾನೇಂದ್ರಿಗಳೆಂದರೆ ಕಣ್ಣು, ಕಿವಿ, ಮೂಗು, ನಾಲಿಗೆ ಹಾಗೂ ಸ್ಪರ್ಶ. ಗಂಧರಸ, ರೂಪ, ಸ್ಪರ್ಶ ಹಾಗೂ ಶಬ್ದಗಳಿಂದನೇ ನಮ್ಮ ವ್ಯವಹಾರ ಜೊತೆಗೆ ಪಂಚ ಕರ್ಮೇಂದ್ರಿಯಗಳು ಬುದ್ಧಿ, ಮನಸ್ಸು ಇವೆಲ್ಲ ಜೊತೆಗೂಡಿ ಕೆಲಸ ನಿರ್ವಹಿಸುತ್ತವೆ ಈ ಸಂಕಲ್ಪ ವಿಕಲ್ಪಗಳೇ ಹೋಗಿಬರುವ ಜಗತ್ತು. ಈ ಜಗದ ಅನುಭವವೇ ಲೋಕಾನುಭವ. ಮಾನವ ಮನವೇ ಒಂದು ಅದ್ಭುತ. ಅದರಲ್ಲಿ ಸಂಕಲ್ಪ ವಿಕಲ್ಪಗಳು ಏಳದಂತೆ ನೋಡಿಕೊಂಡರೆ ಮನಸ್ಸು ಶಾಂತವಾಗಿರುತ್ತದೆ. ಶಾಂತಮನಸ್ಸಿನಲ್ಲಿ ಸತ್ಯ ಪ್ರತಿಬಿಂಬಸಬಹುದು' ಎಂಬುದು ಯೋಗಿಗಳ ಸಿದ್ಧ ಅನುಭವ.

ಜನವರಿ 19 ರಂದು ವೇಮನರ ಜಯಂತಿ. ವೇಮನ ಸಾಹಿತ್ಯವನ್ನು ಕನ್ನಡಿಗರಿಗೆ ಮನೆ–ಮನೆಗೆ ಮುಟ್ಟಿಸುವ ಶ್ರದ್ಧಾಪೂರ್ವಕ ಪ್ರಯತ್ನ ಮಾಡಿದವರು ವೇಮನಪ್ರಿಯ ಸೋಮ ಹುಲಕೋಟಿಯ ದಿ. ಎಸ್.ಆರ್. ಪಾಟೀಲರು. ಅವರು ವೇಮನರ ಸುಮಾರು 4000 ವಚನಗಳನ್ನು ಹುಡುಕಿ ಕನ್ನಡಕ್ಕೆ ಭಾಷಾಂತರಿಸಿ, ಅವುಗಳಿಗೆ ಟಿಪ್ಪಣಿ, ವಿಮರ್ಶೆಗಳನ್ನೆಲ್ಲ ನೀಡಿ, ವೇಮನ ಸಾಹಿತ್ಯ ಕನ್ನಡಿಗರಿಗೆ ದೊರಕುವಲ್ಲಿ ಅಪಾರವಾದ ಕೊಡುಗೆ ನೀಡಿದರು.

**ಮಾಣಿಕರೆಡ್ಡಿ ಕೌಡಾಳೆ.**
**(ಪ್ರಧಾನ ಸಂಪಾದಕ)**



ಸಚಿವ ಜಮೀರ್ ಅಹಮದ್ ಖಾನ್ ಅವರು ಹರಿಯಾಣದ ಕೈತಾಲ್‌ನಲ್ಲಿ ಎ ಐ ಸಿಸಿ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆ ವಾಲಾ ಅವರನ್ನು ಭೇಟಿ ಮಾಡಿ ಹುಬ್ಬಳ್ಳಿ ಮನೆಗಳ ಹಂಚಿಕೆ ಕಾರ್ಯಕ್ರಮಕ್ಕೆ ಅಹ್ವಾನ ನೀಡಿದರು. ಕಾಂಗ್ರೆಸ್ ಮುಖಂಡ ದೀಪಕ್ ಚಿಂಚೋರೆ ಉಪಸ್ಥಿತರಿದ್ದರು.

# 24ನೇ ಪುಣೆ ಫಿಲ್ಮ್ ಫೆಸ್ಟ್: ವನ್ಯ ಚಿತ್ರದ ಯಶಸ್ವಿ ಪ್ರದರ್ಶನ

- ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

**ಬೆಂಗಳೂರು:** ವಿಶ್ವದಾದ್ಯಂತದಿಂದ ಬಂದ 1200 ಚಿತ್ರಗಳೊಳಗೆ ಆಯ್ಕೆಯಾದ ಏಕೈಕ ಕನ್ನಡ ಚಿತ್ರವಾಗಿ 'ವನ್ಯ' ಚಲನಚಿತ್ರ 24ನೇ ಪುಣೆ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ (PIFF) ಯಶಸ್ವಿ ಪ್ರದರ್ಶನಗೊಂಡು ಗಮನಸೆಳೆದಿದೆ.

ಮಹಾರಾಷ್ಟ್ರದ ಅಧಿಕೃತ ಚಲನಚಿತ್ರ ವೇದಿಕೆಯಾದ ಈ ಮಹೋತ್ಸವದಲ್ಲಿ ಇಂಡಿಯನ್ ಸಿನೆಮಾ ವಿಭಾಗದಲ್ಲಿ ನಿರ್ದೇಶಕ ಬಡಿಗೇರ್ ದೇವೇಂದ್ರ ನಿರ್ದೇಶನದ ವನ್ಯ ಚಲನಚಿತ್ರ ಶುಕ್ರವಾರ ಪ್ರದರ್ಶನಗೊಂಡು ಪ್ರೇಕ್ಷಕರಿಂದ ಮೆಚ್ಚುಗೆ ಪಡೆಯಿತು.

















Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)